# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 9 ಮಂಗಳವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 54 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




### ರಾಜ್ಯಸಭೆ ಟಿಕೆಟ್ ನಿರಾಕರಣೆ; ಕಾಂಗ್ರೆಸ್ ವಾಗ್ದಾಳಿ

# ಹೆಚ್.ಡಿ.ದೇವೇಗೌಡರಿಗೆ ಬಿಜೆಪಿ ದ್ರೋಹ

**ಬೆಂಗಳೂರು:** ಜೆಡಿ(ಎಸ್) ವರಿಷ್ಠ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ರಾಜ್ಯಸಭೆ ಟಿಕೆಟ್ ನಿರಾಕರಿಸಿದ ಬಿಜೆಪಿಯನ್ನು ಆಡಳಿತಾರೂಢ ಕಾಂಗ್ರೆಸ್ ಸೋಮವಾರ ತೀವ್ರ ತರಾಟೆಗೆ ತೆಗೆದುಕೊಂಡಿದೆ.

ರಾಜ್ಯಸಭಾ ಟಿಕೆಟ್ ನಿರಾಕರಿಸುವ ಮೂಲಕ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ಬಿಜೆಪಿ ದ್ರೋಹವೆಸಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಇದು ಗೌಡರಿಗೆ ಮಾತ್ರವಲ್ಲ ಸಮಸ್ತ ಕನ್ನಡಿಗರಿಗೆ ಮಾಡಿದ ದ್ರೋಹ ಎಂದು ವಾಗ್ದಾಳಿ ನಡೆಸಿದ್ದಾರೆ.

ಕರ್ನಾಟಕದಿಂದ ನಾಲ್ಕು ಸ್ಥಾನಗಳಲ್ಲಿ ಒಂದನ್ನು ಗೆಲ್ಲಬಹುದಾದ ಸ್ಥಾನಕ್ಕೆ ಬಿಜೆಪಿ ರಾಜ್ಯಸಭೆ ಅಭ್ಯರ್ಥಿಯಾಗಿ ಪ್ರೊ. ಎಂ. ನಾಗರಾಜ ಅವರನ್ನು ಭಾನುವಾರ ತಡರಾತ್ರಿ ಘೋಷಿಸಿದೆ. ವಿಧಾನಸಭೆಯಲ್ಲಿನ ಪ್ರಸ್ತುತ ಬಲದ ಆಧಾರದ ಮೇಲೆ, ಜೂನ್ 18 ರಂದು ಚುನಾವಣೆ ನಡೆಯಲಿರುವ ನಾಲ್ಕು ಸ್ಥಾನಗಳಲ್ಲಿ ಬಿಜೆಪಿ ಒಂದನ್ನು ಗೆಲ್ಲಬಹುದಾಗಿದೆ. ದೇವೇಗೌಡ ಅವರು ಸೇರಿದಂತೆ ನಾಲ್ವರು ರಾಜ್ಯಸಭಾ ಸದಸ್ಯರು ಈ ತಿಂಗಳ ಕೊನೆಯಲ್ಲಿ ನಿವೃತ್ತರಾಗುತ್ತಿರುವುದರಿಂದ ಈ ಚುನಾವಣೆ ನಡೆಯುತ್ತಿದೆ.

ಬಿಜೆಪಿಯ ಮಿತ್ರಪಕ್ಷವಾದ ಜೆಡಿ(ಎಸ್) ತನ್ನ ವರಿಷ್ಠ ದೇವೇಗೌಡ ಅವರನ್ನು ರಾಜ್ಯಸಭೆಗೆ ಮತ್ತೆ ನಾಮನಿರ್ದೇಶನ ಮಾಡುತ್ತದೆ ಎಂದು ನಿರೀಕ್ಷಿಸುತ್ತಿತ್ತು. ಈ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಸಹ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮುಂದೆ ■6ನೇ ಪುಟಕ್ಕೆ



### ಗೌಡರ ರಾಜಕೀಯ ಕೊನೆಗೊಳ್ಳುವ ಸಾಧ್ಯತೆ

ಬೆಂಗಳೂರು, ಜೂ. 8(ಕೆಎಂಶಿ)– ವಿಧಾನಸಭೆಯಿಂದ ರಾಜ್ಯಸಭೆಗೆ ಪ್ರೊ. ಎಂ.ನಾಗರಾಜ್ ಅವರನ್ನು ಬಿಜೆಪಿ ಕಣಕ್ಕಿಳಿಸಿರುವ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಚುನಾವಣಾ ರಾಜಕೀಯ ಬಹುತೇಕ ಕೊನೆಗೊಂಡಂತಾಗಿದೆ.

ಕಳೆದ ಬಾರಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ದೇವೇಗೌಡ ರಾಜ್ಯಸಭೆ ಪ್ರವೇಶಿಸಿದ್ದರು. ರಾಜ್ಯಸಭಾ ಸದಸ್ಯತ್ವ ಅವಧಿ ಕೊನೆಗೊಳ್ಳುವ ವೇಳೆ ದೇವೇಗೌಡ ಅವರು ಬಿಜೆಪಿ ಬೆಂಬಲಿತ ಜೆಡಿಎಸ್ ಅಭ್ಯರ್ಥಿ ಆಗುವರೆಂಬ ನಿರೀಕ್ಷೆ ಇತ್ತು. ಪ್ರಧಾನಿ ಮೋದಿ ಅವರೇ ದೇವೇಗೌಡ ಅವರನ್ನು ರಾಜ್ಯ ಸಭೆಯಲ್ಲಿ ಉಳಿಸಿಕೊಳ್ಳುತ್ತಾರೆ ಎಂಬ ಮಾತುಗಳು ಕೇಳಿಬಂದಿದ್ದವು. ದೆಹಲಿ ರಾಜಕೀಯ ಅಂಗಳದಲ್ಲೂ ಈ ವಿಷಯ ಭಾರೀ ಚರ್ಚೆಯಲ್ಲಿತ್ತು. ■6ನೇ ಪುಟಕ್ಕೆ

### ಕುಮಾರಸ್ವಾಮಿಗೆ ತಂದೆಗಿಂತ ಸಚಿವ ಸ್ಥಾನವೇ ಹೆಚ್ಚಾಯ್ತಾ!

**ಬೆಂಗಳೂರು:** ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡರಿಗೆ ಎನ್‌ಡಿಎ ರಾಜ್ಯಸಭಾ ಟಿಕೆಟ್ ನಿರಾಕರಿಸಿರುವುದನ್ನು ಅಸ್ತ್ರವಾಗಿಸಿಕೊಂಡಿರುವ ಕಾಂಗ್ರೆಸ್ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ತರಾಟೆಗೆ ತೆಗೆದುಕೊಂಡಿದೆ.



ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ, ಕೇವಲ ಮಂತ್ರಿ ಕುರ್ಚಿಗೆ ಅಂಟಿಕೊಳ್ಳಲು ಕುಮಾರಸ್ವಾಮಿ ಅವರು ತಮ್ಮ ತಂದೆ, ಮಾಜಿ ಪ್ರಧಾನಿಗಳಿಗೆ ಆಗುತ್ತಿರುವ ನಿರಂತರ ಅಪಮಾನಗಳನ್ನು ಸಹಿಸಿಕೊಳ್ಳುತ್ತಿದ್ದಾರೆ ಎಂದು ಲೇವಡಿ ಮಾಡಿದ್ದಾರೆ. ಬಿಜೆಪಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ರಾಜ್ಯಸಭಾ ನಾಮನಿರ್ದೇಶನವನ್ನು ನಿರಾಕರಿಸಿದೆ. ಮಾಜಿ ಪ್ರಧಾನಿಗಿಂತ ಬಿಜೆಪಿಯ ಜಿಲ್ಲಾ ಮಟ್ಟದ ಕಟ್ಟಡ ನಿರ್ಮಾಣ ಉಸ್ತುವಾರಿಯಾಗಿದ್ದ ರಾಜ್ಯ ಉಪಾಧ್ಯಕ್ಷ ಎಂ. ನಾಗರಾಜ ಅವರಿಗೆ ಮಣೆ ಹಾಕಲಾಗಿದೆ. ಯಾವುದೇ ಬೆಲೆ ತೆತ್ತಾದರೂ ■6ನೇ ಪುಟಕ್ಕೆ

### ಫಿಲಿಪೈನ್ಸ್‌ನಲ್ಲಿ ಪ್ರಬಲ ಭೂಕಂಪ: 35ಕ್ಕೂ ಅಧಿಕ ಸಾವು

#### ಸುನಾಮಿ ಎಚ್ಚರಿಕೆ



**ಮನಿಲಾ:** ಫಿಲಿಪೈನ್ಸ್‌ನ ದಕ್ಷಿಣ ಭಾಗದಲ್ಲಿ ಸೋಮವಾರ ಸಂಭವಿಸಿದ ಪ್ರಬಲ 7.8 ತೀವ್ರತೆಯ ಭೂಕಂಪದಿಂದ ಕನಿಷ್ಠ 35 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಭೂಕಂಪದ ಪರಿಣಾಮ ಹಲವಾರು ಕಟ್ಟಡಗಳು ಕುಸಿದು ಬಿದ್ದಿದ್ದು, ಫಿಲಿಪೈನ್ಸ್ ಸೇರಿದಂತೆ ಇಂಡೋನೇಷ್ಯಾ, ತೈವಾನ್, ಪಲಾವ್, ಪಪುವಾ ನ್ಯೂಗಿನಿಯಾ ಮತ್ತು ಜಪಾನ್ ದೇಶಗಳಲ್ಲಿ ಸುನಾಮಿ ಎಚ್ಚರಿಕೆ ಘೋಷಿಸಲಾಗಿದೆ. ಅಮೆರಿಕದ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆ ಪ್ರಕಾರ, ಭೂಕಂಪವು ಫಿಲಿಪೈನ್ಸ್‌ನ ಮಿಂಡನಾವೊ ದ್ವೀಪದ ಸರಂಗಾನಿ ಪ್ರಾಂತ್ಯದಿಂದ ಸುಮಾರು 24 ಕಿಲೋಮೀಟರ್ ಪಶ್ಚಿಮ ಭಾಗದ ಸಮುದ್ರದಲ್ಲಿ ಸಂಭವಿಸಿದೆ. ಭೂಕಂಪದ ತೀವ್ರತೆ ಹೆಚ್ಚು ಇದ್ದ ಕಾರಣ ಹಲವು ಪ್ರದೇಶಗಳಿಗೆ ಭೂಕಂಪನ ಅನುಭವವಾಗಿದೆ. ಜನರಲ್ ಸ್ಯಾಂಟೋಸ್ ನಗರ ಪೊಲೀಸ್ ಅಧಿಕಾರಿಗಳ ಪ್ರಕಾರ, ಇದೂವರೆಗೆ 35 ಮಂದಿ ಸಾವು ದೃಢಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿರುವುದರಿಂದ ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ. ಅನೇಕ ಕಟ್ಟಡಗಳು ■6ನೇ ಪುಟಕ್ಕೆ

# ಮೈಸೂರಲ್ಲಿ 1.40 ಕೋಟಿ ಮೌಲ್ಯದ ಭಾರೀ ಪ್ರಮಾಣದ ಗಾಂಜಾ ವಶ

### ಗೂಡ್ಸ್ ವಾಹನದಲ್ಲಿ ತೆಂಗಿನ ಸಸಿಗಳ ನಡುವೆ ಸಾಗಿಸುತ್ತಿದ್ದ ನಾಲ್ವರು ಖತರ್ನಾಕ್‌ಗಳ ಬಂಧನ

ಮೈಸೂರು, ಜೂ.8 (ಎಂಟಿವೈ)– ಮೈಸೂರಿನ ಸಿಸಿಬಿ ಪೊಲೀಸರು ಸೋಮವಾರ ಮುಂಜಾನೆ ಮಿಂಚಿನ ಕಾರ್ಯಾಚರಣೆ ನಡೆಸಿ, ಗಾಂಜಾ ಸಾಗಿಸುತ್ತಿದ್ದ ಜಾಲವನ್ನು ಭೇದಿಸಿದ್ದಾರೆ. ಗೂಡ್ಸ್ ವಾಹನದಲ್ಲಿ ಸಾಗಿಸುತ್ತಿದ್ದ 1.40 ಕೋಟಿ ಮೌಲ್ಯದ 280 ಕೆಜಿ ಗಾಂಜಾ ವಶಪಡಿಸಿಕೊಂಡು, ನಾಲ್ವರನ್ನು ಬಂಧಿಸಿದ್ದಾರೆ.

ಕಳೆದ ಮಧ್ಯರಾತ್ರಿ ದೊರೆತ ಖಚಿತ ಮಾಹಿತಿ ಮೇರೆಗೆ ಮೈಸೂರು–ಬನ್ನೂರು ಮುಖ್ಯ ರಸ್ತೆಯ ನಾಡನಹಳ್ಳಿ ಗೇಟ್ ಬಳಿ ಕಾದು ಕುಳಿತಿದ್ದ ಸಿಸಿಬಿ ಪೊಲೀಸರು, ಕಾರೊಂದರ ಬೆಂಗಾವಲಿನಲ್ಲಿ ತೆಂಗಿನ ಸಸಿಗಳನ್ನು ತುಂಬಿಕೊಂಡು ಬಂದ ಐಷರ್ ಗೂಡ್ಸ್ ವಾಹನ(ಕೆಎ–51, ಎಎ 3352) ತಡೆದು ಪರಿಶೀಲಿಸಿದಾಗ ಈ ಜಾಲ ಬಯಲಿಗೆ ಬಂದಿದೆ. ಗೂಡ್ಸ್ ವಾಹನದಲ್ಲಿದ್ದ ಭಾರೀ ಪ್ರಮಾಣದ ಗಾಂಜಾ ಮತ್ತು ವೋಕ್ಸ್‌ವ್ಯಾಗನ್ ಕಾರು(ಕೆಎ–01, ಎಂಜಿ–1491) ವಶಕ್ಕೆ ಪಡೆದು ನಾಲ್ವರನ್ನು ಬಂಧಿಸಿದ್ದಾರೆ.

ಬಂಧಿತರನ್ನು ಮೈಸೂರಿನ ತನ್ವೀರ್ ಸೇಠ್ ನಗರದ ಎರಡನೇ ಹಂತದ ನಿವಾಸಿ ಮೊಹಮದ್ ರಫೀಕ್ ಮಗ ಮೊಹಮದ್ ಜುಬೇರ್(32), ■6ನೇ ಪುಟಕ್ಕೆ




ಸಿಸಿಬಿ ಪೊಲೀಸರು ದಾಳಿ ನಡೆಸಿ ವಶಪಡಿಸಿಕೊಂಡ ಗಾಂಜಾವನ್ನು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಡಾ.ಹರ್ಷ ಪ್ರಿಯಂವದ, ಕೆ.ಎಸ್.ಸುಂದರ್‌ರಾಜ್ ವೀಕ್ಷಿಸುತ್ತಿರುವುದು.



ಜುಬೇರ್ | ಅಹಮದ್ | ಸಿದ್ದಿಕಿ | ಮುಜಾವರ್

#### ದೊಡ್ಡಮಟ್ಟದ ದಾಳಿ

‘ಮೈಸೂರು ಭಾಗದಲ್ಲಿ ಸಿಸಿಬಿ ನಡೆಸಿದ ದೊಡ್ಡಮಟ್ಟದ ದಾಳಿ ಇದಾಗಿದೆ. 1.40 ಕೋಟಿ ರೂ. ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದು ಇದೇ ಮೊದಲನೆ ಪ್ರಕರಣವಾಗಿದೆ. ಈ ಹಿಂದೆ ಮಾದಕ ವಸ್ತುಗಳನ್ನು ವಶಕ್ಕೆ ಪಡೆದ ಪ್ರಕರಣ ನಡೆದಿತ್ತು. ಆದರೆ, ಇಷ್ಟು ದೊಡ್ಡಮೊತ್ತ ಗಾಂಜಾ ಮುಟ್ಟುಗೋಲು ಹಾಕಿಕೊಂಡಿರುವುದು ಇದೇ ಮೊದಲು.



### ರಾಜ್ಯದಾದ್ಯಂತ ಖಾಸಗಿ ಬಸ್ ದರ ಶೇ. 5 ರಿಂದ ಶೇ. 8ರಷ್ಟು ಏರಿಕೆ

**ಉಡುಪಿ:** ತೈಲ, ಟೋಲ್ ದರ ಏರಿಕೆ ಸೇರಿದಂತೆ ದೈನಂದಿನ ವೆಚ್ಚ ಏರಿಕೆಯಾಗಿರುವುದರಿಂದ ರಾಜ್ಯದಾದ್ಯಂತ ಖಾಸಗಿ ಬಸ್‌ಗಳ ಪ್ರಯಾಣ ದರವನ್ನು ಶೇ 5ರಿಂದ ಶೇ 8 ರಷ್ಟು ಏರಿಕೆ ಮಾಡಿದ್ದು, ಹೊಸ ದರವು ಜೂನ್ 9ರಿಂದ ಜಾರಿಗೆ ಬರಲಿದೆ ಎಂದು ಕರ್ನಾಟಕ ರಾಜ್ಯ ಮಜಲು ವಾಹನ (ಸ್ಟೇಜ್ ಕ್ಯಾರಿಯರ್) ಬಸ್ ಮಾಲೀಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಕುಯಿ ಲಾಡಿ ಸುರೇಶ್ ನಾಯಕ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ರಾಜ್ಯ ಸರ್ಕಾರದ ಅಧಿಸೂಚನೆಯಂತೆ ಸೆಸ್ ಹಾಕಲು ಅವಕಾಶವಿದ್ದು, ಅದರಂತೆ ದರ ಏರಿಕೆ ಮಾಡಲಾಗಿದೆ.

### ಮುಂಗಾರು ಮುನ್ನೆಚ್ಚರಿಕಾ ಕ್ರಮವಾಗಿ ಕೊಡಗಿಗೆ ಬಂದಿಳಿದ ಎನ್‌ಡಿಆರ್‌ಎಫ್ ಯೋಧರ ತಂಡ




ಕೊಡಗಿಗೆ ಬಂದಿಳಿದಿರುವ ಎನ್‌ಡಿಆರ್‌ಎಫ್ ಯೋಧರ ತಂಡ.


ಮಡಿಕೇರಿ, ಜೂ.8–ಜಿಲ್ಲೆಗೆ ಮುಂಗಾರು ಪ್ರವೇಶಿಸಿದ ಬೆನ್ನಲ್ಲೆ ಮಳೆಗಾಲದ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಎನ್‌ಡಿಆರ್‌ಎಫ್ ಯೋಧರ ತಂಡ ಕೊಡಗಿಗೆ ಆಗಮಿಸಿದೆ. ಆಂಧ್ರಪ್ರದೇಶದ ವಿಜಯವಾಡದಲ್ಲಿರುವ 10ನೇ ಬೆಟಾಲಿಯನ್ ಎನ್‌ಡಿಆರ್‌ಎಫ್ ತಂಡದ ರ‍್ಯಾಪಿಡ್ ರೆಸ್ಪಾನ್ ಟೀಮ್‌ನ 30 ಮಂದಿ ಯೋಧರು ನಗರದ ಮುತ್ತಪ್ಪ ದೇವಾಲಯ ಬಳಿ ಇರುವ ಸಹಕಾರ ಇಲಾಖೆ ತರಬೇತಿ ಸಂಸ್ಥೆ ಸಭಾಂಗಣದಲ್ಲಿ ವಾಸ್ತವ್ಯ ಹೂಡಿದ್ದಾರೆ.

ಎನ್‌ಡಿಆರ್‌ಎಫ್ ಟೀಂ ಕಮಾಂಡರ್ ಇನ್ಸ್‌ಪೆಕ್ಟರ್ ರಾಮ್‌ಭಜ್ ರಕ್ಷಣಾ ತಂಡದ ನೇತೃತ್ವ ವಹಿಸಿದ್ದಾರೆ. ಮೊದಲ ಹಂತವಾಗಿ 30 ಯೋಧರು ತಂಡ ಆಗಮಿಸಿದ್ದು, ಅಗತ್ಯವಿದ್ದಲ್ಲಿ ಹೆಚ್ಚುವರಿ ಯೋಧರನ್ನೂ ಕರೆಸಿಕೊಳ್ಳಲಾಗುತ್ತದೆ. ಜೂನ್ ತಿಂಗಳಲ್ಲಿ ಜಿಲ್ಲೆಯಲ್ಲಿ ನಿಯೋಜನೆಯಾಗಿರುವ ಈ ಯೋಧರು ತಂಡ ಮಳೆಗಾಲ ಸಂಪೂರ್ಣ ಮುಕ್ತಾಯಗೊಂಡ ಬಳಿಕ ಜಿಲ್ಲೆಯಿಂದ ನಿರ್ಗಮಿಸಲಿದೆ. ಈಗಾಗಲೇ ಜಿಲ್ಲಾಡಳಿತದ ಜೊತೆಯಲ್ಲಿ ಸಭೆ ನಡೆಸಿರುವ ಎನ್‌ಡಿಆರ್‌ಎಫ್ ಅಧಿಕಾರಿಗಳು, ಸಂಭಾವ್ಯ ಭೂ ಕುಸಿತ, ಪ್ರವಾಹ, ರಸ್ತೆ ಬಂದ್ ಸಾಧ್ಯತೆ ಇರುವ ಪ್ರದೇಶಗಳ ಕುರಿತು ಮಾಹಿತಿ ಪಡೆದುಕೊಂಡಿದೆ.

**ಸುರಕ್ಷಾ ಪರಿಕರಗಳು:** ಎರಡು ಲಾರಿಗಳಲ್ಲಿ ಆಗಮಿಸಿರುವ ಎನ್‌ಡಿಆರ್‌ಎಫ್ ■6ನೇ ಪುಟಕ್ಕೆ

### ಮಾಜಿ ಸಿಎಂ ಬಿಎಸ್‌ವೈಗೆ ಬಿಗ್ ರಿಲೀಫ್

**ಬೆಂಗಳೂರು:** ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪಗೆ ಹೈಕೋರ್ಟ್ ನಿಂದ ಬಿಗ್ ರಿಲೀಫ್ ಸಿಕ್ಕಿದೆ. ಕೆಲ ಷರತ್ತುಗಳನ್ನು ಹೈಕೋರ್ಟ್ ಸಡಿಲಗೊಳಿಸಿದೆ.



ಈ ಹಿಂದೆ ಹೈಕೋರ್ಟ್ ಜಾಮೀನು ನೀಡಿದ್ದ ವೇಳೆ ಕೋರ್ಟ್ ಅನುಮತಿ ಇಲ್ಲದೆ ರಾಜ್ಯ ಬಿಟ್ಟು ಹೋಗುವಂತಿಲ್ಲ ಎಂದು ಷರತ್ತು ವಿಧಿಸಿತ್ತು. ಇದೀಗ ಆ ಷರತ್ತು ಕೋರ್ಟ್ ತೆಗೆದು ಹಾಕಿದೆ. ಈ ಆದೇಶದಿಂದಾಗಿ ಬಿಎಸ್‌ವೈ ಯಾವುದೇ ಕಾನೂನಾತ್ಮಕ ಅಡೆತಡೆ ಅಥವಾ ಪೂರ್ವಾನುಮತಿ ಅಗತ್ಯವಿಲ್ಲದೆ ದೇಶಾದ್ಯಂತ ಮುಕ್ತವಾಗಿ ಸಂಚರಿಸಬಹುದಾಗಿದೆ.



# ಪಾಲಿಕೆ, ಸೆಸ್ಕ್ ಪ್ರಾಯೋಜಕತ್ವದಲ್ಲಿ ಮೈಸೂರು ರಸ್ತೆಗಳಲ್ಲಿ ಗುಂಡಿ ಉತ್ಸವ

● ಮಳೆಗಾಲದಲ್ಲೇ ಗುಂಡಿ ತೆಗೆಯುವುದರ ಹಿಂದಿನ ಉದ್ದೇಶ ನಿಮಗೇನಾದರೂ ಗೊತ್ತಾ!?
● ಮೈಸೂರು ಪಾಲಿಕೆ, ಸೆಸ್ಕ್ ಪೈಪೋಟಿಗಿಳಿದು ರಸ್ತೆಗಳ ಅಗೆದು–ಬಗೆದು ಹಾಕುತ್ತಿರುವುದಕ್ಕೆ ಸಾರ್ವಜನಿಕರ ಆಕ್ರೋಶ ● ಬೇಸಿಗೆ ಕಾಲದಲ್ಲಿ ಇಂತಹ ಕಾಮಗಾರಿ ಮಾಡದೇ ಇರಲು ಕಾರಣವಾದರೂ ಏನಿರಬಹುದು!?



ಮೈಸೂರು, ಜೂ.8(ಎಂಕೆ)– ಮೈಸೂರು ನಗರದ ರಸ್ತೆಗಳಲ್ಲಿ 'ಗುಂಡಿ ಉತ್ಸವ' ನಡೆಯುತ್ತಿದ್ದು, ಮೈಸೂರು ಪಾಲಿಕೆ, ಸೆಸ್ಕ್, ಅಮಾಯಕ ಜನರ ಇವುಗಳಲ್ಲಿ ದೂಡಿ, ಆಳ–ಅಗಲ ಅಳತೆ ಮಾಡುತ್ತಿವೆ.!

ಸ್ವಚ್ಛ ನಗರಿ ಪಟ್ಟ ಕಳೆದುಕೊಂಡಿರುವ ಮೈಸೂರು, ಗುಂಡಿಗಳ ನಗರಿ ಕುಖ್ಯಾತಿ ಪಡೆಯುವ ನಿಟ್ಟಿನಲ್ಲಿ ನಗರಪಾಲಿಕೆ ಹಾಗೂ ಸೆಸ್ಕ್(ಚೆಸ್ಕಾಂ) ಅಧಿಕಾರಿಗಳು ಹಗಲಿರುಳು ಶ್ರಮಿಸುತ್ತಿದ್ದು, ಒಂದಷ್ಟು ಜನರನ್ನು ಸ್ವರ್ಗಸ್ಥರನ್ನಾಗಿಸುವ ಹುನ್ನಾರ ನಡೆಸುತ್ತಿದ್ದಾರೆ...



ವಿಶ್ವ ಮಟ್ಟದಲ್ಲಿ ಗಮನ ಸೆಳೆದಿರುವ ಅರಮನೆ ನಗರಿಯನ್ನು ದಿನೇ ದಿನೆ ಹಾಳು ಮಾಡುತ್ತಿರುವ ನಗರ ಪಾಲಿಕೆ ಮತ್ತು ಚೆಸ್ಕಾಂ ಅಧಿಕಾರಿ–ಸಿಬ್ಬಂದಿಗಳು, ನಾ ಮುಂದು... ತಾ ಮುಂದು ಎಂದು ಪೈಪೋಟಿಗೆ ಬಿದ್ದಂತೆ ಸಿಕ್ಕ ಸಿಕ್ಕ ರಸ್ತೆಗಳನ್ನು ಅಗೆದು ಜನ ಸಾಮಾನ್ಯರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ.

ಮಳೆಗಾಲ ಆರಂಭವಾಗಿದೆ. ಈ ಸಂದರ್ಭದಲ್ಲಿ ರಸ್ತೆಗಳನ್ನು ಅಗೆಯುವುದು ಸೂಕ್ತವಲ್ಲ. ಗುಂಡಿ ಬಿದ್ದರೆ ಸಾವು–ನೋವು ಸಂಭವಿಸಬಹುದು ಎಂಬ ಕನಿಷ್ಠ ಪರಿಜ್ಞಾನವೂ ಇಲ್ಲದ ಅವಿವೇಕಿಗಳಂತೆ ವರ್ತಿಸುತ್ತಿರುವ ಅಧಿಕಾರಿಗಳು, ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದ್ದಾರೆ.

**ಗುಂಡಿ ನಗರ:** ಹಾರ್ಡಿಂಜ್ ವೃತ್ತ, ನಾರಾಯಣ ಶಾಸ್ತ್ರಿ ಮತ್ತು ಧನ್ವಂತರಿ ರಸ್ತೆ ಜಂಕ್ಷನ್, ಬನ್ನಿಮಂಟಪ ಜೋಡಿ ತೆಂಗಿನಮರ ರಸ್ತೆ, ಯಾದವಗಿರಿ ಸರ್ಕಲ್, ಪಡುವಾರಹಳ್ಳಿ, ಅಂಬರೀಶ್ ರಸ್ತೆ, ಕಾಳಿದಾಸ ರಸ್ತೆ, ಗೋಕುಲಂ ಮುಖ್ಯ ರಸ್ತೆ, ಡಾ. ಸುಧಾಮೂರ್ತಿ ರಸ್ತೆ ಹೀಗೆ ಮೈಸೂರಿನ ಬಹುತೇಕ ರಸ್ತೆಗಳಲ್ಲಿ ಚೆಸ್ಕಾ ನಿಂದ ಯುಜಿ ಕೇಬಲ್ ಕಾಮಗಾರಿಗೆ ಪಾಲಿಕೆಯಿಂದ ಯುಜಿಡಿ ಕಾಮಗಾರಿಗೆಂದು ರಸ್ತೆಗಳ ಅಗೆದು–ಬಗೆದು ಹಾಕಲಾಗುತ್ತಿದೆ. ದಿಕ್ಕು–ದೆಸೆ ಇಲ್ಲದ ಕಾಮಗಾರಿ ಹೆಸರಿನಲ್ಲಿ ರಸ್ತೆಗಳನ್ನು ಗುಂಡಿಮಯವನ್ನಾಗಿಸಲಾಗುತ್ತಿದೆ.

**ಗಂಡಾಂತರಕ್ಕೆ ದಾರಿ:** ವಾರದ ಹಿಂದಷ್ಟೇ ಸುರಿದ ಭಾರೀ ಮಳೆಗೆ ಮೈಸೂರಿನ ರಸ್ತೆಗಳಲ್ಲಾಗಿರುವ ಗುಂಡಿಗಳಲ್ಲಿ ಮಂಡಿಯುದ್ದ ನೀರು ತುಂಬಿ, ವಾಹನಗಳು ಸಂಚರಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ಕೆಲವೆಡೆ ವಾಹನಗಳ ■6ನೇ ಪುಟಕ್ಕೆ

ಮೈಸೂರು ಮಿತ್ರ ಮಂಗಳವಾರ 9 ಜೂನ್ 2026

# ಸರ್ದಾರ್ ವಲ್ಲಭಭಾಯಿ ಪಟೇಲ್‌ನಗರಕ್ಕೆ ಶೀಘ್ರದಲ್ಲೇ ಕಾವೇರಿ ನೀರಿನ ಸೌಕರ್ಯ

**ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ**



ಮೈಸೂರಿನ ಸರ್ದಾರ್ ವಲ್ಲಭಭಾಯಿ ಪಟೇಲ್‌ನಗರ ನಿವಾಸಿಗಳ ಕುಂದು ಕೊರತೆ ಆಲಿಸಿದ ಸಂಸದ ಯದುವೀರ್, ಮೂಲ ಸೌಕರ್ಯ ಕಲ್ಪಿಸುವ ಭರವಸೆ ನೀಡಿದರು.

ಮೈಸೂರು, ಜೂ. 8– ಮೈಸೂರಿನ ಸರ್ದಾರ್ ವಲ್ಲಭಭಾಯಿ ಪಟೇಲ್‌ನಗರ ಬಡಾವಣೆಗೆ ಮೂಲಭೂತ ಸೌಕರ್ಯ ಕಲ್ಪಿಸುವ ಭರವಸೆಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೀಡಿದ್ದಾರೆ.

ಬಡಾವಣೆಗೆ ಕಾವೇರಿ ನೀರು ಕಲ್ಪಿಸುವುದರ ಜೊತೆಗೆ ರಸ್ತೆಗಳ ಡಾಂಬರೀಕರಣ, ತಿಪ್ಪಯ್ಯನಕೆರೆಗೆ ಕಲುಷಿತ ನೀರು ಸೇರದಂತೆ ಕ್ರಮ ಕೈಗೊಳ್ಳುವುದಾಗಿ ಸಂಸದ ಯದುವೀರ್ ಭರವಸೆ ನೀಡಿದರು.

ಶೀಘ್ರದಲ್ಲೇ ತಿಪ್ಪಯ್ಯನ ಕೆರೆಗೆ ನಗರ ಒನ್ ಯೋಜನೆ ಅನುಷ್ಠಾನಕ್ಕೆ ತಂದು ಅಭಿವೃದ್ಧಿಗೊಳಿಸುವುದಾಗಿ ಎಂದು ತಿಳಿಸಿದರು.

ನಂತರ ಕಾವೇರಿ ನೀರನ್ನು ಆದಷ್ಟು ಬೇಗ ಪೂರ್ವ ವಲಯದ ಬಡಾವಣೆಗಳಿಗೆ ಕಲ್ಪಿಸುವುದಾಗಿ ತಿಳಿಸಿದ್ದಾರೆ. ರಸ್ತೆಗಳು ಡಾಂಬರೀಕರಣಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಿ ಬೇಕಾಗಿರುವ ಅನುದಾನವನ್ನ ಬಡಾವಣೆಗೆ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.

ಈ ವೇಳೆ ಬಿಜೆಪಿ ಮೈಸೂರು ನಗರ ಅಧ್ಯಕ್ಷ ಎಲ್.ನಾಗೇಂದ್ರ, ಬಿಜೆಪಿ ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲೋಹಿತ್ ದೊರೆಸ್ವಾಮಿ, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಪೈ.ಟಿ.ರವಿ, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ಥಾಮಸ್, ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕೆರೆಹಳ್ಳಿ ಬಿ.ದೊರೆಸ್ವಾಮಿ, ಸಮಾಜ ಸೇವಕರಾದ ಶಿವಸ್ವಾಮಿ, ಶಿವಬಸಪ್ಪ, ಮಾದಪ್ಪ, ದೇವಪ್ಪಜಿ, ಶ್ರೀಕಂಠಮೂರ್ತಿ, ಸ್ವಾಮಿ, ಮಹೇಶ್, ಮಾದಪ್ಪ, ಪಿ.ಎಂ. ಮಹದೇವಸ್ವಾಮಿ, ಗಂಗಾಧರ, ಮುದ್ದುಬಸವಣ್ಣ, ದೇವರಾಜಪ್ಪ ಇನ್ನಿತರರಿದ್ದರು.

## ಬೋಗಾದಿಯಲ್ಲಿ ಕೆನರಾ ಬ್ಯಾಂಕ್ ಶಾಖೆ ಉದ್ಘಾಟನೆ



ಬೋಗಾದಿಯಲ್ಲಿ ಕೆನರಾ ಬ್ಯಾಂಕ್‌ನ ಶಾಖೆಯ ಉದ್ಘಾಟನಾ ಸಂದರ್ಭ.

ಮೈಸೂರು, ಜೂ.8–ಕೆನರಾ ಬ್ಯಾಂಕ್‌ನ ಬೋಗಾದಿ ಶಾಖೆಯನ್ನು ಮುಖ್ಯ ಮಹಾಪ್ರಬಂಧಕ ಅರುಣ್ ಕುಮಾರ್ ಮಿಶ್ರಾ ಉದ್ಘಾಟಿಸಿದರು.

ಡಿಜಿಎಂ ಮತ್ತು ಪ್ರಾದೇಶಿಕ ಮುಖ್ಯಸ್ಥ ಮನೋಜ್ ಕುಮಾರ್ ರಾಮನ್, ಚೀಲ ಗೌತಮ್ (ಎಜಿಎಂ), ಲಖನ್ ಪ್ರತಾಪ್ ಸಿಂಗ್ (ಡಿಎಂ), ಶ್ರೀಮತಿ ಎಸ್.ಎ. ರೂಪಶ್ರೀ ಹಾಗೂ ಶಾಖಾ ವ್ಯವಸ್ಥಾಪಕ ಕಾರ್ತಿಕ್ ಈ ವೇಳೆ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಡಿಜಿಎಂ ಮತ್ತು ಪ್ರಾದೇಶಿಕ ಮುಖ್ಯಸ್ಥ ಮನೋಜ್‌ಕುಮಾರ್ ರಾಮನ್, ಶೀಲಾ ಗೌತಮ್ (ಎಜಿಎಂ), ಲಖನ್ ಪ್ರತಾಪ್ ಸಿಂಗ್ (ಡಿಎಂ), ಶ್ರೀಮತಿ ಎಸ್.ಎ.ರೂಪಶ್ರೀ ಹಾಗೂ ಶಾಖಾ ವ್ಯವಸ್ಥಾಪಕರಾದ ಕಾರ್ತಿಕ್ ಉಪಸ್ಥಿತರಿದ್ದರು.

ಈ ವೇಳೆ ಸಿಜಿಎಂ ಹಾಗೂ ಡಿಜಿಎಂ ಅವರು ಶಾಖೆಯ ಮೊದಲ ಗ್ರಾಹಕರನ್ನು ಸನ್ಮಾನಿಸಿ ಅಭಿನಂದಿಸಿದರು. ಬಳಿಕ ಮಾತನಾಡಿದ ಡಿಜಿಎಂ ಮತ್ತು ಪ್ರಾದೇಶಿಕ ಮುಖ್ಯಸ್ಥ ಮನೋಜ್‌ಕುಮಾರ್ ರಾಮನ್ ಗ್ರಾಹಕರಿಗೆ ತ್ವರಿತ, ಸ್ನೇಹಪರ ಹಾಗೂ ಗುಣಮಟ್ಟದ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಭರವಸೆ ನೀಡಿದರು. ವಿವಿಧ ಸಾಲ ಸೌಲಭ್ಯಗಳು, ವಿಮಾ ಯೋಜನೆಗಳು ಹಾಗೂ ಗ್ರಾಹಕರ ವಿವಿಧ ಹಣಕಾಸು ಅಗತ್ಯಗಳನ್ನು ಪೂರೈಸುವ ಬ್ಯಾಂಕಿಂಗ್ ಸೇವೆಗಳ ಕುರಿತು ವಿವರಿಸಿದರು. ಸಾರ್ವಜನಿಕರು ಶಾಖೆಯಲ್ಲಿ ಖಾತೆಗಳನ್ನು ತೆರೆಯುವ ಮೂಲಕ ಬ್ಯಾಂಕಿನ ವಿವಿಧ ಸೇವೆಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಂತೆ ಮನವಿ ಮಾಡಿದರು.

## ರಾಮಕೃಷ್ಣ ವಿದ್ಯಾಕೇಂದ್ರ ಶಾಲೆಯಲ್ಲಿ ಪರಿಸರ ದಿನಾಚರಣೆ



ಮೈಸೂರು, ಜೂ. 8– ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾ ಕೇಂದ್ರ ಶಾಲೆಯ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಅಪರ ಕೃಷಿ ನಿರ್ದೇಶಕ ಡಾ.ವಿಷಕಂಠ ಮಾತನಾಡಿ, ಪರಿಸರ ನೆಪ ಮಾತ್ರಕ್ಕೆ ಆಚರಿಸದೆ ಪ್ರತಿಯೊಬ್ಬರು ಗಿಡ ನೆಡುವ ಮೂಲಕ ಅನುಷ್ಠಾನಕ್ಕೆ ತರಬೇಕು ಎಂದರು.

ಹಾಗೆಯೇ ಸಸ್ಯಗಳಲ್ಲಿಯೇ ಅತೀ ಹೆಚ್ಚು ಆಮ್ಲಜನಕವನ್ನು ಬಿಡುಗಡೆ ಗೊಳಿಸುವುದು ಬಿದಿರು ಎಂದು ಬಿದಿರಿನ ಮಹತ್ವದ ಬಗ್ಗೆ ತಿಳಿಸಿದರು. ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಪ್ರೊ. ಜಿ.ಚಂದ್ರ ಶೇಖರ್ ಮಾತನಾಡುತ್ತಾ, ಪರಿಸರ ದಿನಾಚರಣೆಯು ಒಂದು ದಿನಕ್ಕೆ ಸೀಮಿತವಾಗಿರದೆ ಪ್ರತಿದಿನವು ನಿರಂತರವಾಗಿರಬೇಕು ಎಂದರು. ಕಾರ್ಯಕ್ರಮದಲ್ಲಿ ಗೌರವ ಅಧ್ಯಕ್ಷ ಎಂ.ಪಾಪೇಗೌಡ, ಖಜಾಂಚಿ ಹೆಚ್.ಜಿ. ರಮೇಶ್, ರಾಮಕೃಷ್ಣ ವಿದ್ಯಾಕೇಂದ್ರದ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ.ಎನ್. ವಿಶ್ವನಾಥ್ ಮತ್ತು ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ವೀಣಾ ಕೆ.ಹೆಗಡೆ ಹಾಗೂ ಶಾಲೆಯ ಆಡಳಿತ ಮಂಡಳಿಯ ಸದಸ್ಯರು ವಿದ್ಯಾರ್ಥಿಗಳು, ಶಿಕ್ಷಕ–ಶಿಕ್ಷಕೇತರರು ಭಾಗವಹಿಸಿದ್ದರು.

## ನಿಧನ

### ಪೊಯ್ಯೆಟೀರಾ ನಿಶಾಂತ್ ಚೆಂಗಪ್ಪ



ಮೈಸೂರು, ಜೂ.8–ಮೈಸೂರಿನ ಭಾರತೀಯ ವಿದ್ಯಾಭವನದ ಗೌರವ ಕಾರ್ಯದರ್ಶಿಗಳು ಹಾಗೂ ಕೊಡವ ಸಮಾಜದ ಮಾಜಿ ಅಧ್ಯಕ್ಷರೂ ಆದ ಪಿ.ಎಸ್.ಗಣಪತಿ ಅವರ ಪುತ್ರ ಪೊಯ್ಯೆಟೀರಾ ನಿಶಾಂತ್ ಚೆಂಗಪ್ಪ (37) ಸೋಮವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು.

ಇವರು ಪತ್ನಿ ಮಾಳವಿ (ಚೀಯಕಪೂವಂಡ), ಪುತ್ರ ವೇದ್, ಪೋಷಕರು (ಗಪ್ಪು ಮತ್ತು ಪುಷ್ಪಾ) ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ.

ಪಾರ್ಥಿವ ಶರೀರವನ್ನು ಅವರ ಪೋಷಕರ ನಿವಾಸ: ಈಶ್ವರ್ ಪ್ರಸಾದ್, ನಂ. 225, 10ನೇ ಕ್ರಾಸ್, 5ನೇ ಮುಖ್ಯ ರಸ್ತೆ, ವಿಜಯನಗರ 1ನೇ ಹಂತ ಇಲ್ಲಿ ಸಾರ್ವಜನಿಕರ ದರ್ಶನಕ್ಕೆ ಕೆಲ ಕಾಲ ಇಡಲಾಗಿತ್ತು. ನಂತರ ಸಂಜೆ ವೇಳೆಗೆ ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಪೊಂಜಂಡ ಎಸ್.ಅರ್ಜುನ್



ಮೈಸೂರು, ಜೂ.8– ಕೊಡಗು ಮೂಲದ, ಮೈಸೂರಿನ ಸರಸ್ವತಿಪುರಂ ನಿವಾಸಿ ನಿವೃತ್ತ ಡಿವೈಎಸ್‌ಪಿ ಪೊಂಜಂಡ ಎಸ್.ಅರ್ಜುನ್(89) ಹೃದಯಾಘಾತದಿಂದ ಸೋಮವಾರ ಸಂಜೆ ನಿಧನರಾದರು.

ಮೃತರು, ಪುತ್ರರಾದ ಮೈಸೂರು ಕೊಡವ ಸಮಾಜದ ಅಧ್ಯಕ್ಷ ಪೊಂಜಂಡ ಗಪ್ಪಣ್ಣ, ಗಿರಿ ಹಾಗೂ ಪುತ್ರಿ ನೆಲ್ಲಿರಾ ಕವಿತಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಮಂಗಳವಾರ ಮಧ್ಯಾಹ್ನ 2.30ಕ್ಕೆ ಚಾಮುಂಡಿ ಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಜೂ.21ಕ್ಕೆ ಅರಮನೆ ಆವರಣದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮೈಸೂರು, ಜೂ.8(ಎಂಕೆ)– ಮೈಸೂರು ಅರಮನೆ ಆವರಣದಲ್ಲಿ ಜೂ.21 ರಂದು ಜಿಲ್ಲಾಡಳಿತದ ವತಿಯಿಂದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಿದ್ದು, ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪೂರ್ವಭಾವಿ ಸಭೆ ನಡೆಸಿದ ಅವರು, ಅಂದು ಬೆಳಗ್ಗೆ 6 ಗಂಟೆಯಿಂದ 8 ಗಂಟೆಯವರೆಗೆ ವಿವಿಧ ಆಸನಗಳ ಪ್ರದರ್ಶನ ನಡೆಯಲಿದ್ದು, ವಿವಿಧ ಯೋಗ ಸಂಘ–ಸಂಸ್ಥೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿನ ಯೋಗ ಹಾಗೂ ಯೋಗಾಸಕ್ತರು ಭಾಗವಹಿಸುವಂತೆ ಕೋರಿದರು.

ಅರಮನೆ ಆವರಣಕ್ಕೆ ಆಗಮಿಸುವವರಿಗೆ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಸ್ವಚ್ಛತೆ, ಕುಡಿಯುವ ನೀರು, ಅರಮನೆ ಮಂಡಳಿ ವತಿಯಿಂದ ವೇದಿಕೆ, ಧ್ವನಿವರ್ಧಕ ಹಾಗೂ ಪೊಲೀಸ್ ಇಲಾಖೆಯಿಂದ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.



ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಸಿದ್ಧತೆಯ ಪೂರ್ವಭಾವಿ ಸಭೆಯಲ್ಲಿ ಎಡಿಸಿ ಐಶ್ವರ್ಯ ಪೋಸ್ಟರ್ ಬಿಡುಗಡೆಗೊಳಿಸಿದರು.

### ಪ್ರದರ್ಶನಗೊಳ್ಳುವ ಆಸನಗಳು...

ದೈಹಿಕ ವ್ಯಾಯಾಮದ ಬಳಿಕ ತಾಡಾಸನ, ವೃಕ್ಷಾಸನ, ಪಾದಹಸ್ತಾಸನ, ಅರ್ಧ ಚಕ್ರಾಸನ, ತ್ರಿಕೋನಾಸನ, ಭದ್ರಾಸನ, ವಜ್ರಾಸನ, ಉಷ್ಟ್ರಾಸನ, ಶಶಂಕಾಸನ, ಉತ್ಥಾನ ಮಂಡೂಕಾಸನ, ವಕ್ರಾಸನ, ಮಕರಾಸನ, ಭುಜಂಗಾಸನ, ಶಲಭಾಸನ, ಶವಾಸನ, ಸೇತುಬಂಧಾಸನ,ಉತ್ಥಾನ ಪಾದಾಸನ, ಅರ್ಧ ಹಾಲಾಸನ, ಪವನ ಮುಕ್ತಾಸನ, ಶವಾಸನ ಮತ್ತು ಪ್ರಾಣಾಯಾಮ ಮಾಡಲಾಗುವುದು.

**ಯೋಗಾಭ್ಯಾಸ ಅಳವಡಿಸಿಕೊಳ್ಳಿ:** ಜನರು ಯೋಗ ಮಾಡುವುದನ್ನು ಯೋಗ ದಿನಕ್ಕೆ ಮಾತ್ರ ಮೀಸಲಿಡದೆ ಪ್ರತಿನಿತ್ಯವೂ ಯೋಗಾಭ್ಯಾಸ ಮಾಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಯೋಗದ ವಿವಿಧ ಆಸನಗಳಿಂದ ದೇಹದ ಎಲ್ಲಾ ಸ್ನಾಯು ಹಾಗೂ ನರಗಳಿಗೆ ವ್ಯಾಯಾಮ ನೀಡಿ ಆರೋಗ್ಯಯುತ ಜೀವನಕ್ಕೆ ಸಹಾಯಕವಾಗುತ್ತದೆ ಎಂದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾದೇವಿ ಮಾತನಾಡಿ, ದಿನನಿತ್ಯ ಯೋಗ

### ಸಿದ್ಧತೆಗೆ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಸೂಚನೆ

ಯೋಜನೆಯಡಿ ಜೂನ್ 22ರಿಂದ ಒಂದು ವರ್ಷದ 365 ದಿನ ಜನರಿಗೆ ಆನ್‌ಲೈನ್ ಮೂಲಕ ಲಿಂಕ್ ಒದಗಿಸಲಾಗುವುದು. ಆಸಕ್ತರು ನೋಂದಣಿ ಮಾಡಿಕೊಳ್ಳುವಂತೆ ತಿಳಿಸಿದರು.

**1.20 ಲಕ್ಷ ಜನ ಭಾಗಿ:** ಯೋಗ ಫೆಡರೇಷನ್ ಮುಖ್ಯಸ್ಥ ಶ್ರೀಹರಿ ಮಾತನಾಡಿ, ಮೈಸೂರನ್ನು ಯೋಗ ಹಬ್ ಮಾಡಲು ಜೂ.21ರಂದು ನಗರದ 120 ಸ್ಥಳಗಳಲ್ಲಿ ಯೋಗ ಪ್ರದರ್ಶನ ಆಯೋಜಿಸಲಾಗಿದೆ. 1,200 ತರಬೇತುದಾರರೊಂದಿಗೆ 1,20,000 ಜನರು ಭಾಗವಹಿಸುವಂತೆ ಮಾಡಲು ಉದ್ದೇಶಿಸಲಾಗಿದೆ ಎಂದರು. ನಂತರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಈ ವೇಳೆ ಸಹಾಯಕ ಪೊಲೀಸ್ ಆಯುಕ್ತ ರಾಘವೇಂದ್ರ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭು ಹಾಗೂ ವಿವಿಧ ಯೋಗ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

**ಮೈಸೂರು:** ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ವತಿಯಿಂದ 2026–27ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬಿ.ವಿ.ಎ. ದೃಶ್ಯ ಕಲೆಯಲ್ಲಿ ಸ್ನಾತಕ ಪದವಿ ಪ್ರವೇಶಾತಿಗಾಗಿ ದ್ವಿತೀಯ ಪಿ.ಯು.ಸಿ./ಸಮಾನಾಂತರ ಕೋರ್ಸುಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪದವಿಯಲ್ಲಿ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ. ಆಸಕ್ತ ವಿದ್ಯಾರ್ಥಿಗಳು (UUCMS) htts;//uucms.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ನಂತರ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹತಾ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನವನ್ನು ಜೂನ್ 15ರಂದು ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ದೂ.ಸಂಖ್ಯೆ 0821–2438931 ನ್ನು ಸಂಪರ್ಕಿಸಬಹುದೆಂದು ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಾ.ಡಿ.ಮಾದೇಗೌಡರಿಗೆ ಹುಟ್ಟುಹಬ್ಬದ ಶುಭಾಶಯ...



ವಿಧಾನಪರಿಷತ್ ಮಾಜಿ ಸದಸ್ಯರೂ ಆದ ಸಿ.ಐ.ಟಿ.ಬಿ ಮಾಜಿ ಅಧ್ಯಕ್ಷರಾದ ಡಾ.ಡಿ.ಮಾದೇಗೌಡ ಅವರ ಹುಟ್ಟುಹಬ್ಬಕ್ಕೆ ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್ ವಿಷಕಂಠೇಗೌಡ ಶುಭಾಶಯ ಕೋರಿದರು. ಈ ವೇಳೆ ನಾಡಪ್ರಭು ಶ್ರೀ ಕೆಂಪೇಗೌಡರ ವೇದಿಕೆಯ ರಾಮ್ ಪ್ರಸಾದ್, ಮಹದೇವು, ಕೇಬಲ್ ಶಿವು, ಶಿವಕುಮಾರ್, ಸುರೇಶ್ ಹಾಗೂ ಬಳಗದ ಸ್ನೇಹಿತರು ಶುಭಾಶಯ ಕೋರಿದರು.



**ಅಭಿನಂದನೆ...**

**ಕೆಪಿಸಿಸಿಯ ನೂತನ ಸಾರಥಿ ಬಿ.ಕೆ. ಹರಿಪ್ರಸಾದ್ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪುಷ್ಪಗುಚ್ಛ ನೀಡುವ ಮೂಲಕ ಅಭಿನಂದಿಸಿದರು. ಈ ವೇಳೆ ಕೃಷ್ಣರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಮುಖಂಡರಾದ ವಿಶ್ವನಾಥ್, ಮಹ್ಮದ್ ನೂರುಲ್ಲಾ, ನಿತಿನ್ ಪಾಟೀಲ್ ಉಪಸ್ಥಿತರಿದ್ದರು.**

## ಕ್ರೀಡಾ ವಸತಿನಿಲಯಗಳಲ್ಲಿ ಯೋಗ ತರಬೇತಿದಾರರ ನೇಮಕಕ್ಕೆ ಆಗ್ರಹ

ಮೈಸೂರು,ಜೂ.8(ಎಂಟಿವೈ)– ಕ್ರೀಡಾಪಟುಗಳಿಗೆ ಯೋಗ ತರಬೇತಿ ನೀಡಲು ಕ್ರೀಡಾ ವಸತಿ ನಿಲಯಗಳಲ್ಲಿ ಯೋಗ ತರಬೇತಿದಾರರನ್ನು ನಿಯೋಜಿಸುವಂತೆ ಅಂತಾರಾಷ್ಟ್ರೀಯ ಯೋಗ ತರಬೇತುದಾರ ಎಂ.ಆರ್. ಕಿಶೋರ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಗಕ್ಕೆ ಅಂತಾರಾಷ್ಟ್ರೀಯ ಮನ್ನಣೆ ದೊರೆತಿದೆ. ಇತ್ತೀಚಿನ ದಿನಗಳಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಂದ ಯೋಗಪಟುಗಳು ಹೊರಹೊಮ್ಮುತ್ತಿದ್ದಾರೆ. ಕ್ರೀಡಾಕ್ಷೇತ್ರದಲ್ಲಿರುವವರಿಗೆ ಯೋಗ ತರಬೇತಿ ನೀಡುವುದಕ್ಕಾಗಿ ವಿಶೇಷ ತರಬೇತಿ ಪಡೆದ ಯೋಗ ಶಿಕ್ಷಕರನ್ನು ನೇಮಕ ಮಾಡಬೇಕು. ಇದರಿಂದ ವಿದ್ಯಾರ್ಥಿಗಳಿಗೆ ತಾಂತ್ರಿಕ ಹಾಗೂ ಸ್ಪರ್ಧಾತ್ಮಕ ತರಬೇತಿ ದೊರೆಯಲಿದೆ. ಇದರಿಂದಾಗಿ ಗ್ರಾಮೀಣ ವಿದ್ಯಾರ್ಥಿಗಳು ಸಹ ಯೋಗಾಭ್ಯಾಸ ಕ್ಷೇತ್ರದಲ್ಲಿ ಹೆಸರು ಮಾಡಲು ಸಾಧ್ಯವಾಗುತ್ತದೆ. ಇದರೊಡನೆ ವಿಶ್ವಮಟ್ಟದಲ್ಲಿ ಯೋಗಾಸನ ಸ್ಪರ್ಧೆಗಳಲ್ಲಿ ದೇಶಕ್ಕೆ ಹೆಚ್ಚು ಪದಕ ತರುವಂತಾಗುತ್ತದೆ ಎಂದರು.

ಕ್ರೀಡೆಯಲ್ಲಿ ಕೇವಲ ದೈಹಿಕ ದಂಡನೆ ಮಾಡುತ್ತಿದ್ದು, ಮಾನಸಿಕ ಸಾಮರ್ಥ್ಯ ಹೆಚ್ಚಲು ಯೋಗಾಸನ ನೆರವಾಗುತ್ತದೆ. ಇದರಿಂದಾಗಿ ಕ್ರೀಡಾ ಕ್ಷೇತ್ರಗಳಲ್ಲಿಯೂ ಉತ್ತಮ ಸಾಧನೆ ಸಾಧ್ಯವಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹುಚ್ಚೇಗೌಡ, ಅನಂತು, ಮಂಜುನಾಥ್ ಉಪಸ್ಥಿತರಿದ್ದರು.

# ಸಿದ್ದರಾಮಯ್ಯ–ಸತೀಶ್ ಜಾರಕಿಹೊಳಿ ನಡುವೆ ಒಡಕು ತರುವ ಹುನ್ನಾರ

**ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು ಆರೋಪ**



ಮೈಸೂರು,ಜೂ.8(ಎಂಟಿವೈ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಗುರು–ಶಿಷ್ಯರಂತೆ ಇದ್ದು, ಅವರ ಸಂಬಂಧಕ್ಕೆ ಹುಳಿ ಹಿಂಡುವಂತೆ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತಾಡಿದ ಅವರು, ಸಚಿವ ಸತೀಶ್ ಜಾರಕಿಹೊಳಿ ಅವರು ಮಾಜಿ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಸಹಿ ಸಂಗ್ರಹಿಸಿ ಹೈಕಮಾಂಡ್‌ಗೆ ನೀಡಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುತ್ತಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಸಿದ್ದರಾಮಯ್ಯ ಅವರ ಬೆಂಬಲಕ್ಕೆ ಸದಾ ನಿಂತಿದ್ದಾರೆ. ಆದರೆ ಇದನ್ನು ಸಹಿಸದವರು ಅಸೂಯೆಯಿಂದ ಗೊಂದಲ ಸೃಷ್ಟಿಸಿ, ಇವರಿಬ್ಬರ ನಡುವೆ ಒಡಕುಂಟು ಮಾಡಲು ಹಾಗೂ ಸಮಾಜಕ್ಕೆ ತಪ್ಪು ಸಂದೇಶ ಕಳುಹಿಸಲು ಯತ್ನಿಸುತ್ತಿದ್ದಾರೆ ಎಂದು ದೂರಿದರು.

ಈ ಹಿಂದೆ ಸಿದ್ದರಾಮಯ್ಯ ಅವರನ್ನು ಜೆಡಿಎಸ್‌ನಿಂದ ಉಚ್ಚಾಟನೆ ಮಾಡಿ, ಉಪಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದಾಗ ಅವರ ಬೆನ್ನಿಗೆ ಸತೀಶ್ ಜಾರಕಿಹೊಳಿ ನಿಂತರು. ಸಿದ್ದರಾಮಯ್ಯರಿಗಾಗಿ ಸತೀಶ್ ಜಾರಕಿಹೊಳಿ ಎಲ್ಲ ತ್ಯಾಗ ಮಾಡಿದ್ದಾರೆ. ಈ ಹಿಂದೆ ಡಾ.ಜಿ.ಪರಮೇಶ್ವರ್ ಅವರು ಸೋಲಲು ಸಿದ್ದರಾಮಯ್ಯ ಅವರೇ ಕಾರಣ ಎಂದು ಅಪಪ್ರಚಾರ ಮಾಡಿದ್ದರು. ಈಗ ಜಾರಕಿಹೊಳಿ ಅಹಿಂದ ಚಳವಳಿಯ ಉತ್ತರಾಧಿಕಾರಿ ಆಗಲಿದ್ದಾರೆ ಎಂಬ ಕಾರಣದಿಂದಾಗಿ ಅವರನ್ನು ತುಳಿಯಲು ಹಾಗೂ ನಾಯಕ ಸಮುದಾಯವನ್ನು ದಮನ ಮಾಡಲು ಹುನ್ನಾರ ನಡೆದಿದೆ. ಹೀಗಾಗಿ ಪೊಲೀಸರು ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಈ ನಿಟ್ಟಿನಲ್ಲಿ ಜೂ. 13ರಂದು ಬೆಳಗ್ಗೆ 11ಕ್ಕೆ ನಗರದ ಪುರಭವನ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ನಾಯಕ ಸಮುದಾಯವನ್ನು ಕಡೆಗಣಿಸಲಾಗುತ್ತಿದೆ. ಸತೀಶ್ ಜಾರಕಿಹೊಳಿ ಅವರು ಕೆಪಿಸಿಸಿ ಅಧ್ಯಕ್ಷರಾದರೆ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿಯಾಗುತ್ತಾರೆ ಎಂದು ಕೆಪಿಸಿಸಿ ಅಧ್ಯಕ್ಷ ಸ್ಥಾನ ತಪ್ಪಿಸಲಾಗಿದೆ. ವಾಲ್ಮೀಕಿ ಹಗರಣದಲ್ಲಿ ನಾಗೇಂದ್ರ ಅವರಿಂದ ಸಚಿವ ಸ್ಥಾನ ಕಿತ್ತೊಕೊಂಡು ಜೈಲಿಗೆ ಕಳುಹಿಸಲಾಯಿತು. ಕೆ.ಎನ್.ರಾಜಣ್ಣ ಅವರಿಂದ ಸಚಿವ ಸ್ಥಾನ ಕಸಿದುಕೊಳ್ಳಲಾಯಿತು. ನಾಯಕ ಸಮುದಾಯ ಐಎಎಸ್, ಐಪಿಎಸ್ ಅಧಿಕಾರಿಗಳಿಗೆ ಸೂಕ್ತ ಸ್ಥಾನಮಾನ ನೀಡದೆ, ಗೊತ್ತು ಗುರಿಯಿಲ್ಲದ ಸ್ಥಳಕ್ಕೆ ನಿಯೋಜಿಸಿ, ನಾಯಕ ಸಮುದಾಯವನ್ನು ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿದರು. ಗೋಷ್ಠಿಯಲ್ಲಿ ರಾಜ್ಯ ನಾಯಕರ ಯುವ ಸೇನೆ ಮುಖಂಡರಾದ ಎಸ್.ಆರ್.ರವಿಕುಮಾರ್, ಶಿವಕುಮಾರಸ್ವಾಮಿ, ಎಂ.ಸೋಮಣ್ಣ, ಪರಶಿವಮೂರ್ತಿ, ಸಿದ್ದರಾಜು, ಜೋಗಯ್ಯ ಇದ್ದರು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**09.06.2026 ಮಂಗಳವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಉತ್ತರಭಾದ್ರ ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ**

- **ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ:** ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಯೋಜನೆಗೆ ಸ್ವಾಗತ, ಸಿಹಿ ವಿತರಣೆ, ಅರ್ಜಿ ಭರ್ತಿ ಸಹಾಯ ಕಾರ್ಯಕ್ರಮ, ಸ್ಥಳ: ಮೈಸೂರು ಸಿಟಿ ಬಸ್ ನಿಲ್ದಾಣ ವಿಶೇಷ ಕಾರ್ಯಕ್ರಮ, ಬೆಳಗ್ಗೆ 8.30ಕ್ಕೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥೈಟಿಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗೆ 9.30ರಿಂದ
- **ಚಿಗುರು ಸಾಹಿತ್ಯ ಬಳಗ ಮತ್ತು ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್:** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನನ್ನ ತಂದೆ ತಾಯಿ ನನ್ನ ಭೂಮಿ ಈ ಸಾಲಿನ ಘೋಷವಾಕ್ಯದ ಭಿತ್ತಿಚಿತ್ರ ಬಿಡುಗಡೆ ಹಾಗೂ ಪರಿಸರ ಸಂರಕ್ಷಣಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಭಿತ್ತಿಚಿತ್ರ ಬಿಡುಗಡೆ: ಹಿರಿಯ ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ : ಹಿರಿಯ ಲೇಖಕಿ ಶ್ರೀಮತಿ ಬಿ.ಕೆ.ಲೋಲಾಕ್ಷಿ, ಮುಖ್ಯ ಅತಿಥಿಗಳು : ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ಸಿಇಓ ಕೆ.ಆರ್.ಯೋಗಾನರಸಿಂಹನ್, ಪ್ರಶಸ್ತಿ ಪುರಸ್ಕೃತರು : ಅಂತರ ರಾಷ್ಟ್ರೀಯ ಗರ್ಭಧಾರಣಾ ತಜ್ಞ ಡಾ.ಸಿ.ಶರತ್‌ಕುಮಾರ್ ಮತ್ತು ಕರ್ನಾಟಕ ಸುಗಮ ಸಂಗೀತ ಪರಿಷತ್, ಮೈಸೂರು ಘಟಕದ ಅಧ್ಯಕ್ಷ ಡಾ.ನಾಗರಾಜ್ ವಿ.ಬೈರಿ, ಉಪಸ್ಥಿತರು : ಚಿಗುರು ಸಾಹಿತ್ಯ ಬಳಗದ ಅಧ್ಯಕ್ಷ ಎನ್.ಅನಂತ, ಕಾರ್ಯದರ್ಶಿ ನಾಗೇಂದ್ರ ಹೆಬ್ಬಾರ್, ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಮಧ್ಯಾಹ್ನ 12ಕ್ಕೆ.
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಸಂಸ್ಥಾನ, ಉತ್ತರಾದಿ ಮಠ, ಮೈಸೂರು, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯಸಂತುಷ್ಟ ತೀರ್ಥರ ದಿವ್ಯ ಸನ್ನಿಧಾನ, ವಿದುಷಿ ಶ್ರೀಮತಿ ಭಾರತಿ ಸಮೀರ್ ಅವರಿಂದ ಭರತನಾಟ್ಯ, ವಿದುಷಿ ಶ್ರೀಮತಿ ಇಂದಿರಾ ವಾದಿರಾಜ ಕೆಂಭಾವಿ ಅವರಿಂದ ದಾಸ ಲಹರಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ.5.30ಕ್ಕೆ
- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಅಂಜನಾನಂದನೋತ್ಸವ, ಡಾ.ಎನ್.ಕೆ.ರಾಮಶೇಷನ್ ಅವರಿಂದ ಶ್ರೀ ಸುಂದರಕಾಂಡ ಪ್ರವಚನ, ಸ್ಥಳ: ಶ್ರೀರಾಮ ಮಂದಿರ, ಶಿವರಾಂಪೇಟೆ, ಸಂಜೆ 6.30ರಿಂದ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ–ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ, ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿರುವ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಮುಖ್ಯಸ್ಥರಾದ ಡಾ. ಡಿ.ಪ್ರಭುಸೇನ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಲಕ್ಷ್ಮೀನಾರಾಯಣ ಎಸ್., ನಿರ್ಮಾಣ: ಎನ್.ಕೇಶವಮೂರ್ತಿ, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ 8.45 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಉಷಾ ಆಚಾರ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಹೊಂಗಿರಣ' ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಬಿ.ಜಿ. ಕವಿತಾ ಹಾಗೂ ಎಸ್.ಲಕ್ಷ್ಮೀನಾರಾಯಣ **ಮಧ್ಯಾಹ್ನ:** 12.05 ವನಿತಾ ವಿಹಾರ–ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಿಶೇಷ ಸಂಗೀತ ರೂಪಕ 'ಪ್ರಕೃತಿ ಮಾತೆ ಪ್ರಾಣ ಧಾತೆ', ಪ್ರಸ್ತುತಿ–ಮೈಸೂರಿನ ಕುವೆಂಪು ನಗರದ ಶಾರದ ಕಲಾ ಕೇಂದ್ರದವರಿಂದ, 12.35 ದೇವರನಾಮ–ಸುನೀತಾ ಹಿರೇಮಠ್, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವ ಗೀತೆಗಳು–ಸಿಂಚನಾ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಟಿ.ಆರ್.ಮಹಾಲಿಂಗಂ– ಕೊಳಲು ವಾದನ–ತ್ಯಾಗರಾಜರ ಕೃತಿಗಳು, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಹೈಬ್ರಿಡ್ ಭತ್ತದ ಬೇಸಾಯ ಈ ಕುರಿತು ಮಂಡ್ಯದ ವಿ.ಸಿ.ಫಾರಂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಶಿಕ್ಷಣ ನಿರ್ದೇಶಕರಾದ ಡಾ.ಎನ್.ಶಿವಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಮೈಸೂರು ಎಂ.ನಾಗರಾಜ್–ವೈಯೋಲಿನ್ ವಾದನ ಹಾಗೂ ರಫೀಕ್ ಖಾನ್–ಸಿತಾರ್ ವಾದನದ ಜುಗಲ್‌ಬಂದಿ, 8.30 ರಂಗಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಧಾ ರಘುನಾಥನ್ –ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

# ಎಸ್‌ಡಿಜೆ ಗೋಲ್ಡ್ ಮಾಲೀಕ ಚಿನ್ನತಂಬಿ ಆಸ್ತಿ ಮುಟ್ಟುಗೋಲು

## ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾಹಿತಿ

- 2017ರಿಂದ ವಂಚನೆಗೊಳಗಾದ 310 ಮಂದಿ ದೂರು
- 10 ವರ್ಷ ಶಿಕ್ಷೆಯಾಗುವ ಸೆಕ್ಷನ್ ನಮೂದು
- ಲಾಭ ಪಡೆದವರು ಮೌನ, ನಷ್ಟ ಹೊಂದಿದವರು ದೂರು
- ಪೊಲೀಸರು ಶಾಮೀಲಾಗಿರುವ ಬಗ್ಗೆ ಸ್ಪಷ್ಟ ನಿರಾಕರಣೆ




ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಸೋಮವಾರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಪ್ರಾಪರ್ಟಿ ರಿಟರ್ನ್ ಪರೇಡ್ ನಡೆಸಿದರು.

ಮೈಸೂರು, ಜೂ.8(ಬಿಎಲ್‌ಯು)– ಅಡವಿಟ್ಟ ಚಿನ್ನ ಬಿಡಿಸಿ, ಹೆಚ್ಚಿನ ಬೆಲೆಗೆ ಖರೀದಿಸುವುದಾಗಿ ಹೇಳಿ ವಂಚನೆ ಮಾಡುತ್ತಿದ್ದ ಆರೋಪ ಹೊತ್ತಿರುವ ಮೈಸೂರಿನ ಎಸ್‌ಡಿಜೆ ಗೋಲ್ಡ್ ಮಾಲೀಕ ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿ ಆಸ್ತಿಪಾಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು.

ಮೈಸೂರಿನ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸ್ ಇಲಾಖೆಯ ಸಲಹೆ ಮೇರೆಗೆ 2017 ರಿಂದ ಮೋಸ ಹೋಗಿರುವ 310 ಜನರು ಲಿಖಿತ ದೂರು ಸಲ್ಲಿಸಿದ್ದಾರೆ ಎಂದು ಹೇಳಿದರು. ಈ ಪ್ರಕರಣದ ಬಗ್ಗೆ ಎಸಿಪಿ ನೇತೃತ್ವದಲ್ಲಿ ತನಿಖೆ ನಡೆಸುತ್ತಿದ್ದು, ಈಗಾಗಲೇ 5 ಎಫ್‌ಐಆರ್ ದಾಖಲಾಗಿದೆ. 10 ವರ್ಷ ಶಿಕ್ಷೆ ಆಗುವಂತಹ ಸೆಕ್ಷನ್‌ಗಳನ್ನು ನಮೂದಿಸಿ ಪ್ರಕರಣ ದಾಖಲಿಸಿದ್ದು, ಸದ್ಯ ಚಿನ್ನತಂಬಿ ನ್ಯಾಯಾಂಗ ಬಂಧನದಲ್ಲಿದ್ದಾನೆ ಎಂದು ಸೀಮಾ ಲಾಟ್ಕರ್ ಮಾಹಿತಿ ನೀಡಿದರು.

ಬೆಂಗಳೂರು, ದಾವಣಗೆರೆ, ಉಡುಪಿ ಸೇರಿದಂತೆ ಕರ್ನಾಟಕದ ಹಲವು ಜಿಲ್ಲೆಯವರು ತಾವು ವಂಚನೆಗೊಳಗಾಗಿದ್ದೇವೆ ಎಂದು ದೂರುಗಳನ್ನು ದಾಖಲಿಸಿದ್ದಾರೆ. ಇವರ ದೂರುಗಳನ್ನು ಪರಾಮರ್ಷಿಸುತ್ತಿದ್ದು, ಇದರ ಆಧಾರದ ಮೇಲೆ ಮೋಸದಿಂದ ಚಿನ್ನತಂಬಿ ಮಾಡಿರುವ ಆಸ್ತಿ ಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದರು. ಚಿನ್ನತಂಬಿ ವಂಚನೆ ಪ್ರಕರಣಗಳಲ್ಲಿ ಪೊಲೀಸರು ಕೂಡ ಶಾಮೀಲಾಗಿರುವ ಇಲ್ಲವೇ ಕುಮ್ಮಕ್ಕು ನೀಡಿರುವ ಆರೋಪವನ್ನು ನಿರಾಕರಿಸಿದ ಸೀಮಾ ಲಾಟ್ಕರ್ ಅವರು, ಇಂತಹ ಯಾವುದೇ ಖಚಿತ ಮಾಹಿತಿ ದೊರೆತಿಲ್ಲ ಹಾಗೂ ಲಿಖಿತ ದೂರು ಸಲ್ಲಿಕೆಯಾಗಿಲ್ಲ ಎಂದು ಹೇಳಿದರು.

ಅಡವಿಟ್ಟ ಚಿನ್ನ ಬಿಡಿಸಿ ಹೆಚ್ಚು ಬೆಲೆಗೆ ಖರೀದಿ ಮಾಡುವ ಚಿನ್ನತಂಬಿ ವ್ಯವಹಾರದಿಂದ ಕೆಲವರಿಗೆ ಲಾಭವಾಗಿದೆ. ಆದ ಕಾರಣ ಅವರು ದೂರು ನೀಡಿಲ್ಲ. ನಷ್ಟಕ್ಕೊಳಗಾದವರು ದೂರು ನೀಡಿದ್ದು, ಅವರಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ಸರ್ವೆ ಬಗ್ಗೆ ಚಿಂತನೆ:** ಮೈಸೂರಿನಲ್ಲಿ ಚಿನ್ನತಂಬಿಯಂತೆ ಬಹಳಷ್ಟು ನಕಲಿ ಗೋಲ್ಡ್ ಕಂಪನಿಗಳು ಮೋಸ ಮಾಡುತ್ತಿರುವ ಬಗ್ಗೆ ಪ್ರಶ್ನಿಸಿದಾಗ, ಮೈಸೂರು ನಗರದ ಎಲ್ಲಾ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳಿಗೆ ಈ ಬಗ್ಗೆ ಮಾಹಿತಿ ನೀಡುವಂತೆ ಸೂಚನೆ ನೀಡಲಾಗುವುದು. ತರುವಾಯ ನಗರದಲ್ಲಿ ಇಂತಹ ವಂಚನೆ ಮಾಡುವ ನಕಲಿ ಕಂಪನಿಗಳ ಬಗ್ಗೆ ಸರ್ವೆ ಮಾಡಿಸಲು ಚಿಂತನೆ ನಡೆಸಲಾಗುವುದು ಎಂದರು.

**ಪ್ರವಾಸಿಗರಿಗೆ ವಂಚನೆ ತಡೆಗೆ ಕ್ರಮ:** ಮೈಸೂರಿಗೆ ಭೇಟಿ ನೀಡುವ ಪ್ರವಾಸಿಗರನ್ನು ಕೆಲವರು ರಸ್ತೆ ಮಧ್ಯೆ ತಡೆದು ನಕಲಿ ಮೈಸೂರು ಸಿಲ್ಕ್ ಸೀರೆ ಮಾರಾಟ ಮಳಿಗೆಗೆ ಕರೆದೊಯ್ದು ಮೋಸ ಮಾಡುತ್ತಿರುವ ಬಗ್ಗೆ ಪ್ರಶ್ನಿಸಿದಾಗ, ಮೈಸೂರು ಹೆಸರಾಂತ ಪ್ರವಾಸಿ ತಾಣವಾಗಿದ್ದು, ಇಂತಹ ವಂಚನೆಗೆ ಕಡಿವಾಣ ಹಾಕುವುದು ಅತ್ಯಗತ್ಯವಾಗಿದೆ. ಈ ಸಂಬಂಧ ವಂಚಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಸೀಮಾ ಲಾಟ್ಕರ್ ಭರವಸೆ ನೀಡಿದರು.

## ನಿಮ್ಮದೇ ಸೀಕ್ರೆಟ್ ಜಾಗ ಬೇಧಿಸಿ 'ಕೀ' ಎಗರಿಸಿ ಕಳ್ಳತನ ಮಾಡುವ ಖತರ್ನಾಕ್‌ಗಳು!

## 2.09 ಕೋಟಿ ಮೌಲ್ಯದ ಚಿನ್ನಾಭರಣ, ನಗದು, ವಾಹನ ವಶ

ಕಳೆದ ಮೂರು ತಿಂಗಳ ಅವಧಿಯಲ್ಲಿ ಮನೆ, ದೇವಸ್ಥಾನ, ವಾಹನ ಕಳ್ಳತನ ಸಂಬಂಧ 16 ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ 2.09 ಕೋಟಿ ಮೌಲ್ಯದ ಚಿನ್ನಾಭರಣ, ನಗದು ಹಾಗೂ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು.

41 ಕಳವು, 3 ವಂಚನೆ ಪ್ರಕರಣಗಳನ್ನು ಪತ್ತೆ ಮಾಡಿರುವ ಪೊಲೀಸರು 1 ಕೆ.ಜಿ.578 ಗ್ರಾಂ ಚಿನ್ನಾಭರಣ, 3 ಕೆ.ಜಿ. 578 ಗ್ರಾಂ ಬೆಳ್ಳಿ ಪದಾರ್ಥ, 10 ವಿವಿಧ ವಾಹನಗಳು ಹಾಗೂ 2,76,736 ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಪ್ರತಿಯೊಂದು ಪ್ರಕರಣದ ಬಗ್ಗೆ ವಿವರ ನೀಡಿದರು.

**ಮನೆ ಕೀ ಸೀಕ್ರೆಟ್ ಜಾಗ ಜಾಲಾಡುತ್ತಿದ್ದ:** ಸಾಮಾನ್ಯವಾಗಿ ಕೆಲವರು ಮನೆಗೆ ಬೀಗ ಹಾಕಿ ಹೊರಗೆ ಹೋಗುವ ಸಂದರ್ಭದಲ್ಲಿ ಮನೆ ಕೀಯನ್ನು ತುಳಸಿ ಕಟ್ಟೆ ಕೆಳಗೆ, ಶೂ ರ್‍ಯಾಕ್ ಕೆಳಗೆ, ಬಾಗಿಲಿನ ಮೂಲೆಯ ಸೀಕ್ರೆಟ್ ಜಾಗದಲ್ಲಿ ಇಡುತ್ತಾರೆ. ಈ ಜಾಗಗಳು ಯಾರಿಗೂ ತಿಳಿಯುವುದಿಲ್ಲ, ಕಳ್ಳರ ಕೈಗಂತೂ ಸಿಗುವುದಿಲ್ಲ ಎಂಬುದು ಕೆಲವರ ಭ್ರಮೆ. ಆದರೆ, ಇದನ್ನು ಜಾಲಾಡುವ ಕೆಲವು ಚಾಲಾಕಿ ಕಳ್ಳರು ಇರುತ್ತಾರೆ ಎಂಬುದು ಅವರಿಗೆ ತಿಳಿದಿರುವುದಿಲ್ಲ.

ಮನೆ ಬಳಿಗೆ ಬಂದು ಕಾರ್ ವಾಶ್ ಮಾಡುವುದಾಗಿ ಭಿತ್ತಿಪತ್ರ ಹಂಚುತ್ತಿದ್ದ ಇಬ್ಬರು ಆರೋಪಿಗಳು ಬೀಗ ಹಾಕಿರುವ ಮನೆಗಳನ್ನು ಪತ್ತೆ ಮಾಡುತ್ತಿದ್ದರು. ಇವರು ಎಂದೂ ಮನೆ ಬಾಗಿಲು ಒಡೆದು, ಬಾಗಿಲು ಮೀಟಿ ಕಳ್ಳತನ ಮಾಡಿಲ್ಲ. ಮನೆಯ ತುಳಸಿ ಕಟ್ಟೆ ಕೆಳಗೆ, ಶೂ ರ್‍ಯಾಕ್ ಕೆಳಗೆ ಸೇರಿದಂತೆ ಇತರೆ ಸೀಕ್ರೆಟ್ ಜಾಗವನ್ನು ಹುಡುಕಿ ಕೀ ತೆಗೆದುಕೊಂಡು ಬಹಳ ಸುಲಭವಾಗಿ ಮನೆ ಕಳ್ಳತನ ಮಾಡುತ್ತಿದ್ದರು. ಸರಸ್ವತಿಪುರಂ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ 4 ಮನೆ ಕಳ್ಳತನ ಪ್ರಕರಣ ಪತ್ತೆ ಮಾಡಿ 18,40,000 ರೂಪಾಯಿ ಮೌಲ್ಯದ 143 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

**ವೃದ್ಧೆಯರೇ ನರ್ಸ್ ಟಾರ್ಗೆಟ್:** 82 ವರ್ಷದ ವೃದ್ಧೆಯ ಶುಶ್ರೂಷೆ ಮಾಡುತ್ತಿದ್ದ ನರ್ಸ್, ಅವರ ಮನೆಯಲ್ಲಿದ್ದ ಚಿನ್ನಾಭರಣ ಕಳ್ಳತನ ಮಾಡಿದ್ದಳು. ಈ ಸಂಬಂಧ ವಿಜಯನಗರ ಪೊಲೀಸರು ಆಕೆಯ ಬಂಧಿಸಿ ವಿಚಾರಣೆ ಮಾಡಿದ್ದು ಬೆಳಕಿಗೆ ಬಂದಿದೆ. ವೃದ್ಧೆಯೊಬ್ಬರ ಶುಶ್ರೂಷೆ ಮಾಡುತ್ತಿದ್ದ ಮತ್ತೊಂದು ಮನೆಯಲ್ಲಿ ಚಿನ್ನಾಭರಣ ಕಳುವು ಮಾಡಿದ್ದಳು. ಆದರೆ ಚಿನ್ನಾಭರಣ ಕಳುವಾಗಿರುವುದು ಆ ಮನೆಯವರ ಅರಿವಿಗೆ ಬಂದಿರಲಿಲ್ಲ. ಈ ಪ್ರಕರಣ ಸಂಬಂಧ ನರ್ಸ್ ಸೇರಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಿ 23,50,000 ಮೌಲ್ಯದ 170ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ.

**ನಟೋರಿಯಸ್ ಕ್ರಿಮಿನಲ್:** ಮೈಸೂರು ಸೇರಿದಂತೆ ಕರ್ನಾಟಕದ ಹಲವೆಡೆ ಕಳ್ಳತನ ಮಾಡಿದ್ದ ಇಬ್ಬರು ನಟೋರಿಯಸ್ ಕ್ರಿಮಿನಲ್‌ಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ 21 ಲಕ್ಷ ಮೌಲ್ಯದ 173 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ.

**ಚಿನ್ನದ ಗಟ್ಟಿ ವಶಕ್ಕೆ:** ಮಂಡಿ ಮೊಹಲ್ಲಾ ಪೊಲೀಸರು ವಂಚನೆ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಿ 90 ಲಕ್ಷ ಮೌಲ್ಯದ 660 ಗ್ರಾಂ ಚಿನ್ನದ ಗಟ್ಟಿ ವಶಪಡಿಸಿಕೊಂಡಿದ್ದಾರೆ.

ಇದಲ್ಲದೆ ನಜರ್‌ಬಾದ್ ಪೊಲೀಸರು ದೇವಸ್ಥಾನದ ಕಳ್ಳತನ ಸೇರಿದಂತೆ ಇತರೆ ಪ್ರಕರಣದಲ್ಲಿ 9.25 ಲಕ್ಷ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ. ಲಷ್ಕರ್ ಪೊಲೀಸರು 11.45 ಲಕ್ಷ ಮೌಲ್ಯದ ಚಿನ್ನಾಭರಣ ವಶಕ್ಕೆ ತೆಗೆದುಕೊಂಡಿದ್ದಾರೆ.

ಮೇಟಗಳ್ಳಿ ಠಾಣೆ ಪೊಲೀಸರು 8,22,645 ರೂಪಾಯಿ ಮೌಲ್ಯದ ದ್ವಿಚಕ್ರ ವಾಹನ, ಚಿನ್ನಾಭರಣ ಕಳುವು, ವಿದ್ಯುತ್ ವೈಯರ್ ಹಾಗೂ ಎಲೆಕ್ಟ್ರಾನಿಕ್ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ. ಉದಯಗಿರಿ ಪೊಲೀಸರು 5,45,000 ಮೌಲ್ಯದ ದ್ವಿಚಕ್ರ ವಾಹನ ಹಾಗೂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಕೃಷ್ಣರಾಜ ಪೊಲೀಸರು 4,65 ಲಕ್ಷ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿದ್ದರೆ, ಕುವೆಂಪುನಗರ ಪೊಲೀಸರು 4.10 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಗೃಹೋಪಯೋಗಿ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ. ಲಕ್ಷ್ಮೀಪುರಂ ಪೊಲೀಸರು ಸುಲಿಗೆ, ಕಳ್ಳತನ ಸೇರಿದಂತೆ ಇತರೆ ಪ್ರಕರಣದಲ್ಲಿ 3.55 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು, ವಿದ್ಯಾರಣ್ಯಪುರಂ ಪೊಲೀಸರು 3 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು ಹಾಗೂ ಹೆಬ್ಬಾಳು ಪೊಲೀಸರು 1.3 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ದೇವರಾಜ, ವಿವಿ ಪುರಂ ಹಾಗೂ ನರಸಿಂಹರಾಜ ಪೊಲೀಸರು ಕೂಡ ಆರೋಪಿಗಳನ್ನು ಬಂಧಿಸಿ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ, ಆಟೋ, ದ್ವಿಚಕ್ರ ವಾಹನ ಸೇರಿದಂತೆ ಲಕ್ಷಾಂತರ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ.

ಈ ಮೂಲಕ ಕಳೆದ ಮೂರು ತಿಂಗಳ ಅವಧಿಯಲ್ಲಿ ಹಲವು ಅಪರಾಧ ಪ್ರಕರಣಗಳನ್ನು ಬೇಧಿಸಿ 2.09 ಕೋಟಿ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಸೀಮಾ ಲಾಟ್ಕರ್ ಅವರು ಸಮಗ್ರ ಮಾಹಿತಿ ನೀಡಿದರು.

ಈ ವೇಳೆ ಚಿನ್ನಾಭರಣ ಸೇರಿದಂತೆ ಇತರೆ ವಸ್ತುಗಳನ್ನು ಕಳೆದುಕೊಂಡ ವಾರಸುದಾರರಿಗೆ ಅವುಗಳನ್ನು ಹಸ್ತಾಂತರ ಮಾಡಲಾಯಿತು. ಡಿಸಿಪಿಗಳಾದ ಸುಂದರ್ ರಾಜ್, ಡಾ.ಹರ್ಷ ಪ್ರಿಯಂವದ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ರಾಜ್ಯಸಭೆ, ಪರಿಷತ್‌ಗೆ ಪಕ್ಷದಿಂದ ಸಮರ್ಥ ಅಭ್ಯರ್ಥಿಗಳ ಆಯ್ಕೆ

## ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಮರ್ಥನೆ

ಬೆಂಗಳೂರು, ಜೂ. 8(ಕೆಎಂಶಿ)–ರಾಜ್ಯಸಭಾ ಹಾಗೂ ವಿಧಾನ ಪರಿಷತ್ ಚುನಾವಣೆಗೆ ಸಮರ್ಥ ಅಭ್ಯರ್ಥಿಗಳ ಆಯ್ಕೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಸಂತಸ ತಂದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಸಭೆಗೆ ಪ್ರೊ. ಎಂ.ನಾಗರಾಜ್ ಹಾಗೂ ವಿಧಾನ ಪರಿಷತ್‌ಗೆ ಲಿಂಗರಾಜ್ ಪಾಟೀಲ್ ಹಾಗೂ ರಘು ಕೌಟಿಲ್ಯ ಅವರ ಹೆಸರನ್ನು ಘೋಷಿಸಲಾಗಿದೆ. ಇವರುಗಳು ಪಕ್ಷ ಸಂಘಟನೆಗೆ ವಿವಿಧ ರೀತಿಯಲ್ಲಿ ತೊಡಗಿಸಿಕೊಂಡಿದ್ದವರು ಎಂದರು.

ರಾಜ್ಯಸಭಾ ಚುನಾವಣಾ ಅಭ್ಯರ್ಥಿ ಪ್ರೊ. ಎಂ.ನಾಗರಾಜ್ ಹಿಂದುಳಿದ ಕುರುಬ ಸಮಾಜಕ್ಕೆ ಸೇರಿದ್ದು, ಆರ್‌ಎಸ್‌ಎಸ್ ಮತ್ತು ಎಬಿವಿಪಿಯಲ್ಲಿ ಸೇವೆ ಸಲ್ಲಿಸಿ, ಪಕ್ಷ ಸಂಘಟನೆಯಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದವರು. ರಾಜ್ಯ ಬಿಜೆಪಿ ಉಪಾಧ್ಯಕ್ಷ ಆಗಿದ್ದರಲ್ಲದೆ, ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಕೆಪಿಎಸ್‌ಸಿಯಲ್ಲಿ ಸೇವೆ ಸಲ್ಲಿಸಿದ್ದರು.

ವಿಧಾನ ಪರಿಷತ್ ಅಭ್ಯರ್ಥಿ ಲಿಂಗರಾಜ ಪಾಟೀಲ್ ಕಳೆದ ಸುಮಾರು 38 ವರ್ಷಗಳಿಂದ ಸತತವಾಗಿ ಸಂಘಟನೆಯ ವಿವಿಧ ಜವಾಬ್ದಾರಿ ವಹಿಸಿಕೊಂಡು ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಕಾರ್ಯನಿರ್ವಹಿಸಿದ್ದಾರೆ. ರಘು ಕೌಟಿಲ್ಯ ಅತ್ಯಂತ ಹಿಂದುಳಿದ ಮಡಿವಾಳ ಸಮಾಜಕ್ಕೆ ಸೇರಿದವರಾಗಿದ್ದು, ಶಿಕ್ಷಣ ಮತ್ತು ಪತ್ರಿಕೋದ್ಯಮ ಕ್ಷೇತ್ರದ ಅನುಭವ ಹೊಂದಿದ್ದಾರೆ.



ರಾಜ್ಯಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿ ಆಯ್ಕೆ ವೇಳೆ ಮಾಜಿ ಸಂಸದೆ ಸುಮಲತಾ ಅಂಬರೀಶ್ ಹೆಸರು ಪ್ರಸ್ತಾಪವಾಗಿತ್ತು. ಅವರು 2019ರ ಲೋಕಸಭಾ ಚುನಾವಣೆಯಲ್ಲಿ ಮಂಡ್ಯದಿಂದ ಸ್ವತಂತ್ರ ಸ್ಪರ್ಧೆ ಮಾಡಿದ್ದಾಗ ಬಿಜೆಪಿ ಬೆಂಬಲ ನೀಡಿತ್ತು.

ಚುನಾವಣೆಯಲ್ಲಿ ಉತ್ತಮ ಅಂತರದಿಂದ ಗೆಲುವನ್ನೂ ಸಾಧಿಸಿದ್ದರು. 2024ರ ಚುನಾವಣೆಯಲ್ಲಿ ಕುಮಾರಸ್ವಾಮಿ ಅವರಿಗೆ ಕ್ಷೇತ್ರ ಬಿಟ್ಟು ಕೊಟ್ಟಿರುವ ಹಿನ್ನೆಲೆಯಲ್ಲಿ ಸುಮಲತಾ ಅವರಿಗೆ ಮುಂದೆ ಪಕ್ಷದಲ್ಲಿ ಸೂಕ್ತ ಸ್ಥಾನಮಾನ ಕೊಡಲಾಗುವುದು ಎಂದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಎನ್‌ಡಿಎಗೆ ಬೆಂಬಲ ನೀಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಕೈಬಲಪಡಿಸಿದ್ದಾರೆ. ಅವರ ಬಗ್ಗೆ ಪಕ್ಷಕ್ಕೆ ಅಪಾರ ಗೌರವ ಇದೆ. ಆದರೆ, ಅವರನ್ನು ಮತ್ತೊಮ್ಮೆ ರಾಜ್ಯಸಭೆಗೆ ಕಳುಹಿಸುವ ಕುರಿತು ಪಕ್ಷದ ರಾಜ್ಯಮಟ್ಟದಲ್ಲಿ ಯಾವುದೇ ಚರ್ಚೆ ನಡೆದಿರಲಿಲ್ಲ. ಇತ್ತೀಚಿನ ರಾಜಕೀಯ ಸ್ಥಿತಿಗತಿ ಆಧರಿಸಿ ಸೂಕ್ತ ಅಭ್ಯರ್ಥಿಗೆ ಅವಕಾಶ ಮಾಡಿಕೊಡಲಾಗಿದೆ. ಪ್ರಾಮಾಣಿಕವಾಗಿ ದುಡಿದ ಪಕ್ಷದ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಡಲಾಗಿದೆ ಎಂದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಖಾತೆ ಹಂಚಿಕೆ ಸವಾಲಾಗಿದೆ. ಮೂರು ವರ್ಷ ಅಭಿವೃದ್ಧಿ ಮಾಡಿಲ್ಲ. ಇನ್ನಾದರೂ ಖಾತೆಗಳ ಕ್ಯಾತೆ ಬಿಟ್ಟು ಕೆಲಸ ಮಾಡಲಿ. ರಾಜ್ಯದ ಸಾಲದ ಹೊರೆ ಹತ್ತು ಲಕ್ಷ ಕೋಟಿ ರೂ. ಮುಟ್ಟಿದೆ, ಮುಖ್ಯಮಂತ್ರಿ ಬದಲಾಗಿದ್ದಾರೆ. ಸರ್ಕಾರದಿಂದ ಅಭಿವೃದ್ಧಿ ನಿರೀಕ್ಷಿಸಲಾಗದ ಸ್ಥಿತಿ ಬಂದಿದೆ. ಪೂರ್ಣ ಪ್ರಮಾಣದಲ್ಲಿ ಸಂಪುಟ ರಚನೆ ಆಗಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರ ನೇಮಕ ಆಗಿಲ್ಲ ಎಂದರು.

# ವಿಧಾನಪರಿಷತ್ ಚುನಾವಣೆ: ರಘು ಕೌಟಿಲ್ಯ ನಾಮಪತ್ರ ಸಲ್ಲಿಕೆ



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಇತರ ನಾಯಕರ ಸಮ್ಮುಖದಲ್ಲಿ ರಘು ಕೌಟಿಲ್ಯ ಸೋಮವಾರ ನಾಮಪತ್ರ ಸಲ್ಲಿಸಿದರು.

ಬೆಂಗಳೂರು, ಜೂ.8– ಕರ್ನಾಟಕ ವಿಧಾನ ಪರಿಷತ್ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಮೈಸೂರಿನ ಆರ್.ರಘು ಕೌಟಿಲ್ಯ ಅವರು ಸೋಮವಾರ ನಾಮಪತ್ರ ಸಲ್ಲಿಸಿದರು.

ಈ ವೇಳೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವ ಡಾ.ಸಿ.ಎನ್. ಅಶ್ವಥ್‌ನಾರಾಯಣ್ ಹಾಗೂ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಉಪಸ್ಥಿತರಿದ್ದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಅತೀ ಹಿಂದುಳಿದ ಮಡಿವಾಳ ಸಮುದಾಯದ ಆರ್.ರಘು ಕೌಟಿಲ್ಯ ಅವರು, ಶಿಕ್ಷಣ ಸಂಸ್ಥೆ ಮೂಲಕ ಶೈಕ್ಷಣಿಕ ಸೇವೆ ಸಲ್ಲಿಸುತ್ತಿದ್ದಾರೆ. ಕೆಲಕಾಲ ಪತ್ರಿಕೋದ್ಯಮದಲ್ಲೂ ಕೆಲಸ ಮಾಡಿದ್ದಾರೆ. ಎರಡು ಬಾರಿ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿ, ಅಲ್ಪ ಮತಗಳ ಅಂತರದಿಂದ ಪರಾಜಿತರಾಗಿದ್ದಾರೆ. ಪಕ್ಷದ ರಾಜ್ಯ ಓಬಿಸಿ ಮೋರ್ಚಾ ಅಧ್ಯಕ್ಷರಾಗಿ ಪಕ್ಷದ ಸಂಘಟನೆಗೆ ಬಲ ತುಂಬಿದ್ದಾರೆ ಎಂದು ತಿಳಿಸಿದರು. ಒಟ್ಟಾರೆ, ರಾಜ್ಯಸಭೆಗೆ ಡಾ.ಎಂ. ನಾಗರಾಜ್, ವಿಧಾನ ಪರಿಷತ್ ಚುನಾವಣೆಗೆ ರಘು ಕೌಟಿಲ್ಯ ಹಾಗೂ ಲಿಂಗರಾಜ್ ಪಾಟೀಲ್ ಅವರನ್ನು ಆಯ್ಕೆ ಮಾಡಿರುವುದು ಪಕ್ಷದ ಎಲ್ಲಾ ಕಾರ್ಯಕರ್ತರಿಗೂ ಸಂತೋಷ ತಂದಿದೆ ಎಂದು ಹೇಳಿದರು.

# ಖರ್ಗೆ, ಪ್ರೊ. ನಾಗರಾಜ್, ಮನ್ಸೂರ್, ಪವನ್ ಖೇರ್ ರಾಜ್ಯಸಭೆಗೆ ಆಯ್ಕೆ ಖಚಿತ




ಮಲ್ಲಿಕಾರ್ಜುನ ಖರ್ಗೆ



ಎಂ. ನಾಗರಾಜು



ಮನ್ಸೂರ್



ಪವನ್ ಖೇರ್

ಬೆಂಗಳೂರು, ಜೂ. 8(ಕೆಎಂಶಿ)– ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಬಿಜೆಪಿಯ ಡಾ.ಎಂ.ನಾಗರಾಜು ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾಗುವುದು ಖಚಿತವಾಗಿದೆ.

ತೆರವಾಗಲಿರುವ ಕರ್ನಾಟಕದ ನಾಲ್ಕು ರಾಜ್ಯಸಭಾ ಸ್ಥಾನಗಳ ಚುನಾವಣೆಗೆ ನಾಮಪತ್ರ ಸಲ್ಲಿಸಲು ಇಂದು ಕಡೆಯ ದಿನವಾಗಿದ್ದು, ವಿಧಾನಸಭೆಯಲ್ಲಿನ ಪಕ್ಷಗಳ ಸಂಖ್ಯಾಬಲ ಆಧರಿಸಿ ಕಾಂಗ್ರೆಸ್ ಮೂವರು ಹಾಗೂ ಬಿಜೆಪಿ ಒಬ್ಬರನ್ನು ಕಣಕ್ಕಿಳಿಸಿದೆ. ಖರ್ಗೆ ಅವರಲ್ಲದೆ, ಕಾಂಗ್ರೆಸ್ ಅಭ್ಯರ್ಥಿಗಳಾಗಿ ಮನ್ಸೂರ್ ಆಲಿ ಖಾನ್ ಹಾಗೂ ಎಐಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರ್ ಕಣದಲ್ಲಿದ್ದಾರೆ.

ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾಗಲು ಒಬ್ಬರಿಗೆ 45 ಮೊದಲ ಪ್ರಾಶಸ್ತ್ಯ ಮತಗಳ ಅಗತ್ಯವಿದೆ, ಕಾಂಗ್ರೆಸ್ ಮೂವರು ಪಕ್ಷೇತರರು ಸೇರಿದಂತೆ 139 ಸದಸ್ಯಬಲ ಹೊಂದಿದ್ದು, ಮೂರು ಸ್ಥಾನಗಳನ್ನು ಅನಾಯಾಸವಾಗಿ ಗೆಲ್ಲಲಿದೆ.

ಬಿಜೆಪಿ 65 ಸದಸ್ಯ ಬಲ ಹೊಂದಿದ್ದು ಒಬ್ಬ ಅಭ್ಯರ್ಥಿಯನ್ನು ಸುಲಭವಾಗಿ ಗೆಲ್ಲಿಸಿಕೊಳ್ಳಬಹುದಾಗಿದೆ. ಜೆಡಿಎಸ್ 18 ಮತಗಳನ್ನು ಹೊಂದಿದ್ದರೂ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿಲ್ಲ. ಇದರಿಂದ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳ ಆಯ್ಕೆ ಸುಗಮವಾಗಲಿದೆ.

# ಆಹಾರ ಪಾರ್ಸೆಲ್, ಬಜ್ಜಿ ಬೋಂಡಾ ಕಟ್ಟಲು ನ್ಯೂಸ್ ಪೇಪರ್ ಬಳಸಿದ್ರೆ ಎಚ್ಚರ

## ಹೋಟೆಲ್, ಬೀದಿಬದಿ ವ್ಯಾಪಾರಿಗಳಿಗೆ ಎಫ್‌ಎಸ್‌ಎಸ್‌ಎಐ ಆದೇಶ!

**ನವದೆಹಲಿ:** ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಲು ಅಥವಾ ಬಡಿಸಲು ಪತ್ರಿಕೆಗಳನ್ನು ಬಳಸುವುದನ್ನು ತಕ್ಷಣವೇ ನಿಲ್ಲಿಸುವಂತೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ನಿರ್ದೇಶನ ನೀಡಿದೆ.

ಎಫ್‌ಎಸ್‌ಎಸ್‌ಎಐ ನ ಪಶ್ಚಿಮ ವಲಯವು ಎಲ್ಲಾ ಆಹಾರ ಉದ್ಯಮ ನಿರ್ವಾಹಕರಿಗೆ ನಿರ್ದೇಶನ ನೀಡಿದ್ದು, ಪತ್ರಿಕೆ ಬಳಕೆಯಿಂದ ಗಂಭೀರ ಆರೋಗ್ಯ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಇದೆ ಎಂದು ಪ್ರಾಧಿಕಾರ ಎಚ್ಚರಿಕೆ ನೀಡಿದೆ. ಇತ್ತೀಚೆಗೆ ಮುಂಬೈನಲ್ಲಿ ವಡಾಪಾವ್ ಮಾರಾಟಗಾರನೊಬ್ಬ ಆಹಾರವನ್ನು ಪತ್ರಿಕೆಯಲ್ಲಿ ಸುತ್ತಿ ನೀಡಿದ್ದ ಘಟನೆ ಬೆಳಕಿಗೆ ಬಂದಿತ್ತು. ಈ ಹಿನ್ನೆಲೆಯಲ್ಲಿ ಎಫ್‌ಎಸ್‌ಎಸ್‌ಎಐ ಮತ್ತು ಬೃಹನ್‌ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಜಂಟಿಯಾಗಿ ಕ್ರಮ ಕೈಗೊಂಡ ನಂತರ ಈ ಸಲಹಾ ಸೂಚನೆ ಹೊರಡಿಸಲಾಗಿದೆ.



ಎಫ್‌ಎಸ್‌ಎಸ್‌ಎಐ ಪ್ರಕಾರ, ಪತ್ರಿಕೆ ಮುದ್ರಣಕ್ಕೆ ಬಳಸುವ ಶಾಯಿಯಲ್ಲಿ ಸೀಸ (ಲೀಡ್) ಸೇರಿದಂತೆ ಹಲವು ಅಪಾಯಕಾರಿ ರಾಸಾಯನಿಕಗಳು ಮತ್ತು ಭಾರ ಲೋಹಗಳು (ಹೆವಿ ಮೆಟಲ್ಸ್) ಇರುತ್ತವೆ. ಇವು ಆಹಾರಕ್ಕೆ ಮಿಶ್ರಣವಾಗಿ ದೀರ್ಘಕಾಲೀನ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡುವ ಅಪಾಯವಿದೆ. ಇದಲ್ಲದೆ, ಪತ್ರಿಕೆಗಳು ಅನೇಕ ಬಾರಿ ಅಸ್ವಚ್ಛ ಪರಿಸರದಲ್ಲಿ ಸಂಗ್ರಹವಾಗಿರುವುದರಿಂದ ಆಹಾರವು ಬ್ಯಾಕ್ಟೀರಿಯಾ ಮತ್ತು ಇತರ ಸೂಕ್ಷ್ಮಾಣುಗಳಿಂದ ಕಲುಷಿತವಾಗುವ ಸಾಧ್ಯತೆ ಹೆಚ್ಚಿದ್ದು, ಆಹಾರದಿಂದ ಹರಡುವ ಕಾಯಿಲೆಗಳಿಗೂ ಕಾರಣ ವಾಗಬಹುದು ಎಂದು ಪ್ರಾಧಿಕಾರ ತಿಳಿಸಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ (ಪ್ಯಾಕೇಜಿಂಗ್) ನಿಯಮಾವಳಿ–2018 ಅನ್ನು ಉಲ್ಲೇಖಿಸಿರುವ ಎಫ್‌ಎಸ್‌ಎಸ್‌ಎಐ, ಆಹಾರ ಸಂಗ್ರಹಿಸಲು, ಸುತ್ತಲು ಅಥವಾ ಬಡಿಸಲು ಪತ್ರಿಕೆ ಅಥವಾ ಅದೇ ರೀತಿಯ ಅನುಮೋದನೆ ಪಡೆಯದ ವಸ್ತುಗಳನ್ನು ಬಳಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಪುನರುಚ್ಚರಿಸಿದೆ.

ಬೀದಿ ಬದಿ ಆಹಾರ ಮಾರಾಟಗಾರರು, ಹೋಟೆಲ್‌ಗಳು, ಕ್ಲೌಡ್ ಕಿಚನ್‌ಗಳು, ಕ್ಯಾಟರಿಂಗ್ ಸಂಸ್ಥೆಗಳು ಹಾಗೂ ಇತರೆ ಎಲ್ಲಾ ಆಹಾರ ಉದ್ಯಮಿಗಳು ಕಡ್ಡಾಯವಾಗಿ ಆಹಾರ ದರ್ಜೆಯ (ಫುಡ್–ಗ್ರೇಡ್) ಅನುಮೋದಿತ ಪ್ಯಾಕೇಜಿಂಗ್ ವಸ್ತುಗಳನ್ನು ಮಾತ್ರ ಬಳಸುವಂತೆ ಸೂಚಿಸಲಾಗಿದೆ. ಇದೇ ವೇಳೆ, ಗ್ರಾಹಕರೂ ಸಹ ಆಹಾರವನ್ನು ಪತ್ರಿಕೆಗಳಲ್ಲಿ ಪ್ಯಾಕ್ ಮಾಡಿ ನೀಡಲಾಗುತ್ತಿದೆಯೇ ಎಂಬುದರ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಹಾಗೂ ಸುರಕ್ಷಿತ ಪ್ಯಾಕೇಜಿಂಗ್‌ಗೆ ಆದ್ಯತೆ ನೀಡಬೇಕು ಎಂದು ಎಫ್‌ಎಸ್‌ಎಸ್‌ಎಐ ಮನವಿ ಮಾಡಿದೆ.

# ಕೆ–ಸಿಇಟಿಯಲ್ಲಿ ಮೈಸೂರಿನ ಬಿಜಿಎಸ್ ಪಿಯು ಕಾಲೇಜು ವಿದ್ಯಾರ್ಥಿಗಳ ಸಾಧನೆ



ಎಸ್. ವಿಶ್ವಜಿತ್



ಎಂ.ಎಂ.ರಾಘವ್



ಗೌರಿ ಕಾಂತರಾಜು



ಸಿದ್ಧಾರ್ಥ ಎಸ್.ರಾಜ್



ಹೆಚ್.ಹರ್ಷಿತಾ



ಎಸ್.ಸಂಜನಾ



ವಿ.ಹಾಸಿನಿ



ಆಸ್ಪಿಯಾ ಸಮ್ರೀನ್



ಬಿ.ಎಂ.ತುಷಿಕಾ



ಸಿ.ವಿ.ಪ್ರಜನ್



ಶುಭಿ ಶ್ರೀವಾಸ್ತವ್



ಎಂ.ವರ್ಷ



ವೈ.ಸಂಜನಾ



ಜೆ.ನಿಹಾರಿಕಾ



ಚೈತ್ರಾ



ಓ.ಪಿ.ವಿಕಾಸ್

ಮೈಸೂರು, ಜೂ.8– ಮೈಸೂರಿನ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ, ಬಿಜಿಎಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ಕೆ–ಸಿಇಟಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.


ಕಾಲೇಜಿನ ಎಸ್.ವಿಶ್ವಜಿತ್(285 ನೇ ರ್‍ಯಾಂಕ್), ಎಂ.ಎಂ.ರಾಘವ್(304), ಗೌರಿ ಕಾಂತರಾಜು(480), ಸಿದ್ಧಾರ್ಥ ಎಸ್.ರಾಜ್(558), ಹೆಚ್.ಹರ್ಷಿತಾ (569), ಎಸ್.ಸಂಜನಾ(613), ವಿ.ಹಾಸಿನಿ(840), ಆಸ್ಪಿಯಾ ಸಮ್ರೀನ್ (957), ಬಿ.ಎಂ.ತುಷಿಕಾ(1301), ಸಿ.ವಿ.ಪ್ರಜನ್(1312), ಶುಭಿ ಶ್ರೀವಾಸ್ತವ್ (1363), ಎಂ.ವರ್ಷ(1439), ವೈ. ಸಂಜನಾ(1584), ಜೆ.ನಿಹಾರಿಕಾ (1608), ಚೈತ್ರಾ(1850), ಓ.ಪಿ.ವಿಕಾಸ್ (1917) ಸೇರಿದಂತೆ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉತ್ತಮ ರ್‍ಯಾಂಕ್ ಗಳಿಸಿದ್ದಾರೆ. ಇವರನ್ನು ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಆಡಳಿತಾಧಿಕಾರಿ ಡಾ.ಆರ್. ಎಸ್.ನರಸೇಗೌಡ, ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ಅಭಿನಂದಿಸಿದ್ದಾರೆ.

# ಸಂಖ್ಯಾ ಕೊರತೆ ನಡುವೆ ಪರಿಷತ್‌ನ 7ನೇ ಸ್ಥಾನ ಗೆಲ್ಲಲು ಸಿಎಂ ಶಿವಕುಮಾರ್, ಕೇಂದ್ರ ಸಚಿವ ಕುಮಾರಸ್ವಾಮಿ ಭಾರೀ ನಾನಾ ಲೆಕ್ಕಾಚಾರ!

ಬೆಂಗಳೂರು, ಜೂ. 8(ಕೆಎಂಶಿ)–ವಿಧಾನಸಭೆಯಿಂದ ವಿಧಾನಪರಿಷತ್‌ನ 7 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅಖಾಡಕ್ಕೆ ಇಳಿದಿದ್ದಾರೆ.

ಜೂನ್ 30ಕ್ಕೆ ತೆರವಾಗುತ್ತಿರುವ 7 ಸ್ಥಾನಗಳಿಗೆ 18ರಂದು ಚುನಾವಣೆ ನಡೆಯಲಿದ್ದು, ಮೂರೂ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಸಂಖ್ಯಾಬಲದ ಕೊರತೆ ಇದ್ದರೂ ಕಾಂಗ್ರೆಸ್ ಹಾಗೂ ಜೆಡಿಎಸ್ 7ನೇ ಸ್ಥಾನಕ್ಕಾಗಿ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ವಿಧಾನಸಭೆಯಲ್ಲಿನ ಪಕ್ಷಗಳ ಸಂಖ್ಯಾಬಲದ ಮೇಲೆ ಕಾಂಗ್ರೆಸ್ 4, ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿದೆ.

ಉಳಿದ ಒಂದು ಸ್ಥಾನ ಗೆಲ್ಲಲು ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ಪೈಪೋಟಿ ನಡೆದಿದೆ. ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್, ಪಿ.ವಿ. ಮೋಹನ್, ತಿಪ್ಪಣ್ಣಪ್ಪ ಕಾಮಕ್ನೂರ್ ಹಾಗೂ ಮಳವಳ್ಳಿ ಶಿವಣ್ಣ ಅಧಿಕೃತ ಅಭ್ಯರ್ಥಿಗಳಾಗಿದ್ದಾರೆ. ಬಿಜೆಪಿಯಿಂದ ಲಿಂಗರಾಜು ಪಾಟೀಲ್ ಹಾಗೂ ರಘು ಕೌಟಿಲ್ಯ ಕಣಕ್ಕಿಳಿದಿದ್ದಾರೆ. 7ನೇ ಸ್ಥಾನ ಗಳಿಸಿಕೊಳ್ಳಲು ಕಾಂಗ್ರೆಸ್ ವಿನಯ್ ಕಾರ್ತಿಕ್ ಅವರನ್ನು ಕಣಕ್ಕಿಳಿಸಿದೆ.



ಇದೇ ಸ್ಥಾನಕ್ಕಾಗಿ ಜೆಡಿಎಸ್ ಕೊನೆ ಗಳಿಗೆಯಲ್ಲಿ ಗೋವಿಂದರಾಜು ಅವರನ್ನು ಚುನಾವಣಾ ಕಣಕ್ಕಿಳಿಸುವ ಮೂಲಕ ಕಾಂಗ್ರೆಸ್ ಸುಲಭವಾಗಿ ಗೆಲ್ಲಬಹುದಾದ ಸ್ಥಾನ ಕಸಿದುಕೊಳ್ಳಲು ಯತ್ನಿಸಿದೆ.

ವಿಧಾನಸಭೆಯಲ್ಲಿ ಪಕ್ಷಗಳ ಬಲಾಬಲದ ಆಧಾರದ ಮೇಲೆ ಗೆಲುವಿಗೆ ಒಬ್ಬ ಅಭ್ಯರ್ಥಿಗೆ 28 ಮೊದಲ ಪ್ರಾಶಸ್ತ್ಯ ಮತಗಳ ಅಗತ್ಯವಿದೆ. ಕಾಂಗ್ರೆಸ್‌ಗೆ ತನ್ನ 5ನೇ ಅಭ್ಯರ್ಥಿ ಗೆಲುವಿಗೆ 4 ಮತಗಳ ಕೊರತೆ ಇದ್ದರೆ, ಜೆಡಿಎಸ್‌ಗೆ 10 ಮತಗಳ ಅಗತ್ಯವಿದೆ.

ಮಿತ್ರ ಪಕ್ಷ ಬಿಜೆಪಿಯ ಹೆಚ್ಚುವರಿ 4 ಮತಗಳನ್ನು ತಮ್ಮ ಪಕ್ಷದ ಅಭ್ಯರ್ಥಿಗೆ ದೊರಕಿಸಿಕೊಳ್ಳಲು, ಕುಮಾರಸ್ವಾಮಿ ನಡೆಸಿದ ಮಾತುಕತೆ ಫಲವಾಗಿ ಆ ಹೆಚ್ಚುವರಿ ಮತಗಳು ಜೆಡಿಎಸ್‌ಗೆ ಬೀಳಲಿವೆ.

ಇದರೊಂದಿಗೆ ಪಕ್ಷೇತರ ಶಾಸಕ ಜನಾರ್ದನ ರೆಡ್ಡಿ, ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್ ಮತಗಳನ್ನು ತಮ್ಮ ಅಭ್ಯರ್ಥಿಗೆ ಪಡೆದುಕೊಳ್ಳುವಲ್ಲಿ ಕುಮಾರಸ್ವಾಮಿ ಯಶಸ್ವಿಯಾಗಿದ್ದಾರೆ.

ಕಾಂಗ್ರೆಸ್‌ನಲ್ಲಿನ ಆಂತರಿಕ ಕಚ್ಚಾಟದ ಲಾಭ ಪಡೆಯಲು ಭಾನುವಾರ ರಾತ್ರಿ ಪ್ರಯತ್ನ ನಡೆಸಿದ ನಂತರ ಇಂದು ತಮ್ಮ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದಾರೆ. ಕಾಂಗ್ರೆಸ್ ತನ್ನ 5ನೇ ಅಭ್ಯರ್ಥಿ ಗೆಲುವಿಗೆ 4 ಮತಗಳ ಕೊರತೆ ಇದ್ದು, ಬಿಜೆಪಿಯಿಂದ ಉಚ್ಚಾಟನೆಗೊಂಡ ಇಬ್ಬರು ಶಾಸಕರಾದ ಎಸ್.ಟಿ.ಸೋಮಶೇಖರ್ ಹಾಗೂ ಶಿವರಾಂ ಹೆಬ್ಬಾರ್ ಈಗಾಗಲೇ ಕಾಂಗ್ರೆಸ್ ಜೊತೆ ಗುರುತಿಸಿಕೊಂಡಿದ್ದಾರೆ.

ಇನ್ನು ಗೆಲುವಿಗೆ ಅಗತ್ಯವಿರುವ 2 ಮತಗಳನ್ನು ಶಿವಕುಮಾರ್, ತಮ್ಮ ಅಭ್ಯರ್ಥಿ ವಿನಯ್ ಕಾರ್ತಿಕ್ ಅವರಿಗೆ ತಂದುಕೊಡುವಲ್ಲಿ ಯಶಸ್ವಿಯಾಗುವರೇ ಎಂಬುದನ್ನು ಕಾದು ನೋಡಬೇಕಿದೆ.

## ನಕ್ಕರೆ ಅದೇ ಸ್ವರ್ಗ

ಗುಂಡ : ನಮ್ಮ ದೇಶದ ಗಂಡಸರಿಗೆ ದೂರದೃಷ್ಟಿ ತುಂಬಾ ಚೆನ್ನಾಗಿದೆ.
ತಿಮ್ಮ : ಅದು ಹೇಗೆ ಗುಂಡಣ್ಣ?
ಗುಂಡ : ನಮ್ಮ ಗಂಡಸರಿಗೆ ಪಕ್ಕದಲ್ಲಿ ಇರೋ ಹೆಂಡತಿ ಕಾಣೋದಿಲ್ಲ. ದೂರದಲ್ಲಿ ಬರೋ ಪಕ್ಕದ ಮನೆಯವಳು ಕಾಣುತ್ತಾಳೆ.

ಮೈಸೂರು ಮಿತ್ರ

ಮಂಗಳವಾರ, ಜೂನ್ 9, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತ ವಾಹಿನಿ..........

ಮನಸ್ಸಿಗೆ ಬಂದಿದ್ದನ್ನೆಲ್ಲಾ ತಿಂದರೆ ಅಜೀರ್ಣವಾಗಿ ಆರೋಗ್ಯ ಹಾಳಾಗುತ್ತದೆ.
ಮನಸ್ಸಿಗೆ ಬಂದಂತೆ ಮಾತಾಡಿದರೆ ಸಂಬಂಧಗಳ ಆರೋಗ್ಯ ಹಾಳಾಗುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಇದ್ದದ್ದು ಇದ್ದಂಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದಂತೆ

## ನಿಮ್ಮ ಪತ್ರಗಳು

### ರೌಡಿ ಪ್ರತಿಬಂಧಕ ದಳ ರಚನೆಗೆ ಸಿಎಂ ಆದೇಶಿರುವುದು ಸ್ವಾಗತಾರ್ಹ

ಮಾನ್ಯರೆ,

ಠಾಣೆ ಹಂತದಲ್ಲೇ 'ರೌಡಿ ನಿಗ್ರಹ ಪಡೆ' ರಚಿಸುವಂತೆ ನೂತನ ಮುಖ್ಯಮಂತ್ರಿ



ಡಿ.ಕೆ.ಶಿವಕುಮಾರ್ ಅವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿರುವ ಹಿನ್ನೆಲೆಯಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕರು ತಕ್ಷಣವೇ ರಾಜ್ಯದಲ್ಲಿ ರೌಡಿ ಪ್ರತಿಬಂಧಕ ದಳ ರಚನೆಗೆ ಮಾರ್ಗಸೂಚಿ ಹೊರಡಿಸಿರುವುದು ಸ್ವಾಗತಾರ್ಹ.

ರಾಜ್ಯದಲ್ಲಿ ರೌಡಿಗಳ ಚಟುವಟಿಕೆಗಳನ್ನು ತಡೆದು ಸಮಾಜದಲ್ಲಿ ಜನರು ಶಾಂತಿ-ನೆಮ್ಮದಿಯಿಂದ ಬದುಕಲು ರಾಜ್ಯ ಸರ್ಕಾರ ಕೈಗೊಂಡಿರುವ ಈ ಕ್ರಮ ಭಾರೀ ಮೆಚ್ಚುಗೆಗೆ ಪಾತ್ರವಾಗಿದೆ. ಆಯಾಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ರೌಡಿಗಳ ವಿವರಗಳನ್ನು ಸ್ಥಳೀಯ ಪತ್ರಿಕೆಗಳಲ್ಲೂ ಪ್ರಕಟಿಸಬೇಕು. ಇದರಿಂದ ಸಾರ್ವಜನಿಕರು ಎಚ್ಚೆತ್ತುಕೊಂಡು ಅಂತಹವರಿಂದ ದೂರವಿರುತ್ತಾರೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸುಮಾರು 600 ರೌಡಿ ಶೀಟರ್‌ಗಳು ಇರುವುದಾಗಿ ಮೈಸೂರಿನ ಹಿರಿಯ ಪೊಲೀಸ್ ಅಧಿಕಾರಿಗಳೇ ತಿಳಿಸಿರುವುದು ಆತಂಕಕಾರಿ ಸಂಗತಿ. ರಿಯಲ್ ಎಸ್ಟೇಟ್ ಮಾಫಿಯಾದವರು ಇಂತಹ ರೌಡಿ ಶೀಟರ್‌ಗಳ ನೆರವಿನಿಂದ ಸಾರ್ವಜನಿಕರಿಗೆ ಉಪಟಳ ನೀಡುತ್ತಾರೆ. ಇಂತಹ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸರ್ಕಾರದ ಈ ಕ್ರಮ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

### ಮರೆಯಲಾಗದ ಯುವರಾಣಿ ಶ್ರೀಮತಿ ಕೆಂಪು ಚೆಲುವಾಜಮ್ಮಣ್ಣಿ

ಮಾನ್ಯರೆ,

ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾದ ಕೆಂಪು ಚೆಲುವಾಜಮ್ಮಣ್ಣಿ



ನಗರ (ಕೆ.ಸಿ.ನಗರ) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬೆಳ್ಳಿ ಹಬ್ಬದ ಸಂಭ್ರಮದ ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು, ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಹೋದರರಾದ ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಅವರ ಧರ್ಮಪತ್ನಿ ಯುವರಾಣಿ ಶ್ರೀಮತಿ ಕೆಂಪು ಚೆಲುವಾಜಮ್ಮಣ್ಣಿ ಅವರು ತಮ್ಮ ಮಗನಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಆಧುನಿಕ ಪದ್ಧತಿಗಳನ್ನು ಅಳವಡಿಸಿಕೊಂಡು, ಆಧ್ಯಾತ್ಮಿಕ ಜೀವನ, ಧರ್ಮಪಾಲನೆ, ಅರಮನೆಯ ಮೂಲ ಪರಂಪರೆಯ ಮೌಲ್ಯಗಳನ್ನು ಮುಂದುವರಿಸಬೇಕು ಎಂದು ಮಾದರಿ ರೂಪಿಸಿ, ಜಯಚಾಮರಾಜೇಂದ್ರ ಒಡೆಯರ್ ಅವರು 'ದತ್ತಾತ್ರೇಯ' ಪುಸ್ತಕ ಬರೆಯಲು ಕೆಂಪು ಚೆಲುವಾಜಮ್ಮಣ್ಣಿ ಅವರು ಪ್ರೇರಣೆಯಾಗಿದ್ದಾರೆ ಎಂದಿದ್ದಾರೆ.

ಅವರ ಕೊಡುಗೆ ಮೈಸೂರು ಸಂಸ್ಥಾನಕ್ಕೆ ಅಪಾರ. ಅವರು ಎಂದಿಗೂ ಮರೆಯಲಾಗದ ಯುವರಾಣಿ ಎಂದು ತಿಳಿಸಿರುವುದು ಶ್ಲಾಘನೀಯ. ಇತಿಹಾಸಕಾರ ಧರ್ಮೇಂದ್ರಕುಮಾರ್ ಅರೇನಹಳ್ಳಿ ಅವರು, ಚಾಮುಂಡಿ ಬೆಟ್ಟದ ಪಾದದಲ್ಲಿ ಹಾಗೂ ಲಲಿತಮಹಲ್ ಕಟ್ಟಡಕ್ಕೆ ಧಕ್ಕೆಯಾಗಲಿದೆ ಎಂದು ನ್ಯಾಯಾಲಯದಲ್ಲಿದ್ದ ದಾವೆ ವಿರುದ್ಧ ಹೋರಾಡಿ ಬಡಾವಣೆ ನಿರ್ಮಾಣಕ್ಕೆ ಕಾರಣರಾದ ತಿಮ್ಮೇಗೌಡ ಅವರನ್ನು ಬಡಾವಣೆಯ ನಿವಾಸಿಗಳು ಸ್ಮರಿಸಬೇಕು ಎಂದು ಹೇಳಿರುವುದು ಸ್ವಾಗತಾರ್ಹ. ಕೆಂಪು ಚೆಲುವಾಜಮ್ಮಣ್ಣಿ ಅವರ ಹೆಸರಿನಲ್ಲಿ ಅರಮನೆ ಸಿಬ್ಬಂದಿಗಳಿಗೆ ಬಡಾವಣೆ ನಿರ್ಮಿಸಿ ಉದ್ಯಾನವನ, ಮರಗಳ ಪೋಷಣೆಯೊಂದಿಗೆ ಪರಿಸರ ಉಳಿವಿಗೆ ಒತ್ತು ನೀಡಲಾಗಿದೆ. ಸ್ವಾಗತ ಕಮಾನು, ಯೋಗ ಕೇಂದ್ರ, ವ್ಯಾಯಾಮ ಶಾಲೆ, ರಸ್ತೆ ಅಗಲೀಕರಣ ಹಾಗೂ ಸಂಘದ ಕಚೇರಿ ನಿರ್ಮಾಣಕ್ಕೆ ಇರುವ ಬೇಡಿಕೆಗಳನ್ನು ಈಡೇರಿಸಲು ಕ್ರಮಹಿಸಲಾಗುವುದು ಎಂದು ಯದುವೀರ್ ಅವರು ಹೇಳಿರುವುದು ಪ್ರತಿಯೊಬ್ಬರೂ ಮೆಚ್ಚುವಂತದ್ದು.

– ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

### ಜನಪ್ರತಿನಿಧಿಗಳು ಅಧಿಕಾರಕ್ಕಾಗಿ ಹಠ ಮಾಡುವುದು ಶೋಭೆಯಲ್ಲ

ಮಾನ್ಯರೆ,

ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗೆ ಕೇವಲ ಅಧಿಕಾರಕ್ಕಿಂತ ಜನಸೇವೆ ಮತ್ತು ಸಾರ್ವಜನಿಕ ಕಲ್ಯಾಣವೇ ಅತ್ಯಂತ ಮುಖ್ಯವಾದದ್ದು. ಅಧಿಕಾರವು ಜನಹಿತಕ್ಕಾಗಿ ಸಿಕ್ಕಿರುವ ಸಾಧನವೇ ಹೊರತು ಸ್ವಾರ್ಥಕ್ಕಲ್ಲ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರ ಸಂಪುಟದಲ್ಲಿ ಜನಪ್ರತಿನಿಧಿಯೊಬ್ಬರು ತನಗೆ ಇಂತಹದ್ದೇ ಮಂತ್ರಿ ಹುದ್ದೆ ಬೇಕೆಂಬ ಹಠ ಹಿಡಿದು ರಾಜೀನಾಮೆ ಪ್ರಹಸನದ ಬೃಹತ್ ನಾಟಕ ಪ್ರದರ್ಶನ ತೋರಿದ್ದು ಶೋಭೆ ತರುವ ಸಂಗತಿಯಲ್ಲ. ಚುನಾಯಿತ ಪ್ರತಿನಿಧಿಗಳು ಜನರಿಗೆ ಸೇವೆ ಸಲ್ಲಿಸಲು ಪ್ರಮಾಣ ವಚನ ಸ್ವೀಕರಿಸಿ ಸಾರ್ವಜನಿಕರ ಹಿತಕ್ಕಾಗಿ ಶ್ರಮಿಸಬೇಕೇ ವಿನಃ ತಾವು ಬಯಸುವ ಮಂತ್ರಿ ಹುದ್ದೆಯೇ ಬೇಕೆಂಬ ಹಠ ಮಾಡುವುದಲ್ಲ.

ರಾಜಕಾರಣಿಗಳಿಗೆ ಜನಹಿತವೇ ಪರಮೋಚ್ಚವಾದದ್ದು. ಅಧಿಕಾರ ಹಾಗೂ ಸ್ಥಾನಮಾನಗಳು ತಾತ್ಕಾಲಿಕ. ಆದರೆ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವುದು ಮತ್ತು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವುದು ಅವರ ಮುಖ್ಯ ಗುರಿಯಾಗಿರಬೇಕು. ತಾವು ನೀಡುವ ಅಧಿಕಾರ ಪಾರದರ್ಶಕವಾಗಿರಬೇಕು. ಅಧಿಕಾರ ದುರುಪಯೋಗಪಡಿಸಿಕೊಳ್ಳದೆ, ಪ್ರಾಮಾಣಿಕವಾಗಿ ಹಾಗೂ ಭ್ರಷ್ಟಾಚಾರ ಮುಕ್ತವಾಗಿ ಕೆಲಸ ಮಾಡುವುದೇ ಆದರ್ಶ ಜನಪ್ರತಿನಿಧಿಯ ಲಕ್ಷಣ. ಇಷ್ಟೆಲ್ಲಾ ಸದ್ಗುಣಗಳನ್ನು ಬೆಳೆಸಿಕೊಂಡು ಆದರ್ಶ ಪ್ರಾಯವಾಗಿರಬೇಕಾದ ರಾಜಕಾರಣಿಗಳು ತಮಗೆ ಕೊಟ್ಟ ಕುದುರೆ ಏರದೆ, ಸವಾರಿ ಮಾಡಲು ಇಂತಹದ್ದೇ ಕುದುರೆ ಬೇಕೆಂಬ ಹಠ ಹಾಗೂ ಧೋರಣೆ ಯಾವುದೇ ರಾಜಕಾರಣಿಗಳಿಗೂ ಭೂಷಣವಲ್ಲ!

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

# ನೈತಿಕ ತಿಳುವಳಿಕೆಗಳ ಕಥನ ಗೀತೆಗಳು

ಕಾಲ ಬದಲಾದಂತೆ ಕೆಲವೊಮ್ಮೆ ನಮ್ಮ ಸಮಾಜದ ಸಾಮಾಜಿಕ ತಿಳುವಳಿಕೆಗಳೂ ಬದಲಾಗುತ್ತವೆ. ಹಾಗೆ ಬದಲಾಗಲು ಗಡಿಯಾರದ ಮುಳ್ಳು ಕಾರಣ ಅಲ್ಲ.

ಮನುಷ್ಯ ತಾನೇ ಕಟ್ಟಿಕೊಂಡ ತನ್ನ ಸಮಾಜದ ಇತಿಮಿತಿಗಳನ್ನು 'ಹಳತು' ಎನ್ನುವ ಹೆಸರಿನಲ್ಲಿ ಹೊಸತಿಗೆ ಬದಲಾಯಿಸಿಕೊಳ್ಳುವ ವಿಧಾನ. ಈ ವಿಧಾನದಿಂದ ಎಲ್ಲವೂ ನಿಧಾನವಾಗಿ ಕಣ್ಮರೆಯಾಗಿ ಹಳತಿನ ಜಾಗದಲ್ಲಿ ಹೊಸತು ತಲೆಯೆತ್ತಿ ನಿಲ್ಲುತ್ತದೆ. ನಾಳೆ ಅದೂ ಹಳತೇ ಆಗಿ ಮತ್ತಿನ್ನೇನೋ ಹುಟ್ಟುತ್ತದೆಂಬ ಸತ್ಯ ಗೊತ್ತಾದರೂ ಜಾಣಕುರುಡು ಈ ಮನುಷ್ಯ ಸಮಾಜವನ್ನು ದಿನೇದಿನೆ ವಿಸ್ತರಿಸುತ್ತಲೇ ಇರುತ್ತದೆ. ಏನಪ್ಪಾ ಇದು ಪೀಠಿಕೆ ಅಂತ ಹುಬ್ಬೇರಿಸಬೇಡಿ. ಇದು ಮನರಂಜನೆಯ ವಿಷಯ.

ಹಾಡು ಕೇಳುವ ಸಮಯ, ಕ್ಷಮಿಸಿ, ಹಾಡು ಹುಟ್ಟಿದ ಸಮಯ. ಕನ್ನಡ ಹಾಗೂ ಭಾರತೀಯ ಚಿತ್ರರಂಗದಲ್ಲಿ ಈ ಒಂದು ಶತಮಾನದಲ್ಲಿ ಅದೆಷ್ಟು ಸಿನಿಮಾಗಳು ಬಂದು ಹೋಗಿದ್ದಾವೋ ಗೊತ್ತಿಲ್ಲ. ಆದರೆ ಅವುಗಳಲ್ಲಿ ಅಳವಡಿಸಿದ ಮಧುರಗೀತೆಗಳು ಮಾತ್ರ ಇವತ್ತಿಗೂ ನಮ್ಮನ್ನು ಬಿಡದೇ ಕಾಡುತ್ತಿವೆ. ಆ ಚಿತ್ರದ ಹೆಸರು ಮರೆತಿರಬಹುದು. ಆದರೆ ನಮಗಿಷ್ಟವಾದ ಆ ಹಾಡು ಕೇಳುತ್ತಿದ್ದರೆ ಕ್ಷಣ ಕಾಲ ಎಲ್ಲವನ್ನು ಮರೆತು ಆತ್ಮೋಲ್ಲಾಸ ಅನುಭವಿಸುತ್ತಿರುತ್ತೇವೆ.

ಇವತ್ತಿಗೂ ಸಿನಿಮಾಗಳನ್ನೇ ನಂಬಿದ ಡಿಆರ್‌ಸಿಗಳು, ಥಿಯೇಟರ್‌ಗಳು ಹೊಸ ಸಿನಿಮಾಗಳಿಗಾಗಿ ಕಾಯುತ್ತಿದ್ದರೆ; ರಾಜ್ಯಾದ್ಯಂತ ಇರುವ ಎಫ್‌ಎಂ ಸ್ಟೇಷನ್‌ಗಳು ಈ ಸಿನಿಮಾ ಹಾಡುಗಳನ್ನೇ ನಂಬಿ ದಿನ ನೂಕುತ್ತವೆ. ಎಲೆಕ್ಟ್ರಾನಿಕ್ ಮೀಡಿಯಾದ ಟಿವಿ ಚಾನೆಲ್‌ಗಳು ಕೂಡ ಸರಿಗಮಪ, ಎದೆ ತುಂಬಿಹಾಡುವೆನು, ಮಧುರ ಮಧುರವಿ ಮಂಜುಳಗಾನ, ಕನ್ನಡಕೋಗಿಲೆ ಮುಂತಾದ ರಿಯಾಲಿಟಿ ಶೋಗಳನ್ನು ಪ್ರಚುರಪಡಿಸಿಕೊಂಡು ಸಿನಿಮಾ ಹಾಡುಗಳಿಗೆ ಇರುವ ಪೂರಕ ಲಾಭಾಂಶವನ್ನು ಎನ್‌ಕ್ಯಾಶ್ ಮಾಡುತ್ತಿವೆ.

ಅಂದರೆ ಹಳೆಯ ತಲೆಮಾರಿಗೆ, ಹಾಡುಗಳ ಮಧುರಗೀತೆಗಳು, ಹೊಸ ತಲೆಮಾರಿಗೆ ಟಪ್ಪಾಂಗುಚ್ಚಿ ಗೀತೆಗಳು ಹೀಗೆ ಎಲ್ಲಾ ಕಾಲಕ್ಕೂ ಈ ಹಾಡುಗಳು ತಮ್ಮ ತಮ್ಮ ಅಸ್ತಿತ್ವ ಉಳಿಸಿಕೊಂಡು ಹೊಸ ಟ್ರೆಂಡ್ ಸೃಷ್ಟಿಸುತ್ತಾ ಬಂದಿವೆ. ಅದು ಈಗಲೂ ಮುಂದುವರೆದಿದೆ. ಯಾವತ್ತಿಗೂ ಹಾಡುಗಳಿಗೆ ಬೇಡಿಕೆ ಇಲ್ಲದ ಕಾಲವೇ ಇಲ್ಲ. ಹಾಗಾಗಿ ಎಲ್ಲ ವಯೋಮಾನದವರಿಗೂ ಈ ಸಿನಿಮಾ ಹಾಡುಗಳು ಅವರವರ ಎದೆಯಲ್ಲಿ ಸದ್ದಿಲ್ಲದೇ ಸಾಂಗತ್ಯ ಸ್ಥಾಪಿಸಿಕೊಂಡಿವೆ. ಈ ಕೊರೊನಾ ಕಾಲದಲ್ಲಿಯೂ ಕೂಡ ಹಾಡು ಹಳೆಯದಾದರೇನು ಅದರ ಇಂಪು ಕಿವಿಗೆ ಸದಾ ತಂಪೆರೆಯುವ ನಿತ್ಯಧಾರೆಯಂತೆ ಸ್ಫುರಿಸುತ್ತಲೇ ಇದೆ.

ಸ್ಟೀರಿಯೋಗಳಿಲ್ಲದ ಕಾರುಗಳಿಲ್ಲ. ಆಡಿಯೋಗಳಿಲ್ಲದ ಮನೆಗಳಿಲ್ಲ. ಕಾರಿನ ಮಾಲೀಕರು ಕಾರ್ ಸ್ಟೀರಿಯೋಗಳ ಮೊರೆ ಹೋಗಲು ಕಾರಣ ತಮ್ಮ ನಿತ್ಯ ಪ್ರಯಾಣದ ಸಮಯದಲ್ಲಿ ಹಾಡುಗಳನ್ನು ಕೇಳುತ್ತಾ ಡ್ರೈವ್ ಮಾಡಿ ಗುರಿಮುಟ್ಟುವ ತವಕ. ಇಂಥ ಸಿನಿಮಾ ಹಾಡುಗಳು ಹೇಗೆ ಹುಟ್ಟಿದವು ಅವುಗಳನ್ನು ಯಾವ ಸಮಯ ಸಂದರ್ಭ, ಸ್ಫೂರ್ತಿಗಳಿಂದ ಬರೆದರು ಎನ್ನುವ ವಿಷಯವನ್ನಿಟ್ಟುಕೊಂಡು 'ಹಾಡು ಹುಟ್ಟಿದ ಸಮಯ' ಎಂಬ ಎ.ಆರ್.ಮಣಿಕಾಂತ್ ಬರೆದ ಪುಸ್ತಕವೇ ಲಭ್ಯವಿದೆ ಎಂದ ಮೇಲೆ, ಈ ಸಿನಿಮಾ ಹಾಡುಗಳ ಇತಿಹಾಸವೇ ಒಂದು ಕುತೂಹಲ ಮತ್ತು ಆತ್ಮ ಸಂತೋಷಗಳ ಜೊತೆ ತಾವು ಹುಟ್ಟಿದ ಎಳೆಯನ್ನು ಬಿಚ್ಚಿಡುತ್ತವೆ. ಇಂತಹ ಪರಿಣಾಮಕಾರಿ ಮಾಧ್ಯಮವಾಗಿ ಹೊರಹೊಮ್ಮಿದ ಸಿನಿಮಾ ಗೀತೆಗಳು ಹಾಗೂ ಸಿನಿಮಾ ಸಂಗೀತ, ಇವತ್ತಿಗೂ ಹಳೆಯ ಮಧುರ ಗೀತೆಗಳ ಜನಪ್ರಿಯತೆಯನ್ನು ಹೆಚ್ಚಿಸಿವೆ.

ಹೀಗೆ ಮನೋಮಂದಿರದಲ್ಲಿ ತಮ್ಮ ಲಯಮಾಧುರ್ಯದಿಂದ ಮೋಡಿ ಮಾಡಿ ಇವತ್ತಿಗೂ ನಮ್ಮೆಲ್ಲರನ್ನು ಹಿಡಿದಿಟ್ಟುಕೊಂಡು ಎಂಟರ್‌ಟೈನ್ ಮಾಡುತ್ತಿವೆ. ಈ ದಿಸೆಯಲ್ಲಿ ಸಿನಿಮಾ ಸಂಗೀತ ಮತ್ತು ಗೀತಸಾಹಿತ್ಯ ಎಷ್ಟು ಪವರ್‌ಫುಲ್ ಎಂಬುದನ್ನು ಮರೆಯಲಾಗದು. ಬೆಳ್ಳಿತೆರೆಯ ಪಾತ್ರ ಪೋಷಣೆಗಾಗಿ ಹುಟ್ಟಿಕೊಂಡ ದೃಶ್ಯಾವಳಿಯ ಈ ಹಾಡಿನ ಪರಂಪರೆ ತನ್ನದೇ ಆದ ಒಂದು ದೊಡ್ಡ ಕೇಳುಗ ವರ್ಗವನ್ನು ಸೃಷ್ಟಿಸಿಕೊಂಡುಬಿಟ್ಟಿದೆ. ಅದು ಸಾಧುವೂ ಹೌದು, ಸಿದ್ಧಪ್ರಸಿದ್ಧವೂ ಹೌದು. ಅದು ಬಿಡಿ, ಆದರೆ ಎಲ್ಲರ ಸ್ಮೃತಿಯಲ್ಲಿ ಉಳಿದ ಹಳೆಯ ಸಿನಿಮಾಗೀತೆಗಳಲ್ಲಿ ಬಹುಪಾಲು ಅರವತ್ತು ಎಪ್ಪತ್ತರ ದಶಕದಲ್ಲಿ ಮೂಡಿ ಬಂದ ಮಧುರ ಯುಗಳ ಗೀತೆಗಳೇ ಇಂದಿಗೂ ಅತ್ಯಂತ ಜನಪ್ರಿಯ, ಆ ಕಾರಣಕ್ಕಾಗಿಯೇ ಇಂದಿಗೂ ಅವು ತಮ್ಮ ಅಸ್ತಿತ್ವ ಉಳಿಸಿಕೊಂಡಿವೆ.



> “ ಹಳೆಯ ತಲೆಮಾರಿಗೆ, ಹಾಡುಗಳ ಮಧುರ ಗೀತೆಗಳು, ಹೊಸ ತಲೆಮಾರಿಗೆ ಟಪ್ಪಾಂಗುಚ್ಚಿ ಗೀತೆಗಳು ಹೀಗೆ ಎಲ್ಲಾ ಕಾಲಕ್ಕೂ ಈ ಹಾಡುಗಳು ತಮ್ಮ ತಮ್ಮ ಅಸ್ತಿತ್ವ ಉಳಿಸಿಕೊಂಡು ಹೊಸ ಟ್ರೆಂಡ್ ಸೃಷ್ಟಿಸುತ್ತಾ ಬಂದಿವೆ. ಅದು ಈಗಲೂ ಮುಂದುವರೆದಿದೆ. ಯಾವತ್ತಿಗೂ ಹಾಡುಗಳಿಗೆ ಬೇಡಿಕೆ ಇಲ್ಲದ ಕಾಲವೇ ಇಲ್ಲ. ಹಾಗಾಗಿ ಎಲ್ಲಾ ವಯೋ ಮಾನದವರಿಗೂ ಈ ಸಿನಿಮಾ ಹಾಡುಗಳು ಅವರವರ ಎದೆಯಲ್ಲಿ ಸದ್ದಿಲ್ಲದೇ ಸಾಂಗತ್ಯ ಸ್ಥಾಪಿಸಿಕೊಂಡಿವೆ. ಈ ಕೊರೊನಾ ಕಾಲದಲ್ಲೂ ಹಾಡು ಹಳೆಯದಾದರೇನು ಅದರ ಇಂಪು ಕಿವಿಗೆ ಸದಾ ತಂಪೆರೆಯುವ ನಿತ್ಯಧಾರೆಯಂತೆ ಸ್ಫುರಿಸುತ್ತಲೇ ಇದೆ.

ಹೊಸ ತಲೆಮಾರಿನ ಚಿತ್ರಗಳಲ್ಲಿ ನಮ್ಮ ಹಳೆಯ ಕಾಲದ ಚಿತ್ರ ಸಾಹಿತ್ಯವಾಗಲೀ ಅಥವಾ ಟ್ಯೂನ್‌ಗಳಾಗಲೀ ಬಳಕೆಯಾಗುತ್ತಿಲ್ಲ ಯಾಕೆ? ಪ್ರೇಕ್ಷಕರ ಅಭಿರುಚಿ ಬದಲಾಗಿದೆ. ಸಾಮಾಜಿಕ ಪರಿಸರ ಬದಲಾಗಿದೆ. ಅವರನ್ನು ಒಪ್ಪಿಸುವ ಭರದಲ್ಲಿ ಸಾಹಿತ್ಯ ಸಂಗೀತದ ಸದಭಿರುಚಿಯ ಪ್ರೇಕ್ಷಕರು ಕಿರಿಕಿರಿ ಅನುಭವಿಸುವ ಅದೆಷ್ಟೋ ಟಪ್ಪಾಂಗುಚಿ ಹಾಡುಗಳು ಇಂದು ಜಾಗ ಮಾಡಿಕೊಂಡು ಓಡಾಡುತ್ತಿವೆ. ಹಾಡಿನಲ್ಲೂ ಡಬ್ಬಲ್ ಮೀನಿಂಗ್ ತುರುಕಿ ಶಿಳ್ಳೇ ಹೊಡಿಸಿಕೊಳ್ಳುವ ಜನಪ್ರಿಯ ವೇಗವನ್ನು ಚಿತ್ರಸಾಹಿತ್ಯಕ್ಕೆ ಅನಿವಾರ್ಯವಾಗಿ ತುಂಬಲಾಗುತ್ತಿದೆ. ವ್ಯಾಪಾರ, ಲೆಕ್ಕಾಚಾರ, ಜನರೇಷನ್ನು ಪ್ರೆಸೆಂಟೇಷನ್ನು ಅಂತ ಏನೇ ಹೇಳಿದರೂ ಆವತ್ತಿನ ಕಾಲಕ್ಕೆ ಸಿನಿಮಾ ರಿಲೀಸ್ ಆಗುವ ಮುನ್ನ ಅದರ ಹಾಡುಗಳ ಹಕ್ಕುಗಳನ್ನು ಪಡೆದು ಹಾಡುಗಳಿಗೆ ರಾಯಲ್ಟಿ ಕೊಟ್ಟು ಕ್ಯಾಸೆಟ್ ತಯಾರಿಸಿ ಮಾರುತ್ತಿದ್ದ ಆಡಿಯೋ ಕಂಪನಿಗಳು ಇಂದು ದಿಕ್ಕಾಪಾಲಾಗಿವೆ.

ಆನಂದ್ ಆಡಿಯೋ, ಆಕಾಶ್ ಆಡಿಯೋ, ಲಹರಿಯಂಥ ಆಡಿಯೋ ಕಂಪನಿಗಳು ಪೈರಸಿ, ಕ್ವಾಲಿಟಿ, ಸಮಸ್ಯೆಗಳಿಂದ ಬಳಲಿದ್ದಲ್ಲದೇ, ಚಿತ್ರ ನಿರ್ಮಾಪಕರೇ ಕಂಪನಿ ಮೆಟ್ಟಿಲು ಸವೆಸಿದರೂ ಈ ಕಾಲದ ಹಾಡುಗಳನ್ನು ನಂಬಿ ಆಡಿಯೋ ವ್ಯವಹಾರ ನಡೆಸುವ ಸುಸ್ಥಿತಿಯಲ್ಲಂತೂ ಇಲ್ಲ. ಹಾಗಂತ ಗೆಳೆಯ ಲಹರಿಯ ವೇಲು ಖಾಸಗಿಯಾಗಿ ಒಮ್ಮೆ ಹೇಳಿಕೊಂಡಿದ್ದುಂಟು. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಮುಂದೊಂದು ದಿನ ಮಧುರಗೀತೆಗಳು ವಿಜೃಂಭಿಸುತ್ತಿದ್ದ ಜಾಗದಲ್ಲಿ ಶಿಳ್ಳೆ ಕೂಗಾಟಗಳಿಗಷ್ಟೇ ಸೀಮಿತವಾಗುವ ಟ್ಯೂನ್ ಬೇಸ್ಡ್ ಹಾಡುಗಳು ಮಾತ್ರ ಉಳಿಯುವ ವಾತಾವರಣ ಸೃಷ್ಟಿಯಾಗಬಹುದಾದ ದಿನಗಳು ದೂರವಿಲ್ಲ.

ಇಷ್ಟೆಲ್ಲಾ ಚರ್ಚೆಯ ನಡುವೆ ಚಿತ್ರಗಳಲ್ಲಿ ಹುಟ್ಟಿದ ಅದೆಷ್ಟೋ ಗೀತ ಗುಚ್ಚದಲ್ಲಿ ನಮ್ಮ ಸಮಾಜಕ್ಕೆ ಕೇವಲ ಮನರಂಜನೆಯನ್ನೇ ಬಂಡವಾಳವಾಗಿಸಿಕೊಳ್ಳದೆ ಮನರಂಜನೆಯ ಜೊತೆಗೆ ಒಂದು ಸಾಮಾಜಿಕ ಕಳಕಳಿ, ಐತಿಹಾಸಿಕ ಬಳುವಳಿ, ನೈತಿಕತೆಯ ಹಳಿ ಸೃಷ್ಟಿಸಿದ ಗೀತೆಗಳು ಹುಟ್ಟಿವೆ. ಅವೇ ಚಿತ್ರ ಸಂಗೀತದ ಕಥನಗೀತೆಗಳು. ಆಗ ನಮ್ಮ ಚಲನಚಿತ್ರಗಳಲ್ಲಿ ಅಲ್ಲೊಂದು ಇಲ್ಲೊಂದು ಈ ಥರದ ಕಥನಗೀತೆಗಳನ್ನು ಅಳವಡಿಸುತ್ತಿದ್ದರು. ಅದು ನಮ್ಮ ತಲೆಮಾರಿಗೆ ನೈತಿಕ ಶಕ್ತಿ ತುಂಬಿ ಮನರಂಜನೆಯನ್ನೂ ಕೊಟ್ಟು ಖಂಡಿತವಾಗಿಯೂ ಆತ್ಮಬಲ ತುಂಬಿವೆ. ಇಂಥ ಕಥನ ಗೀತೆಗಳಲ್ಲಿ ಒಂದು ಹಾಡಿತ್ತು. ಒಂದು ಟ್ಯೂನಿತ್ತು. ಅದರೊಳಗೇ ಒಂದು ಕತೆ ಇತ್ತು. ಆ ಕತೆ ಹೇಳಲು ಪಾತ್ರ ಸಂಕುಲವಿತ್ತು. ಅದಕ್ಕೊಂದು ನೈತಿಕತೆ ಇತ್ತು. ಅದನ್ನು ಹೆಣೆಯಲಿಕ್ಕಾಗಿಯೇ ಅಲ್ಲೊಂದು ದೃಶ್ಯವಿರುತ್ತಿತ್ತು. ಮಕ್ಕಳು ಮರಿ ಸಮೇತರಾಗಿ ಇಡೀ ಕುಟುಂಬವೇ ಆ ಕಥನಗೀತೆಯನ್ನು ಬೆಳ್ಳಿತೆರೆಯ ಮೇಲೆ ನೋಡಿ ಆನಂದಿಸುತ್ತಿತ್ತು. ಹಾಗೆ ಆನಂದಿಸಿದ ಆ ಹಾಡನ್ನು ಅಲ್ಲಿಯೇ ಬಿಟ್ಟು ಬರುತ್ತಿರಲಿಲ್ಲ. ಆ ಹಾಡಿನಲ್ಲಿರುವ ನೈತಿಕತೆಯನ್ನು ಜನ ತಮ್ಮ ಮನೆಯಂಗಳದವರೆಗೂ ತೆಗೆದುಕೊಂಡು ಹೋಗುತ್ತಿದ್ದರು.

'ಹೇಳಿದ್ದು ಸುಳ್ಳಾಗಬಹುದು–
ಕೇಳಿದ್ದು ಸುಳ್ಳಾಗಬಹುದು
ನಿಧಾನಿಸಿ ಯೋಚಿಸಿದಾಗ
ನಿಜವು ತಿಳಿವುದು....'

ರಾಮಲಕ್ಷ್ಮಣ ಚಿತ್ರದ ಈ ಹಾಡನ್ನು ಮರೆತಿರುವವರಾದರೂ ಯಾರು? ಈ ಹಾಡು ಶುರುವಾದ ಕೂಡಲೇ ಕೇವಲ ಕೆಲವೇ ಕೆಲವು ನಿಮಿಷಗಳ ಅಲ್ಪಾವಧಿಯಲ್ಲಿ ಅಲ್ಲೊಂದು ಕತೆ ಬಿಚ್ಚಿಕೊಳ್ಳುತ್ತದೆ. ಗಂಗಮ್ಮ ಎಂಬಾಕೆ ಮುಂಗುಸಿ ಸಾಕಿಕೊಂಡಿರುತ್ತಾಳೆ. ಅವಳು ಮನೆಯಲ್ಲಿಲ್ಲದ ವೇಳೆಯಲ್ಲಿ ಹಾವೊಂದು ಪ್ರವೇಶಿಸಿ ಆಕೆಯ ಮಗುವನ್ನು ಕಚ್ಚಲು ಹವಣಿಸುತ್ತದೆ. ಹಗ್ಗ ಬಿಡಿಸಿಕೊಂಡು ಓಡಿಬಂದ ಮುಂಗುಸಿ ಹಾವನ್ನು ಕೊಂದು ಮಗುವನ್ನು ರಕ್ಷಿಸುತ್ತದೆ. ಮಗುವನ್ನು ರಕ್ಷಿಸಿದ ವಿಜಯೋತ್ಸಾಹದಲ್ಲಿ ಒಡತಿಗೆ ಅದನ್ನು ತಿಳಿಸಲು ಕಾದು ನಿಲ್ಲುತ್ತದೆ. ಆದರೆ ಅದರ ಬಾಯಲ್ಲಿ ರಕ್ತದ ಕಲೆಗಳನ್ನು ಕಂಡ ಗಂಗಮ್ಮ, ಇದೇ ತನ್ನ ಮಗುವನ್ನು ಕೊಂದಿತೆಂದು ತಪ್ಪು ತಿಳಿದು ಬಿಂದಿಗೆಯಿಂದ ಚಚ್ಚಿ ತಾನು ಸಾಕಿದ ಮುಂಗುಸಿಯನ್ನು ಕೊಂದುಬಿಡುತ್ತಾಳೆ. ಅಳುತ್ತಾ ಆಕೆ ಓಡುತ್ತಾಳೆ ಹಾಗೆ ಓಡಿ ಹೋಗಿ ಒಳಗೆ ನೋಡಿದರೆ

ತೊಟ್ಟಿಲ ಕಂದ ನಗುತ್ತಿತ್ತು ....
ನೆಲದಲಿ ಹಾವು ಸತ್ತಿತ್ತು ....
ದುಡುಕಿದ ಬುದ್ಧಿಗೆ ಬಲಿಯಾಗಿ...
ಮುಂಗಿಸಿ ಕತೆಯೂ ಮುಗಿದಿತ್ತು.

ಈಗ ಹೇಳಿ ಅವಿವೇಕದಿಂದ ಹಿಂದು–ಮುಂದು ವಿಚಾರಿಸದೆ ತೆಗೆದುಕೊಂಡ ನಿರ್ಧಾರಗಳು ಎಂತಹ ಅನಾಹುತವನ್ನು ಸೃಷ್ಟಿಸುತ್ತವೆ ಎಂಬುದಕ್ಕೆ ಇದಕ್ಕಿಂತ ಸರಳವಾಗಿ ಹೇಳಲು ಸಾಧ್ಯವೇ? ನೀವೇ ಹೇಳಿ. ಹೀಗೆ ಇಂತಹ ಹತ್ತಾರು ಕಥನ ಗೀತೆಗಳು ಕನ್ನಡ ಚಿತ್ರರಂಗವನ್ನು ಅನಭಿಶಕ್ತವಾಗಿ ಆಳಿವೆ. ಇಂದಿಗೂ ಅಂದಿನ ಕಥನ ಗೀತೆಗಳು ರೂಪಿಸಿದ ತಲೆಮಾರು ಅಂಥದೆ ಮಾದರಿಯ ನೈತಿಕ ತಿಳುವಳಿಕೆಗಳ ಜೊತೆ ಬದುಕುತ್ತಿವೆ. 'ಎಣ್ಣೆ ನಮ್ದು ಊಟ ನಿಮ್ದು ಇಲ್ಲ ಊಟ ನಮ್ದು ಎಣ್ಣೆ ನಿಮ್ದು'–ಹಾಡಿನ ಕಾಲದಲ್ಲಿರುವ ನಮ್ಮ ಹೊಸ ತಲೆಮಾರಿಗೆ ನಮ್ಮ ಕಾಲದ ಮತ್ತಷ್ಟು ಕಥನ ಗೀತೆಗಳ ಸ್ಫೂರ್ತಿ ಸಂಚಯನದೊಂದಿಗೆ ಮತ್ತಷ್ಟು ಹಾಡುಗಳನ್ನು ಮೆಲುಕು ಹಾಕೋಣ ಏನಂತೀರಿ?

# ಮಾವು ಮಾಗಿಸಲು ಅಪಾಯಕಾರಿ ಕ್ಯಾಲ್ಸಿಯಂ ಕಾರ್ಬೈಡ್ ಬಳಕೆ

## ಇಂದಿನಿಂದ ಆಹಾರ ಸುರಕ್ಷತಾ ಅಧಿಕಾರಿಗಳ ಕಾರ್ಯಾಚರಣೆ

● ಮೂರು ತಂಡಗಳ ರಚನೆ ● ಮಾವಿನ ಮಂಡಿ, ಅಂಗಡಿಗಳಿಗೆ ದಿಢೀರ್ ದಾಳಿ ● ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸುವ ಎಚ್ಚರಿಕೆ ● ಕ್ಯಾಲ್ಸಿಯಂ ಕಾರ್ಬೈಡ್‌ನಿಂದ ಮಾಗಿಸಿದ ಹಣ್ಣು ನಾಶ

ಮೈಸೂರು, ಜೂ.8(ಬಿಎಲ್‌ಯು)– ಮಾವು ಮಾಗಿಸಿ ಹಣ್ಣು ಮಾಡಲು ವಿಷಕಾರಿ ಕ್ಯಾಲ್ಸಿಯಂ ಕಾರ್ಬೈಡ್ ರಾಸಾಯನಿಕ ಬಳಕೆ ಮಾಡುತ್ತಿರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಮೈಸೂರು ನಗರಪಾಲಿಕೆಯ ಆಹಾರ ಸುರಕ್ಷತಾ ಹಾಗೂ ಅಂಕಿತ ಅಧಿಕಾರಿಗಳು ನಾಳೆ (ಜೂನ್ 9)ಯಿಂದ ಕಾರ್ಯಾಚರಣೆ ನಡೆಸಲಿದ್ದಾರೆ. ಮೈಸೂರು ನಗರ ಹಾಗೂ ಜಿಲ್ಲೆ ಮಾತ್ರವಲ್ಲದೆ ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಯಾ ಸ್ಥಳೀಯ ಸಂಸ್ಥೆಗಳ ಆಹಾರ ಸುರಕ್ಷತಾ ಹಾಗೂ ಅಂಕಿತ ಅಧಿಕಾರಿಗಳು ಕಾರ್ಯಾಚರಣೆ ನಡೆಸಲಿದ್ದಾರೆ. ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲು ಅಂಕಿತ ಅಧಿಕಾರಿ ನೇತೃತ್ವದಲ್ಲಿ ಮೂರು ತಂಡಗಳನ್ನು ರಚನೆ ಮಾಡಲಾಗಿದೆ. ಈ ತಂಡ ಮಾವು ಮಾರಾಟದ ಮಂಡಿ ಹಾಗೂ ಮಾವು ಚಿಲ್ಲರೆ ಮಾರಾಟದ ಅಂಗಡಿಗಳ ಮೇಲೆ ದಿಢೀರ್ ದಾಳಿ ಮಾಡಿ ಪರಿಶೀಲನೆ ನಡೆಸಲಿದೆ. ದಾಳಿ ವೇಳೆ ಯಾರಾದರೂ ಕ್ಯಾಲ್ಸಿಯಂ ಕಾರ್ಬೈಡ್ ರಾಸಾಯನಿಕ ಬಳಕೆ ಮಾಡುತ್ತಿದ್ದರೆ ಮಾರಾಟಗಾರರ ವಿರುದ್ಧ ಪ್ರಕರಣ ದಾಖಲಿಸಲಿದ್ದಾರೆ. ಜೊತೆಗೆ ಕ್ಯಾಲ್ಸಿಯಂ ಕಾರ್ಬೈಡ್‌ನಿಂದ ಹಣ್ಣು ಮಾಡಿರುವ ಮಾವು ನಾಶ ಮಾಡಲಿದ್ದಾರೆ. ಈಗಾಗಲೇ ಒಂದು ಬಾರಿ ಮಾವಿನ ಮಂಡಿ ಮೇಲೆ ಕಾರ್ಯಾಚರಣೆ ನಡೆಸಿರುವ ಅಧಿಕಾರಿಗಳು ಪರಿಶೀಲಿಸಿದ್ದಾರೆ. ಆದರೆ ಕ್ಯಾಲ್ಸಿಯಂ ಕಾರ್ಬೈಡ್ ಬಳಕೆ ಮಾಡಿರುವುದು ಪತ್ತೆಯಾಗಿಲ್ಲ. ಈಗ 2ನೇ ಬಾರಿಗೆ ಕಾರ್ಯಾಚರಣೆ ನಡೆಸುತ್ತಿದ್ದಾರೆ.



> “ ಕ್ಯಾಲ್ಸಿಯಂ ಕಾರ್ಬೈಡ್ ಬಳಕೆ ಮಾಡುತ್ತಿರುವ ಬಗ್ಗೆ ಆಹಾರ ಸುರಕ್ಷತಾ ಇಲಾಖೆಗೆ ದೂರುಗಳು ಬಂದಿವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಕಚೇರಿ ನಿರ್ದೇಶನದಂತೆ ಮೈಸೂರು ನಗರದಲ್ಲಿ ನಾಳೆಯಿಂದ ಕಾರ್ಯಾಚರಣೆ ನಡೆಸಲಾಗುವುದು.
>
> –ಡಾ.ರವೀಂದ್ರ ಎಸ್.ಎಲ್., ಅಂಕಿತ ಅಧಿಕಾರಿ, ಆಹಾರ ಸುರಕ್ಷತಾ ಇಲಾಖೆ, ಮೈಸೂರು.

### ಕ್ಯಾಲ್ಸಿಯಂ ಕಾರ್ಬೈಡ್ ಯಾವ ರೀತಿ ಅಪಾಯಕಾರಿ

ಕ್ಯಾಲ್ಸಿಯಂ ಕಾರ್ಬೈಡ್‌ನಿಂದ ಮಾಗಿಸಿದ ಹಣ್ಣು ಆರೋಗ್ಯಕ್ಕೆ ಅಪಾಯಕಾರಿ. ಈ ರಾಸಾಯನಿಕವು ಹಣ್ಣುಗಳಲ್ಲಿರುವ ತೇವಾಂಶದೊಂದಿಗೆ ಸಂಪರ್ಕಕ್ಕೆ ಬಂದಾಗ ಅದು ಅಸಿಟಿಲೀನ್ ಅನಿಲ ಬಿಡುಗಡೆ ಮಾಡುತ್ತದೆ. ಇದು ಕಾಯಿ ಬೇಗ ಹಣ್ಣಾಗಲು ಸಹಾಯ ಮಾಡುತ್ತದೆ. ಇಂತಹ ಹಣ್ಣುಗಳು ಆರ್ಸೆನಿಕ್ ಮತ್ತು ರಂಜಕದ ಅಂಶವನ್ನು ಬಿಡುಗಡೆ ಮಾಡಲಿದ್ದು, ಗಂಭೀರ ಆರೋಗ್ಯ ಸಮಸ್ಯೆ ಉಂಟು ಮಾಡುತ್ತದೆ. ತಲೆನೋವು, ತಲೆ ತಿರುಗುವಿಕೆ, ವಾಕರಿಕೆಯಂತಹ ಅನಾರೋಗ್ಯ ಸಮಸ್ಯೆಗಳು ಕಂಡು ಬರಲಿದ್ದು, ಕ್ಯಾನ್ಸರ್ ರೋಗಕ್ಕೆ ಕಾರಣವಾಗುತ್ತದೆ.

### ಇಥಲಿನ್ ಬಳಕೆ ಕಾನೂನುಬದ್ಧ

ಮಾವು ಸೇರಿದಂತೆ ಇತರೆ ಕಾಯಿಗಳನ್ನು ಸುರಕ್ಷಿತವಾಗಿ ಮಾಗಿಸಲು ಇಥಲಿನ್ ಅನಿಲ ಬಳಸಲು ಸರ್ಕಾರವೇ ಅನುಮತಿ ನೀಡಿದೆ. ಇದು ಹಣ್ಣುಗಳಲ್ಲಿ ನೈಸರ್ಗಿಕವಾಗಿ ಉತ್ಪತ್ತಿಯಾಗುವ ಸಸ್ಯ ಹಾರ್ಮೋನ್ ಆಗಿದೆ. ಇಥಿಲಿನ್ ಹಣ್ಣುಗಳ ಸಿಪ್ಪೆಯನ್ನು ಮೃದುಗೊಳಿಸಿ, ಸಕ್ಕರೆಯ ಅಂಶವನ್ನು ಹೆಚ್ಚಿಸಿ ಹಣ್ಣುಗಳಲ್ಲಿ ಏಕರೂಪದ ಬಣ್ಣ ಮತ್ತು ಸುವಾಸನೆಯನ್ನು ನೀಡುತ್ತದೆ.

### ನೈಸರ್ಗಿಕ ಹಣ್ಣು ಗುರ್ತಿಸುವುದೇಗೆ?

ರಾಸಾಯನಿಕವಾಗಿ ಮಾಗಿದ ಮಾವಿನ ಹಣ್ಣುಗಳು ಸಂಪೂರ್ಣವಾಗಿ ಏಕರೂಪದ ಹಳದಿ ಬಣ್ಣ ಹೊಂದಿರುತ್ತದೆ. ಆದರೆ ನೈಸರ್ಗಿಕವಾಗಿ ಮಾಗಿದ ಹಣ್ಣುಗಳಲ್ಲಿ ಹಸಿರು, ಹಳದಿ ಬಣ್ಣಗಳು ಮಿಶ್ರಣವಾಗಿರುತ್ತದೆ. ರಾಸಾನಿಯಕವಾಗಿ ಹಣ್ಣು ಮಾಡಿರುವುದು ಹೊರ ನೋಟಕ್ಕೆ ಆಕರ್ಷಣೆಯಾಗಿರುತ್ತದೆ. ಆದರೆ ತಿರುಳು ಸರಿಯಾಗಿ ಮಾಗದೆ ರುಚಿಯಲ್ಲಿ ವ್ಯತ್ಯಾಸವಿರುತ್ತದೆ.

### ದೂರು ನೀಡಿ

ಮಾವಿನ ಹಣ್ಣು ಮಾಗಿಸಲು ಯಾರಾದರೂ ಕ್ಯಾಲ್ಸಿಯಂ ಕಾರ್ಬೈಡ್ ಬಳಕೆ ಮಾಡುತ್ತಿದ್ದರೆ ಸಾರ್ವ ಜನಿಕರು ಆಹಾರ ಸುರಕ್ಷತಾ ಕಚೇರಿಯ ದೂರವಾಣಿ ಸಂಖ್ಯೆ 9141095491 ಅಥವಾ ವೆಬ್‌ಸೈಟ್ domcca2013@gmial.comಗೆ ದೂರು ನೀಡಬಹುದು ಎಂದು ಆಹಾರ ಸುರಕ್ಷತಾ ಇಲಾಖೆ ಸಲಹೆ ನೀಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

# ಎಲ್ ನಿನೋ ಪರಿಣಾಮ: ಈ ವರ್ಷ ಬರಗಾಲ ಸಾಧ್ಯತೆ

● ಮುಂಗಾರು ಆಶಾದಾಯಕವಾದರೂ ಜುಲೈ ನಂತರ ಮಳೆ ಪ್ರಮಾಣ ಕ್ಷೀಣ; ಈ ಬಾರಿ ಉಷ್ಣಾಂಶ ಹೆಚ್ಚು, ಒಣಹವೆ ವಾತಾವರಣ
● ಜೂನ್‌ನಲ್ಲಿ ಎಲ್ ನೀನೊ ಮೇಲ್ವಿಚಾರಣೆ; ಜುಲೈ, ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಡೆವಲಪ್, 2027 ಆರಂಭದವರೆಗೂ ಪರಿಣಾಮ

ಮೈಸೂರು, ಜೂ.8(ಬಿಎಲ್‌ಯು)– ಜಾಗತಿಕವಾಗಿ ತೀವ್ರಗೊಳ್ಳುತ್ತಿರುವ 'ಎಲ್ ನಿನೋ' (EL Nino) ಪರಿಣಾಮ ಈ ವರ್ಷ ಭೀಕರ ಬರಗಾಲ ಎದುರಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಮುಂಗಾರು ಮಾರುತ ಅಥವಾ ಮಾನ್ಸೂನ್ ಜೂನ್ 4ರಂದು ಕೇರಳಕ್ಕೆ ಪ್ರವೇಶಿಸಿದ್ದು, ಜೂನ್ 5ರಂದು ಕರ್ನಾಟಕಕ್ಕೆ ಪ್ರವೇಶ ಪಡೆದಿದೆ. ಕೊಡಗು ಸೇರಿದಂತೆ ಇತರೆಡೆ ಮುಂಗಾರು ಮಾರುತ ಆವರಿಸುತ್ತಿದ್ದು, ಇನ್ನು 2–3 ದಿನದಲ್ಲಿ ಮೈಸೂರು ಸೇರಿದಂತೆ ಕರ್ನಾಟಕದ ಇತರೆಡೆ ಮಳೆ ಆರಂಭವಾಗುವ ಸಾಧ್ಯತೆ ಇದೆ.

ಮುಂಗಾರು ಆರಂಭವೇನೊ ಆಶಾದಾಯಕವಾಗಿದೆ. ಆದರೆ ಜಾಗತಿಕವಾಗಿ ತೀವ್ರಗೊಳ್ಳುತ್ತಿರುವ ಎಲ್ ನಿನೋ ಈ ವರ್ಷದ ಕೃಷಿ ವಲಯಕ್ಕೆ ಕಂಟಕವಾಗುವ ಭೀತಿ ಮೂಡಿಸಿದೆ. ಫೆಸಿಫಿಕ್ ಮಹಾಸಾಗರದ ಮೇಲ್ಮೈ ತಾಪಮಾನ ಹೆಚ್ಚಾಗುತ್ತಿರುವುದರಿಂದ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಮುಂಗಾರು ಮಾರುತ ದುರ್ಬಲಗೊಳ್ಳಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಎಲ್ ನಿನೋ ಪರಿಣಾಮದಿಂದ ಮೈಸೂರು ಸೇರಿದಂತೆ ಕರ್ನಾಟಕದಾದ್ಯಂತ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ. ಜೂ. ತಿಂಗಳಲ್ಲಿ ಆರಂಭಿಕ ಮಳೆಯ ನಂತರ ಸುದೀರ್ಘ ಒಣಹವೆ ಎದುರಾಗುವ ಆತಂಕವಿದೆ. ಕಾಲಸೂಚಿಯಂತೆ ಜೂನ್ ತಿಂಗಳಲ್ಲಿ ಎಲ್ ನಿನೋ ಮೇಲ್ವಿಚಾರಣೆ ಹಂತದಲ್ಲಿದ್ದರೆ, ಜುಲೈ, ಆಗಸ್ಟ್ ಹಾಗೂ ಸೆಪ್ಟಂಬರ್‌ನಲ್ಲಿ ಎಲ್ ನಿನೋ ಡೆವಲಪ್ ಆಗುವ ಅಥವಾ ಹೆಚ್ಚು ಪರಿಣಾಮ ಬೀರುವ ಸಾಧ್ಯತೆ ಇದೆ. 2026ರಿಂದ 2027 ಆರಂಭದ ತಿಂಗಳವರೆಗೆ ಎಲ್ ನಿನೋ ಮುಂದುವರಿಕೆ ಹಂತದಲ್ಲಿ ಇರಲಿದ್ದು, ಈ ಅವಧಿಯಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ. ಇದರಿಂದ ಉಷ್ಣಾಂಶ ಹೆಚ್ಚಾಗಿ ಬರಗಾಲದ ಪರಿಸ್ಥಿತಿ ಎದುರಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.



● ಎಲ್ ನಿನೊದಿಂದ ಭಾರತದ ಕೆಲವು ಭಾಗಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಬಹುದು.
● ತಾಪಮಾನ ಹೆಚ್ಚಾಗಿ ಉಷ್ಣಗಾಳಿ ಅಪಾಯದ ಹಂತ ತಲುಪಬಹುದು.
● ಕೆಲವು ಪ್ರದೇಶಗಳಲ್ಲಿ ಮುಂಗಾರು ನಂತರದ ಮತ್ತು ಚಳಿಗಾಲದ ಮಳೆ ಕಡಿಮೆಯಾಗಬಹುದು.
● ಮಳೆ ಕಡಿಮೆಯಾದರೆ ಸಹಜವಾಗಿಯೇ ಅಣೆಕಟ್ಟುಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾಗುತ್ತದೆ.

### ರೈತರು ದೀರ್ಘಾವಧಿ ಬದಲು ಅಲ್ಪಾವಧಿ ಬೆಳೆ ಬೆಳೆಯುವುದು ಸೂಕ್ತ

ಎಲ್ ನಿನೊ ಪರಿಣಾಮದಿಂದ ವಾಡಿಕೆಗಿಂತ ಕಡಿಮೆ ಮಳೆಯಾಗುವ ಹಿನ್ನೆಲೆಯಲ್ಲಿ ರೈತರು ಕೃಷಿ ಇಲಾಖೆ ಸಲಹೆ ಪಡೆದು ಬಿತ್ತನೆ ಕಾರ್ಯ ಕೈಗೊಳ್ಳಬೇಕು ಎಂದು ಹವಾಮಾನ ಇಲಾಖೆ ಸಲಹೆ ನೀಡಿದೆ. ಎಲ್ ನಿನೊ ಪರಿಣಾಮದಿಂದ ಬರಗಾಲದ ಪರಿಸ್ಥಿತಿ ಎದುರಾಗುವ ಹಿನ್ನೆಲೆಯಲ್ಲಿ ರೈತರು ದೀರ್ಘಾವಧಿ ಬೆಳೆಯ ಬದಲು ಅಲ್ಪಾವಧಿ ಬೆಳೆ ಬೆಳೆಯಬೇಕು. ಅಷ್ಟೆ ಅಲ್ಲದೆ ಹೆಚ್ಚಾಗಿ ನೀರು ಕುಡಿಯುವ ಬೆಳೆ ಬೆಳೆಯಬಾರದು ಎಂದು ಹೇಳಿದೆ. ಮಳೆಯ ಕೊರತೆಯಿಂದ ಬೇಳೆಕಾಳು ಹಾಗೂ ಎಣ್ಣೆಕಾಳು ಬೆಳೆಯಲ್ಲಿ ಕುಂಠಿತವಾಗುತ್ತದೆ. ಇದರಿಂದ ಇಳುವರಿ ಕಡಿಮೆಯಾಗಿ ಬೆಲೆ ಹೆಚ್ಚಾಗುವ ಸಾಧ್ಯತೆ ಇದೆ. ಈ ಪರಿಣಾಮ ಎದುರಿಸಲು ಈಗಾಗಲೇ ಮುನ್ನೆಚ್ಚರಿಕೆ ಕೈಗೊಂಡಿರುವ ಭಾರತ ಸರ್ಕಾರ ಬೇಳೆಕಾಳುಗಳ ಬಫರ್ ಸ್ಟಾಕ್ ಅಥವಾ ದಾಸ್ತಾನನ್ನು ದಾಖಲೆ ಮಟ್ಟದಲ್ಲಿ ಅಂದರೆ 43 ಲಕ್ಷ ಟನ್‌ಗಳಿಗೆ ಹೆಚ್ಚಿಸಿದೆ. ಈ ಮೂಲಕ ಮಾರುಕಟ್ಟೆಯಲ್ಲಿ ಬೆಲೆ ಸಮತೋಲನ ಕಾಯ್ದುಕೊಳ್ಳಲು ಕ್ರಮ ಕೈಗೊಂಡಿದೆ.

#### ಎಲ್ ನಿನೋ ಹೆಸರಿನ ಅರ್ಥವೇನು...?

ಎಲ್ ನೀನೊ ಎಂಬುದು ಸ್ಪ್ಯಾನಿಷ್ ಭಾಷೆಯ ಪದವಾಗಿದೆ. ಎಲ್ ನಿನೋ ಅಂದರೆ ಬಾಲ ಯೇಸು (Christ Child) ಹೆಸರಿನಿಂದ ಕರೆಯಲಾಗುತ್ತದೆ. ಸಾಮಾನ್ಯವಾಗಿ ಕ್ರಿಸ್ಮಸ್ ಹಬ್ಬದ ಸಮಯವಾದ ಡಿಸೆಂಬರ್‌ನಲ್ಲಿ ದಕ್ಷಿಣ ಅಮೇರಿಕಾದ ಪೆರು ದೇಶದ ಕರಾವಳಿಯಲ್ಲಿ ಈ ಬದಲಾವಣೆ ಕಾಣಿಸಿಕೊಳ್ಳುವುದರಿಂದ ಈ ಹೆಸರು ಬಂದಿದೆ. ಅಂದರೆ ಕಳೆದ ಡಿಸೆಂಬರ್ ತಿಂಗಳಲ್ಲೆ ಎಲ್ ನಿನೋ ತನ್ನ ಪರಿಣಾಮ ಆರಂಭಿಸಿದೆ. ಸಾಮಾನ್ಯ ದಿನಗಳಲ್ಲಿ ಪೆಸಿಫಿಕ್ ಮಹಾ ಸಾಗರದ ಮೇಲೆ ಬೀಸುವ ಬಲವಾದ ಮಾರುತಗಳು ಸಮುದ್ರದ ಮೇಲ್ಮೈಯಲ್ಲಿರುವ ಬಿಸಿ ನೀರನ್ನು ಏಷ್ಯಾದ ಕಡೆ ಅಂದರೆ ಪಶ್ಚಿಮದ ಕಡೆಗೆ ತಳ್ಳುತ್ತದೆ. ಇದರಿಂದ ಭಾರತ, ಇಂಡೋನೇಷ್ಯಾ ಸೇರಿದಂತೆ ಇತರೆಡೆ ಸಮುದ್ರದ ನೀರು ಬಿಸಿಯಾಗಿ ಇಲ್ಲಿ ಉತ್ತಮ ಮಳೆಯಾಗುತ್ತದೆ. ಆದರೆ ಎಲ್ ನಿನೋ ವರ್ಷದಲ್ಲಿ ಈ ಮಾರುತಗಳು ದುರ್ಬಲಗೊಳ್ಳುತ್ತದೆ. ಆಗ ಏಷ್ಯಾದ ಕಡೆಗೆ ಹೋಗಬೇಕಾದ ಬಿಸಿ ನೀರು ದಕ್ಷಿಣ ಅಮೇರಿಕಾದ ಅಂದರೆ ಪೆರು, ಈಕ್ವೆಡಾರ್ ಕರಾವಳಿಯಲ್ಲೆ ಉಳಿಯುತ್ತದೆ. ಸಮುದ್ರದ ಬಿಸಿನೀರು ಇರುವ ಜಾಗ ಬದಲಾಗುವುದರಿಂದ ಜಾಗತಿಕವಾಗಿ ಮಳೆ ತರುವ ಮೋಡಗಳ ಚಲನೆ ಮತ್ತು ಹವಾಮಾನ ಚಕ್ರವೆ ತಲೆಕೆಳಗಾಗುತ್ತದೆ.

### ಮೈಸೂರು ಜಿಲ್ಲೆಯಲ್ಲಿ ಈ ಬಾರಿ ವಾಡಿಕೆಗಿಂತ ಮಳೆ ಕಡಿಮೆ



ಮೈಸೂರು ಜಿಲ್ಲೆಯಲ್ಲಿ 837 ಮಿಲಿ ಮೀಟರ್ ವಾಡಿಕೆ ಮಳೆಯಾಗಲಿದೆ. ಆದರೆ ಈ ವರ್ಷ ಎಲ್ ನಿನೊ ಪರಿಣಾಮದಿಂದ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ. ಮುಂಗಾರು ಮಾತ್ರವಲ್ಲದೆ ಹಿಂಗಾರು ಮಳೆಯಲ್ಲೂ ಕೊರತೆಯಾಗುವ ಸಾಧ್ಯತೆ ಇದೆ. ಎಲ್ ನಿನೊ ಪರಿಣಾಮ ಮಳೆಯಲ್ಲಿ ಸಮಾನ ಹಂಚಿಕೆ ಕಂಡು ಬರುವುದಿಲ್ಲ. ಸಾಮಾನ್ಯ ಎಲ್ ನಿನೊ ಮುಕ್ತ ಮುಂಗಾರು ಹಾಗೂ ಹಿಂಗಾರು ಮಾರುತದಲ್ಲಿ ಜೋರಾದ ಮಳೆ ಸುರಿಯುತ್ತದೆ. ಆದರೆ ಎಲ್ ನಿನೊ ಪರಿಣಾಮದಿಂದ ಇವತ್ತು ಮಳೆಯಾದರೆ ಇನ್ನು 15–20 ದಿನದ ನಂತರ ಮಳೆಯಾಗಲಿದೆ. ಈ ಮೂಲಕ ಮಳೆಯಲ್ಲಿ ಸಮಾನ ಹಂಚಿಕೆ ಇರುವುದಿಲ್ಲ.
–ಡಾ.ಜಿ.ಸುಮಂತ್‌ಕುಮಾರ್, ಸಹ ಸಂಶೋಧಕ, ಹವಾಮಾನ ಕ್ಷೇತ್ರ ವಿಭಾಗ, ನಾಗನಹಳ್ಳಿ

### ಏನಿದು ಎಲ್ ನಿನೊ...



ಎಲ್ ನಿನೊ ಎನ್ನುವುದು ಫೆಸಿಫಿಕ್ ಮಹಾಸಾಗರದ ಮೇಲ್ಮೈ ನೀರು ಅಸಹಜವಾಗಿ ಬಿಸಿಯಾಗುವ ಒಂದು ಹವಾಮಾನ ಪ್ರಕ್ರಿಯೆಯಾಗಿದೆ. ದಕ್ಷಿಣ ಅಮೇರಿಕಾದ ಪೆರು ದೇಶದ ಸಮೀಪದ ಪೂರ್ವ ಉಷ್ಣವಲಯ ಫೆಸಿಫಿಕ್ ಸಾಗರದ ಮೇಲ್ಮೈ ನೀರಿನ ಉಷ್ಣಾಂಶವು ಸರಾಸರಿಗಿಂತ ಹೆಚ್ಚು ಬಿಸಿ ಯಾಗುತ್ತಿದ್ದರೆ ಅನದ್ನು ಎಲ್ ನಿನೊ ಎಂದು ಕರೆಯಲಾಗುತ್ತದೆ.

### ಎಲ್ ನಿನೋದಿಂದ ಭಾರತಕ್ಕೆ 83 ಲಕ್ಷ ಕೋಟಿ ನಷ್ಟ ಸಾಧ್ಯತೆ

ಎಲ್ ನಿನೋ ಪರಿಣಾಮದಿಂದ ವಾಡಿಕೆಗಿಂತ ಮಳೆ ಕಡಿಮೆಯಾಗಿ ಬೆಳೆಯ ಪ್ರಮಾಣ ಕೂಡ ಇಳಿಮುಖವಾಗುತ್ತದೆ. ಇದರಿಂದ ಭಾರತಕ್ಕೆ ಬರೋಬರಿ 1 ಟ್ರಿಲಿಯನ್ ಡಾಲರ್ ಅಂದರೆ ಸುಮಾರು83 ಲಕ್ಷ ಕೋಟಿ ಭಾರಿ ನಷ್ಟವಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಎಕಾನಾಮಿಕ್ ಟೈಮ್ಸ್ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ವಿವರ ನೀಡಿದ ಡಾರ್ಟ್ ಮೌತ್ ಕಾಲೇಜಿನ ಭೂಗೋಳ ವಿಭಾಗದ ಅಸೋಸಿಯೇಟ್ ಪ್ರೊ.ಜಸ್ಟಿನ್ ಎಸ್ ಮ್ಯಾನ್ ಕಿನ್, ಭಾರತ ಈ ಆರ್ಥಿಕ ನಷ್ಟ ಸರಿದೂಗಿಸಲು ಹಲವು ಮುನ್ನೆಚ್ಚರಿಕೆ ಕೈಗೊಳ್ಳುವುದೊಳಿತು ಎಂದು ಸಲಹೆ ನೀಡಿದ್ದಾರೆ.

## ಸಮತೋಲಿತ ರಸಗೊಬ್ಬರ ಬಳಸಿ; ಮಣ್ಣಿನ ಆರೋಗ್ಯ ಉಳಿಸಿ



ಮೈಸೂರು ಜಿಲ್ಲಾ ನಾಗನಹಳ್ಳಿ ಕೃಷಿ ತರಬೇತಿ ಕೇಂದ್ರದಿಂದ ಹೆಚ್.ಡಿ.ಕೋಟೆ ತಾಲೂಕಿನ ಹಿರೇಹಳ್ಳಿ ಎ ಗ್ರಾಮದಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕ ನಾಗರಾಜ್ ಕೆ ಉದ್ಘಾಟಿಸಿದರು.

ಮೈಸೂರು,ಜೂ.8– ಸಮತೋಲನ ಗೊಬ್ಬರ ಬಳಸಿ ಮಣ್ಣಿನ ಆರೋಗ್ಯ ಉಳಿಸಿ ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕ ನಾಗರಾಜ್ ಕೆ. ಹೇಳಿದರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರ, ನಾಗನಹಳ್ಳಿ, ವತಿಯಿಂದ 2026–27ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹೆಚ್.ಡಿ.ಕೋಟೆ ತಾಲ್ಲೂಕು ಕಸಬಾ ಹೋಬಳಿಯ ಹಿರೇಹಳ್ಳಿ ಎ ಗ್ರಾಮದಲ್ಲಿ 'ಹತ್ತಿ ಮತ್ತು ಮುಸುಕಿನಜೋಳ ಬೆಳೆಗಳಲ್ಲಿ ಸುಧಾರಿತ ಬೇಸಾಯ ತಾಂತ್ರಿಕತೆಗಳು, ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ' ಕುರಿತು ಆಯೋಜಿಸಿದ್ದ ಒಂದು ದಿನದ ಹೊರಾಂಗಣ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರೈತರು ರಸಗೊಬ್ಬರಗಳನ್ನು ಬೆಳೆಗಳಿಗೆ ವೈಜ್ಞಾನಿಕವಾಗಿ ಶಿಫಾರಸು ಮಾಡಿದ ಪ್ರಮಾಣದಲ್ಲಿ ಸಮತೋಲಿತ ರಸಗೊಬ್ಬರ ಬಳಸಬೇಕು ಹಾಗೂ ಅತಿಯಾದ ರಾಸಾಯನಿಕಗಳನ್ನು ಬಳಸುವುದರಿಂದ ಮಣ್ಣಿನ ಫಲವತ್ತತೆ ಕುಂಠಿತವಾಗುವುದನ್ನು ತಪ್ಪಿಸಲು ಹೆಚ್ಚು ಪ್ರಮಾಣದಲ್ಲಿ ಸಾವಯವ ಗೊಬ್ಬರ ಹಾಗೂ ಹಸಿರೆಲೆ ಗೊಬ್ಬರಗಳನ್ನು ಬಳಸಬೇಕು ಹಾಗೂ ವಿವಿಧ ಬೆಳೆಗಳಲ್ಲಿ ಪೋಷಕಾಂಶಗಳ ನಿರ್ವಹಣೆ ಕುರಿತು ಮಾಹಿತಿ ನೀಡಿದರು.

ಸಸ್ಯರೋಗ ಶಾಸ್ತ್ರಜ್ಞೆ ಡಾ. ಪುಷ್ಪ ಆರ್. ಎನ್. ಅವರು ಮಾತನಾಡಿ ಮುಸಕಿನ ಜೋಳ ಬೆಳೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳು, ವಿವಿಧ ಕೀಟ–ರೋಗಗಳು ಹಾಗೂ ಅವುಗಳ ಹತೋಟಿ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಮುಸುಕಿನಜೋಳದಲ್ಲಿ ಬೂಜು, ಕೇದಿಗೆ ರೋಗ ಉಲ್ಬಣಗೊಳ್ಳುತ್ತಿದ್ದು ಇದರಿಂದ ಇಳುವರಿ ನಷ್ಟ ಸಾಧ್ಯತೆ ಇರುವುದರಿಂದ ರೈತರು ರೋಗ ಲಕ್ಷಣ ಕಂಡ ಕೂಡಲೆ ಮೆಟಲಾಕ್ಸಿಲ್ 8 ಡಬ್ಲುಪಿ + ಮ್ಯಾಂಕೊಜೆಬ್ 64 ಡಬ್ಲುಪಿ ಸಂಯುಕ್ತ ಶಿಲೀಂದ್ರ ನಾಶಕವನ್ನು ಪ್ರತೀ 1 ಲೀಟರ್ ನೀರಿಗೆ 2 ಗ್ರಾಂನತೆ (ಎಕರೆಗೆ 600 ಗ್ರಾಂ) ಮಿಶ್ರಣಮಾಡಿ ಗರಿಗಳ ತಳಭಾಗ ಹಾಗೂ ಮೇಲ್ಭಾಗಕ್ಕೂ ಸಿಂಪಡಿಸಬೇಕು. ಮುಸುಕಿನ ಜೋಳ ಬಿತ್ತನೆಗೆ ಮೊದಲು ಪ್ರತಿ 1 ಕೆಜಿ ಬಿತ್ತನೆ ಬೀಜಕ್ಕೆ 3 ಗ್ರಾಂ ಮೆಟಲಾಕ್ಸಿಲ್ 8 ಡಬ್ಲುಪಿ + ಮ್ಯಾಂಕೊಜೆಬ್ 64 ಡಬ್ಲುಪಿ ಸಂಯುಕ್ತ ಶಿಲೀಂದ್ರ ನಾಶಕದಿಂದ ಬೀಜೋಪಚಾರ ಮಾಡಿ ಬಿತ್ತನೆ ಮಾಡುವುದರಿಂದ ಶೇಕಡ 30ರಿಂದ 40ರಷ್ಟು ರೋಗ ನಿಯಂತ್ರಣವಾಗುತ್ತದೆ ಎಂದು ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಅಭಿವೃದ್ಧಿ ಪಡಿಸಿರುವ ಬೂಜು, ಕೇದಿಗೆ ರೋಗ ನಿರೋಧಕ ತಳಿಗಳಾದ MAH–14–5, MAH–1137 (ಹೇಮ), MAH–2049 (ನಿತ್ಯಶ್ರೀ), MAH–14–138, MAH –15–84 ತಳಿಗಳನ್ನು ಬೆಳೆಯುವುದು ಸೂಕ್ತ. ಭಾಗದ ಪ್ರಮುಖ ಬೆಳೆಗಳಾದ ಹತ್ತಿ ಮತ್ತು ಶುಂಠಿ ಬೆಳೆಗಳಲ್ಲಿ ವಿವಿಧ ಕೀಟ, ರೋಗಗಳು ಹಾಗೂ ಅವುಗಳ ಹತೋಟಿ ಕ್ರಮಗಳ ಕುರಿತು ಶೀಧರ್ ಔಟ್ ರೀಚ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು ಮಾಹಿತಿ ನೀಡಿದರು.

ತರಬೇತಿ ಕಾರ್ಯಕ್ರಮದಲ್ಲಿ ಔಟ್ ರೀಚ್ ಸಂಸ್ಥೆಯ ಯೋಜನಾ ಸಂಯೋಜಕರಾದ ವಿಲಿಯಂ ಡಿಸೋಜ ಮತ್ತು ಹಿರೇಹಳ್ಳಿ ಗ್ರಾಮದ ಪ್ರಗತಿಪರ ರೈತರು, ರೈತ ಮುಖಂಡರು ಭಾಗವಹಿಸಿದ್ದರು.

## ಚಾಮುಂಡಿಬೆಟ್ಟ ತಪ್ಪಲಲ್ಲಿ 'ನಮ್ಮ ನಾಳೆ' ವಿಶೇಷ ಸ್ವಚ್ಛತಾ ಅಭಿಯಾನ



ಮೈಸೂರಿನ ನಾರಾಯಣ ಆಸ್ಪತ್ರೆ ವತಿಯಿಂದ ಸಂಘಟನೆಯೊಂದರ ಸಹಯೋಗದೊಂದಿಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ 'ನಮ್ಮ ನಾಳೆ' ವಿಶೇಷ ಸ್ವಚ್ಛತಾ ಅಭಿಯಾನ ಆಯೋಜಿಸಲಾಗಿತ್ತು.

ಮೈಸೂರು, ಜೂ.8– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರಿನ ನಾರಾಯಣ ಆಸ್ಪತ್ರೆ ಹಾಗೂ ಮೈಸೂರ್ ಟೀನೇಜರ್ಸ್ ಗ್ರೂಪ್ ಸಹಯೋಗದಲ್ಲಿ 'ನಮ್ಮ ನಾಳೆ' ಶೀರ್ಷಿಕೆಯಡಿ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ವಿಶೇಷ ಸ್ವಚ್ಛತಾ ಅಭಿಯಾನವನ್ನು ಆಯೋಜಿಸಲಾಗಿತ್ತು.

ಪರಿಸರ ಸಂರಕ್ಷಣೆ, ಪವಿತ್ರ ಹಾಗೂ ಪ್ರವಾಸಿ ತಾಣಗಳ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸುವುದರೊಂದಿಗೆ ಈ ಸತ್ಕಾರ್ಯದಲ್ಲಿ ಯುವ ಜನತೆ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸುವ ಉದ್ದೇಶದಿಂದ ಆಯೋಜಿಸಿದ್ದ ಅಭಿಯಾನದಲ್ಲಿ, ನಾರಾಯಣ ಆಸ್ಪತ್ರೆ ಸಿಬ್ಬಂದಿ, ಮೈಸೂರ್ ಟೀನೇಜರ್ಸ್ ಗ್ರೂಪ್‌ನ ಸದಸ್ಯರು, ಪೋದಾರ್ ಅಂತರ ರಾಷ್ಟ್ರೀಯ ಶಾಲೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ವಿವಿಧ ಶಾಲೆಗಳ ಹಳೆಯ ವಿದ್ಯಾರ್ಥಿಗಳು ಸೇರಿದಂತೆ 50ಕ್ಕೂ ಹೆಚ್ಚು ಸ್ವಯಂ ಸೇವಕರು ಪಾಲ್ಗೊಂಡು, ಬೆಟ್ಟದ ತಪ್ಪಲಿನಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ಇನ್ನಿತರ ತ್ಯಾಜ್ಯ ಸಂಗ್ರಹಿಸಿದರು.

ಈ ವೇಳೆ ಆಸ್ಪತ್ರೆಯ ಉಸ್ತುವಾರಿ ನಿರ್ದೇಶಕ ಪವನ್ ಕುಮಾರ್ ಮಾತನಾಡಿ, ಆರೋಗ್ಯಕರ ಸಮುದಾಯಕ್ಕೆ ಸ್ವಚ್ಛ ಪರಿಸರ ಅತ್ಯಗತ್ಯ. 'ನಮ್ಮ ನಾಳೆ'ಯಂತಹ ಕಾರ್ಯಕ್ರಮಗಳ ಮೂಲಕ ನೈರ್ಮಲ್ಯ ಹಾಗೂ ಪರಿಸರ ಸಂರಕ್ಷಣೆಗೆ ಜನತೆಯನ್ನು ಪ್ರೋತ್ಸಾಹಿಸುವ ಪ್ರಯತ್ನ ನಡೆದಿದೆ. ಎಲ್ಲರೂ ಒಗ್ಗೂಡಿದರೆ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ಸಾಧ್ಯವಿದೆ ಎಂದು ಆಶಿಸಿದರು.

'ನಮ್ಮ ನಾಳೆ' ಸ್ವಚ್ಛತಾ ಅಭಿಯಾನದ ಸಂಚಾಲಕರಾದ ನಾಗಲಕ್ಷ್ಮಿ ನೀರಾಜಾ ಮಾತನಾಡಿ, ಈ ಅಭಿಯಾನದ ಮೂಲಕ ಉತ್ತಮ ಸಮಾಜ ನಿರ್ಮಾಣದತ್ತ ಹೆಜ್ಜೆ ಇಟ್ಟಿದ್ದೇವೆ. ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಅಭಿಯಾನದ ಸರಳ ಹಾಗೂ ಪ್ರಮುಖ ಉದ್ದೇಶವಾಗಿದೆ. ಪರಿಸರ ಸಂರಕ್ಷಣೆಯೊಂದಿಗೆ ಸ್ವಚ್ಛ ಭವಿಷ್ಯ ನಿರ್ಮಿಸುವಲ್ಲಿ ಯುವ ಜನತೆ ಕೈಜೋಡಿಸುವರೆಂಬ ವಿಶ್ವಾಸ ವಿದೆ. ಯುವ ಪೀಳಿಗೆಯಲ್ಲಿ ನಾಗರಿಕ ಜವಾಬ್ದಾರಿ, ಸಮುದಾಯದದ ಭಾಗವಹಿಸುವಿಕೆ ಮತ್ತು ಸುಸ್ಥಿರ ಅಭ್ಯಾಸಗಳನ್ನು ಉತ್ತೇಜಿಸುವಲ್ಲಿ ಈ ಅಭಿಯಾನ ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸಿದರು.

## ನಾಲ್ವಡಿ ಪ್ರಶಸ್ತಿ ಪುರಸ್ಕೃತ ಬನ್ನೂರು ರಾಜುಗೆ ಅಭಿನಂದನೆ



'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ'ಗೆ ಭಾಜನರಾದ ಸಾಹಿತಿ, 'ಮೈಸೂರು ಮಿತ್ರ' ಅಂಕಣಕಾರ ಬನ್ನೂರು ಕೆ.ರಾಜು ಅವರನ್ನು ಹಿರಿಯ ಪತ್ರಕರ್ತರು ಅಭಿನಂದಿಸಿದರು.

## ಮುಂದಿನ ಬಾರಿಯೂ ಕಾಂಗ್ರೆಸ್ ಸರ್ಕಾರ ತರಲು ಒಗ್ಗಟ್ಟಿನಿಂದ ಕೆಲಸ ಮಾಡಿ

**ಹುಣಸೂರು ಮುಖಂಡರು, ಕಾರ್ಯಕರ್ತರಿಂದ ಅಭಿನಂದನೆ ಸ್ವೀಕರಿಸಿದ ಸಿಎಂ ಡಿಕೆಶಿ ಕಿವಿಮಾತು**



ಬೆಂಗಳೂರಿನ ಕುಮಾರಕೃಪ ಅತಿಥಿ ಗೃಹದ ಬಳಿ ಹುಣಸೂರು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರಿಂದ ಅಭಿನಂದನೆ ಸ್ವೀಕರಿಸಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿದರು. ಈ ವೇಳೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಉಪಸ್ಥಿತರಿದ್ದರು.

ಬೆಂಗಳೂರು, ಜೂ.8– ಪಕ್ಷಬೇಧ ಮರೆತು ಎಲ್ಲರನ್ನೂ ಒಟ್ಟಿಗೇ ಕರೆದುಕೊಂಡು ಹೋಗಿ. 2028ರ ವಿಧಾನಸಭೆ ಚುನಾವಣೆ ಗೆಲ್ಲುವು ನಿಮ್ಮ ಗುರಿಯಾಗಿರಲಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತಮ್ಮನ್ನು ಭೇಟಿಯಾದ ಮೈಸೂರು ಭಾಗದ ಮುಖಂಡರಿಗೆ ಕಿವಿಮಾತು ಹೇಳಿದ್ದಾರೆ.

ಹುಣಸೂರು ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಹಾಗೂ ಕೆಪಿಸಿಸಿ ವಕ್ತಾರ ಮೈಸೂರಿನ ಎಂ.ಲಕ್ಷ್ಮಣ್ ನೇತೃತ್ವದಲ್ಲಿ ಹುಣಸೂರು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಕುಮಾರಕೃಪ ಸರ್ಕಾರಿ ಅತಿಥಿ ಗೃಹದಲ್ಲಿ ತಮ್ಮನ್ನು ಅಭಿನಂದಿಸಿದ ಸಂದರ್ಭದಲ್ಲಿ ಸಿಎಂ ಡಿಕೆಶಿ, ಕೆಲ ಸಲಹೆಗಳನ್ನು ನೀಡಿದರು.

ಹಿಂದೆ ಘಟಿಸಿದ್ದು, ದ್ವೇಷ, ಅಸೂಯೆ, ಪ್ರತೀಕಾರ, ಇವೆಲ್ಲವನ್ನೂ ಮರೆತುಬಿಡಿ. ಕೆಲವೊಮ್ಮೆ ತಪ್ಪು ಮಾಹಿತಿ, ಅಭಿಪ್ರಾಯಗಳಿಂದ ಯಡವಟ್ಟು ಆಗಿರಬಹುದು. ಆದರೆ ಅದನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು ಭವಿಷ್ಯದ ಗುರಿ ಮರೆಯಬೇಡಿ. ಇಂದು ನನಗೆ ದೊರೆತಿರುವ ಮುಖ್ಯಮಂತ್ರಿ ಹುದ್ದೆ ನನ್ನದಲ್ಲ, ನಿಮ್ಮದು ರಾಜ್ಯದ ಜನರದ್ದು. ನೀವಿಲ್ಲದೆ ನಾನೇನೂ ಅಲ್ಲ. ನನಗೆ ಈ ಹುದ್ದೆ ದೊರಕಿರುವುದರ ಹಿಂದೆ ನಿಮ್ಮ ಪರಿಶ್ರಮ, ಪ್ರೀತಿ, ವಿಶ್ವಾಸ, ಹೋರಾಟ ಅಡಗಿದೆ. ನಿಮ್ಮ ಸಹಕಾರವನ್ನು ನಾನೆಂದಿಗೂ ಮರೆಯುವುದಿಲ್ಲ. ಈಗ ಯಾವುದೇ ಕಾರಣಕ್ಕೂ ಮೈ ಮರೆಯಬೇಡಿ. ಎಸ್‌ಐಆರ್ ಸಂಚಿನಿಂದ ನಿಮ್ಮ ಮತ ಬಲಿ ಆಗಲು ಬಿಡಬೇಡಿ, ಎಚ್ಚರಿಕೆಯಿಂದ ಇರಿ. ನಿಮ್ಮ ಮತಗಳನ್ನು ಕಾಪಾಡಿಕೊಳ್ಳಿ ಎಂದರು.

## ತ್ರೈಮಾಸಿಕ ಜನಸಂಪರ್ಕ ಸಭೆ

ಮೈಸೂರು,ಜೂ.8– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ವರುಣ, ಚಾಮುಂಡಿಪುರಂ, ಕೇಂದ್ರ, ನರಸಿಂಹರಾಜ ಮೊಹಲ್ಲಾ ಹಾಗೂ ಜ್ಯೋತಿನಗರ ಉಪವಿಭಾಗ ಕಚೇರಿಗಳಲ್ಲಿ ಪ್ರಸಕ್ತ ಆರ್ಥಿಕ ವರ್ಷದ ಮೊದಲನೇ ತ್ರೈಮಾಸಿಕ ಜನಸಂಪರ್ಕ ಸಭೆ ನಡೆಸಲು ಉದ್ದೇಶಿಸಲಾಗಿದೆ. ಸಭೆಯು ಜೂ.16 ರಂದು ಬೆಳಿಗ್ಗೆ 11 ಗಂಟೆಗೆ ವರುಣ ಹಾಗೂ ಮಧ್ಯಾಹ್ನ 3 ಗಂಟೆಗೆ ಚಾಮುಂಡಿಪುರಂ ಉಪವಿಭಾಗದಲ್ಲಿ, ಜೂ.19ರಂದು ಬೆಳಿಗ್ಗೆ 11 ಗಂಟೆಗೆ ಕೇಂದ್ರ, ಮಧ್ಯಾಹ್ನ 3 ಗಂಟೆಗೆ ನ.ರಾ.ಮೊಹಲ್ಲಾ ಉಪವಿಭಾಗದಲ್ಲಿ ಮತ್ತು ಜೂ.24ರಂದು ಬೆಳಿಗ್ಗೆ 11 ಗಂಟೆಗೆ ಜ್ಯೋತಿನಗರ ಉಪವಿಭಾಗದಲ್ಲಿ ನಡೆಯಲಿದ್ದು, ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಳೆ ಲೋಕಾಯುಕ್ತರ ದೂರು ಸ್ವೀಕಾರ

**ಮೈಸೂರು:** ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಅಧಿಕಾರಿಗಳಿಂದ ಜೂ.10ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1ರವರೆಗೆ ಮೈಸೂರು ಜಿಲ್ಲೆ, ಸರಗೂರು ತಾಲೂಕು ತಹಶೀಲ್ದಾರ್ ತಾಲೂಕು ಕಚೇರಿ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆ ನೀಡುತ್ತಿರುವ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ಸಾರ್ವಜನಿಕರು ದೂರು ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

## ಮಾದಕ ವಸ್ತು ಜಾಲದಿಂದ ವಿದ್ಯಾರ್ಥಿಗಳ ರಕ್ಷಿಸಲು ಕಟ್ಟುನಿಟ್ಟಿನ ಕ್ರಮಕ್ಕೆ ಮನವಿ

**ಈ ಸಂಬಂಧ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಗೃಹ ಸಚಿವರಿಗೆ ಪತ್ರ; ವಿಶೇಷ ದಳ ರಚನೆಗೆ ಆಗ್ರಹ**

ಮೈಸೂರು, ಜೂ.8– ಶಾಲಾ–ಕಾಲೇಜುಗಳ ಬಳಿ ಹೆಚ್ಚುತ್ತಿರುವ ಮಾದಕ ವಸ್ತು ಪಿಡುಗನ್ನು ಬೇರು ಸಮೇತ ಕಿತ್ತೊಗೆಯಲು ವಿಶೇಷ ದಳ ರಚನೆ ಜೊತೆಗೆ ಹಲವು ಕಟ್ಟುನಿಟ್ಟಿನ ಕ್ರಮ ವಹಿಸುವಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮನವಿ ಸಲ್ಲಿಸಿದ್ದಾರೆ.

ಮಕ್ಕಳು ದೇವರ ರಾಜ್ಯದ ಪ್ರಜೆಗಳು ಎಂಬ ರಾಷ್ಟ್ರಕವಿ ಕುವೆಂಪು ಅವರ ಮಾತು ಅಕ್ಷರಶಃ ಸತ್ಯ. ಆದರೆ, ಇತ್ತೀಚಿನ ದಿನಗಳಲ್ಲಿ ಶಾಲಾ–ಕಾಲೇಜುಗಳ ಆವರಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಡ್ರಗ್ಸ್ ಮತ್ತು ಗಾಂಜಾದಂತಹ ಮಾದಕ ದ್ರವ್ಯಗಳ ಹಾವಳಿ ಮಿತಿಮೀರಿ, ಯುವಜನತೆ ದಾರಿ ತಪ್ಪುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಶಾಲಾ–ಕಾಲೇಜುಗಳು ಪುನರಾರಂಭಗೊಂಡಿದ್ದು, ಮಕ್ಕಳ ಸುರಕ್ಷತೆ ಬಗ್ಗೆ ಪೋಷಕರಲ್ಲಿ ಅತೀವ ಆತಂಕ ಮನೆಮಾಡಿದೆ.

ಇದು ಗಂಭೀರವಾಗಿ ಪರಿಗಣಿಸಬೇಕಾದ ವಿಷಯ. ಗಾಂಜಾ ಹಾವಳಿ ದೊಡ್ಡ ಪಿಡುಗಿನಂತೆ ವ್ಯಾಪಿಸಿದ್ದು, ಖರೀದಿಗೆ ಹಣವಿಲ್ಲದೆ ವಿದ್ಯಾರ್ಥಿಗಳು ಕಾನೂನು ಬಾಹಿರ ಕೃತ್ಯಗಳಿಗಿಳಿಯುತ್ತಿರುವ ನಿದರ್ಶನಗಳೂ ಕೆಲವೆಡೆ ಕಂಡು ಬರುತ್ತಿವೆ. ಬದುಕನ್ನು ಕಟ್ಟಿಕೊಳ್ಳಬೇಕಾದ ವಯಸ್ಸಿನಲ್ಲಿ ಯುವಜನತೆ ಮಾದಕ ಜಾಲಕ್ಕೆ ಬಲಿಯಾಗುವುದನ್ನು ತಡೆಯಲು ಸರ್ಕಾರ ಈಗ ಕಠಿಣ ನಿರ್ಣಯವನ್ನು ಕೈಗೊಳ್ಳಬೇಕಾದ ತುರ್ತಿದೆ. ಆದ್ದರಿಂದ, ಮುಗ್ಧ ವಿದ್ಯಾರ್ಥಿಗಳ ಉಜ್ವಲ ಭವಿಷ್ಯದ ರಕ್ಷಣೆ ಹಾಗೂ ಪೋಷಕರ ಆತಂಕವನ್ನು ನಿವಾರಿಸುವ ನಿಟ್ಟಿನಲ್ಲಿ ಸರ್ಕಾರವು ತಕ್ಷಣವೇ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದು ದಿನೇಶ್ ಗೂಳಿಗೌಡ ಕೋರಿದ್ದಾರೆ.



ದಿನೇಶ್ ಗೂಳಿಗೌಡ



ಪ್ರಿಯಾಂಕ್ ಖರ್ಗೆ

**ಪರಿಣಾಮಕಾರಿ ಕ್ರಮಗಳು:** ಜೂನ್ ಮೊದಲ ವಾರದಿಂದಲೇ ಶಾಲಾ–ಕಾಲೇಜು ಸೇರಿದಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳ ಸುತ್ತಮುತ್ತಲಿನ ಕನಿಷ್ಠ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಪೊಲೀಸರು ನಿರಂತರವಾಗಿ ಕಡ್ಡಾಯ ಗಸ್ತು ತಿರುಗುವಂತೆ ಕಟ್ಟುನಿಟ್ಟಿನ ಆದೇಶ ಹೊರಡಿಸಬೇಕು. ಮಾದಕ ವ್ಯಸನಕ್ಕೆ ಉತ್ತೇಜಿಸುವ ಬೀಡಿ, ಸಿಗರೇಟ್, ಗುಟ್ಕಾ ಮತ್ತು ಪಾನ್ ಮಸಾಲಾದಂತಹ ತಂಬಾಕು ಉತ್ಪನ್ನಗಳ ಮಾರಾಟವನ್ನು ಶಾಲಾ–ಕಾಲೇಜುಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಸಂಪೂರ್ಣವಾಗಿ ತಡೆಗಟ್ಟಲು ವಿಶೇಷ ಗಸ್ತು ನಿಯೋಜಿಸಿ, ನಿಯಮ ಉಲ್ಲಂಘಿಸುವವರ ವಿರುದ್ಧ 'ಕೋಟ್ಪಾ' ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು.

ಇಂತಹ ಪ್ರಕರಣಗಳನ್ನು ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಮ್ಮ ಮಾಸಿಕ ಸಭೆಯಲ್ಲಿ ಕಡ್ಡಾಯವಾಗಿ ಪರಿಶೀಲಿಸಿ, ಸೂಕ್ತ ಕ್ರಮಕ್ಕೆ ಆದೇಶಿಸಬೇಕು. ಮಾದಕ ದ್ರವ್ಯ ಮಾರಾಟ ಹಾಗೂ ಸೇವನೆ ಜಾಲ ಪತ್ತೆಹಚ್ಚಲು ಪ್ರತಿ ಜಿಲ್ಲಾ ಮಟ್ಟದಲ್ಲಿ ವಿಶೇಷ ಪೊಲೀಸ್ ದಳವನ್ನು ರಚಿಸಿ, ಅದಕ್ಕೆ ಮುಕ್ತ ಅಧಿಕಾರ ಮತ್ತು ಸಂಪೂರ್ಣ ಬೆಂಬಲ ನೀಡಬೇಕು. ಮಾದಕ ವ್ಯಸನದ ಬಲಿಯಾಗಿರುವ ವಿದ್ಯಾರ್ಥಿಗಳನ್ನು ವ್ಯಸನಮುಕ್ತರನ್ನಾಗಿಸಲು ಸರ್ಕಾರ ಮಾನವೀಯ ನೆಲೆಯ ಕ್ರಮಗಳನ್ನು ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಅನುಬಂಧಿತ ಎನ್.ಜಿ.ಓ ಸಂಸ್ಥೆಗಳ ನೆರವಿನೊಂದಿಗೆ ಆ ವಿದ್ಯಾರ್ಥಿಗಳಿಗೆ ನಿರಂತರ ಕೌನ್ಸೆಲಿಂಗ್, ಸೂಕ್ತ ಕಣ್ಗಾವಲು ಮತ್ತು ವೈದ್ಯಕೀಯ ಪುನರ್ವಸತಿ ವ್ಯವಸ್ಥೆ ಕಲ್ಪಿಸಬೇಕು.

ಈ ಮಾದಕ ಜಾಲದ ಬಗ್ಗೆ ಸಾರ್ವಜನಿಕರು ನಿರ್ಭೀತಿಯಿಂದ ಮುಕ್ತವಾಗಿ ಮಾಹಿತಿ ನೀಡಲು ವಿಶೇಷ ಸಹಾಯವಾಣಿ ಆರಂಭಿಸಬೇಕು. ಮಾಹಿತಿ ನೀಡುವ ಸಾರ್ವಜನಿಕರ ಹೆಸರು ಮತ್ತು ವಿಳಾಸವನ್ನು ಸಂಪೂರ್ಣವಾಗಿ ಗೌಪ್ಯವಾಗಿಡುವ ಭರವಸೆ ನೀಡಬೇಕು. ರಾಜ್ಯಾದ್ಯಂತ ಎಲ್ಲ ಶಾಲಾ–ಕಾಲೇಜುಗಳಲ್ಲಿ ಮಾದಕ ದ್ರವ್ಯಗಳ ದುಷ್ಪರಿಣಾಮಗಳ ಕುರಿತು ವ್ಯಾಪಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಇಂತಹ ಜಾಲಗಳು ಗಮನಕ್ಕೆ ಬಂದರೆ ಅಥವಾ ಮಕ್ಕಳು ವ್ಯಸನಕ್ಕೆ ಬಲಿಯಾಗುತ್ತಿರುವುದು ಕಂಡುಬಂದರೆ ಶಾಲಾ ಮುಖ್ಯಸ್ಥರು ತಕ್ಷಣವೇ ಪೋಷಕರ ಅಥವಾ ಪೊಲೀಸರ ಗಮನಕ್ಕೆ ತರುವಂತೆ ಮನವರಿಕೆ ಮಾಡಿಕೊಡಬೇಕು.

ಈ ವಿಚಾರವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಶಾಲಾ–ಕಾಲೇಜುಗಳ ಪುನರಾರಂಭದ ದಿನದಿಂದಲೇ ರಾಜ್ಯಾದ್ಯಂತ ಕಟ್ಟುನಿಟ್ಟಿನ ಪೊಲೀಸ್ ಕಣ್ಗಾವಲು ಇಡುವಂತೆ ಸಂಬಂಧಪಟ್ಟ ಉನ್ನತ ಪೊಲೀಸ್ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಬೇಕಾಗಿ ವಿದ್ಯಾರ್ಥಿಗಳು ಹಾಗೂ ಪೋಷಕರ ಪರವಾಗಿ ವಿನಂತಿಸುತ್ತೇನೆ ಎಂದು ದಿನೇಶ್ ಗೂಳಿಗೌಡ, ಗೃಹ ಸಚಿವರಿಗೆ ಸಲ್ಲಿಸಿರುವ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಮೈಸೂರು ಮಿತ್ರ | ಮಂಗಳವಾರ 9 ಜೂನ್ 2026

# ವಿದ್ಯೆ ಜೊತೆ ಗುರು-ಹಿರಿಯರನ್ನು ಗೌರವದಿಂದ ಕಾಣಿ

ಪಾಂಡವಪುರ, ಜೂ.8– ಮಕ್ಕಳಿಗೆ ವಿದ್ಯೆಯ ಜತೆಗೆ ಗುರು-ಹಿರಿಯರನ್ನು ಗೌರವದಿಂದ ಕಾಣುವ ಸಂಸ್ಕಾರವನ್ನು ಬೆಳೆಸಬೇಕು ಎಂದು ಬಿಇಒ ಧರ್ಮಶೆಟ್ಟಿ ಹೇಳಿದರು.

ಪಟ್ಟಣದ ಬಿಜಿಎಸ್ ಶಾಲೆಯಲ್ಲಿ ನಡೆದ ಅಕ್ಷರಾಭ್ಯಾಸ ಹಾಗೂ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬಿಜಿಎಸ್ ಶಿಕ್ಷಣ ಸಂಸ್ಥೆಯೂ ಮಕ್ಕಳಿಗೆ ಶಿಕ್ಷಣ ನೀಡುವ ಜತೆಗೆ ಮಕ್ಕಳಿಗೆ ಸಂಸ್ಕಾರ ಬೆಳೆಸುವಂತಹ ಪೂರಕವಾದ ಹಲವಾರು ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅಕ್ಷರಾಭ್ಯಾಸದಂತಹ ಕಾರ್ಯಕ್ರಮವನ್ನು ಹಣವಂತರು ಶೃಂಗೇರಿ ಶಾರದಾಂಬೆ ದೇವಾಲಯದಲ್ಲಿ ಮಾಡಿಸುತ್ತಿದ್ದಾರೆ. ಆದರೆ, ಬಿಜಿಎಸ್ ಶಾಲೆಯೂ ತಮ್ಮ ಶಾಲೆಯಲ್ಲಿಯೇ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಮಾಡಿಸುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ ಎಂದರು.



ಬಿಜಿಎಸ್ ಶಾಲೆಯಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮಕ್ಕೆ ಬಿಇಒ ಧರ್ಮಶೆಟ್ಟಿ ಚಾಲನೆ ನೀಡಿದರು.

ರೈತಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ ಮಾತನಾಡಿದರು. ಇದೇ ವೇಳೆ ಶಾಲಾ ಮಕ್ಕಳಿಂದ ಪರಿಸರ ದಿನಾಚರಣೆಯ ಅಂಗವಾಗಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಹಲವು ಚಿತ್ರಗಳನ್ನು ಪ್ರದರ್ಶಿಸಿದರು. ಶಾಲಾ ಮಕ್ಕಳಿಗೆ ಪೋಷಕರಿಂದ ಹಲವು ಪೂಜಾ ವಿಧಾನಗಳೊಂದಿಗೆ ಅಕ್ಷರಾಭ್ಯಾಸ ಮಾಡಿಸಲಾಯಿತು.

ಸಂದರ್ಭದಲ್ಲಿ ಬಿಜಿಎಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ, ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್.ರಮೇಶ್, ಬಿಜೆಪಿ ಮುಖಂಡ ಎಚ್.ಎನ್.ಮಂಜುನಾಥ್, ಗೃಹ ನಿರ್ಮಾಣ ಮಂಡಳಿ ನಿರ್ದೇಶಕ ಬಿ.ಎಸ್.ಜಯರಾಮು, ರೈತಸಂಘದ ಮಹಿಳಾ ಅಧ್ಯಕ್ಷೆ ರೂಪನಿತೀನ್, ಪ್ರಾಂಶುಪಾಲ ರಘು, ಮುಖ್ಯಶಿಕ್ಷಕಿ ಚಂಪ ಸೇರಿದಂತೆ ಹಲವರು ಇದ್ದರು.

# ಮಂಡ್ಯ ಕೆರೆ ಅಂಗಳದಲ್ಲಿ ಕೋಟಿ ವೆಚ್ಚದಲ್ಲಿ ಮೀನು ಮಾರುಕಟ್ಟೆ

## ಗಂಗಾ ಉತ್ಸವದಲ್ಲಿ ಶಾಸಕ ರವಿಕುಮಾರ ಗಣಿಗ ಪ್ರಕಟ

**ಮಂಡ್ಯ:** ಮೀನು ಮಾರುಕಟ್ಟೆಗೆ ಕೆರೆ ಅಂಗಳದಲ್ಲಿ ಸ್ಥಳ ಗುರುತಿಸಿ 1 ಕೋಟಿ ಅನುದಾನ ಬಿಡುಗಡೆ ಮಾಡಿ ಇನ್ನು ಆರು ತಿಂಗಳು ಅಥವಾ ಒಂದು ವರ್ಷದೊಳಗೆ ಮಾರುಕಟ್ಟೆ ನಿರ್ಮಿಸಲಾಗುವುದು ಎಂದು ಶಾಸಕ ಪಿ.ರವಿಕುಮಾರ್ ಭರವಸೆ ನೀಡಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಮಹಿಳಾ ಗಂಗಾಮತ(ಬೆಸ್ತರ) ಸಂಘದ ವತಿಯಿಂದ ನಡೆದ ಗಂಗಾ ಉತ್ಸವ–2026 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಹುದಿನಗಳಿಂದ ಸುಸಜ್ಜಿತ ಮೀನು ಮಾರುಕಟ್ಟೆ ಬೇಕೆಂಬ ಬೇಡಿಕೆ ಇಟ್ಟಿದ್ದೀರಾ, ಅದನ್ನು ನಿರ್ಮಿಸಿಕೊಡುವ ದೃಷ್ಟಿಯಿಂದ ಈಗಾಗಲೇ ನಗರಸಭೆ ವತಿಯಿಂದ ಕೆರೆ ಅಂಗಳದಲ್ಲಿ ಸ್ಥಳ ಗುರುತಿಸಲಾಗಿದೆ. ಇನ್ನೂ ಅಂಬಿಗರ ಚೌಡಯ್ಯ ಅವರ ಪ್ರತಿಮೆ ನಿರ್ಮಾಣಕ್ಕೂ ನಗರ ವ್ಯಾಪ್ತಿಯಲ್ಲಿ ಸ್ಥಳ ಗುರುತಿಸಿ ನಿರ್ಮಾಣ ಮಾಡಿಕೊಡಲಾಗುವುದು ಎಂದು ತಿಳಿಸಿದರು.

ಗಂಗಾಮತಸ್ಥರ ಉತ್ಸವ ಮಾಡುತ್ತಿದ್ದೀರಿ, ಅವರಿಗೆ ಸಂಪೂರ್ಣ ಸಹಕಾರ ನೀಡುತ್ತೇನೆ, ಬೇರೆ ಕ್ಷೇತ್ರದಲ್ಲಿ ವ್ಯವಸ್ಥೆ ಹೇಗಿದಿಯೋ ಗೊತ್ತಿಲ್ಲ, ನನ್ನ ಕ್ಷೇತ್ರದಲ್ಲಿ ಹಾಲಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರು ನಿಮ್ಮ ಸಮುದಾಯದವರೆ ಆಗಿದ್ದಾರೆ, ಜೊತೆಗೆ ಕೆಡಿಬಿ ಸದಸ್ಯರನ್ನಾಗಿ ಮಂಚಯ್ಯ ಅವರನ್ನು ಮಾಡಿದ್ದೇವೆ, ಬಡವರಿಗೆ ನಿವೇಶನ ಹಂಚುವ ಭೂ ಮಂಡಳಿಗೂ ಸದಸ್ಯರನ್ನಾಗಿ, ಸೆಸ್ಕಾಂ ಇಲಾಖೆಗೂ ನಿರ್ದೇಶಕರನ್ನಾಗಿ ನಿಮ್ಮ ಸಮುದಾಯದವರನ್ನೇ ನೇಮಕ ಮಾಡಲಾಗಿದೆ ಎಂದರು.



ಗಂಗಾ ಉತ್ಸವ–2026 ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ರವಿಕುಮಾರ್.

ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಗಂಗಾ ಮತಸ್ಥರು ಎಲ್ಲಿ ಇದ್ದಾರೋ ಅಲ್ಲಿ ಮೂಲ ಸೌಲಭ್ಯಕ್ಕೆ ಒತ್ತು ನೀಡಲಾಗಿದೆ. ಕೋಣನಹಳ್ಳಿ, ಬೂದನೂರು ಕೆರೆ ಅಭಿವೃದ್ಧಿಗೆ 5 ಕೋಟಿ ಅನುದಾನ ನೀಡಲಾಗಿದೆ. ಇಲ್ಲಿ ಕರೆ ಅಭಿವೃದ್ಧಿಯಾಗಿ ಮೀನು ಹೆಚ್ಚಾಗಿ ಸಿಗುತ್ತದೆ. ಹಾಗಾಗಿ ಮೀನು ಹಿಡಿಯುವವರಿಗೆ ಸಹಕಾರಿ ಆಗುತ್ತದೆ, ಇಷ್ಟೆಲ್ಲಾ ಆದರೂ ನಿಮ್ಮ ಸಮುದಾಯದ ಅಭಿವೃದ್ಧಿಗಾಗಿ ಎಂಬುದನ್ನು ತಿಳಿದುಕೊಳ್ಳಬೇಕು. ಜೊತೆಗೆ ಜಾತಿ ನೋಡದೇ ಅಭಿವೃದ್ಧಿ ಕಾರ್ಯಗಳನ್ನು ನನ್ನ ಕ್ಷೇತ್ರದಲ್ಲಿ ಮಾಡಿಕೊಂಡು ಬರುತ್ತಿದ್ದೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಮಹಿಳಾ ಗಂಗಾ ಮತ(ಬೆಸ್ತರ) ಸಂಘದ ಅಧ್ಯಕ್ಷೆ ಸಿ.ಗಾಯಿತ್ರಿ ಕೃಷ್ಣಪ್ಪ ಮಾತನಾಡಿದರು. ಹಾವೇರಿ ನಿಜ ಶರಣ ಅಂಬಿಗರ ಚೌಡಯ್ಯನವರ ಗುರುಪೀಠ ಸುಕ್ಷೇತ್ರದ ಶಾಂತಭೀಷ್ಮಾ ಚೌಡಯ್ಯ ಸ್ವಾಮೀಜಿ ಅವರು ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮಕ್ಕೂ ಮುನ್ನ ನಗರದ ಕಾಳಿಕಾಂಬ ದೇವಾಲಯದ ಆವರಣ ಹಾಗೂ ಗಜೇಂದ್ರ ಗರುಡ ಮೋಕ್ಷ ಕಲ್ಯಾಣಿಯಿಂದ ಕುಂಭಮೇಳದೊಂದಿಗೆ ವಿವಿಧ ಕಲಾ ತಂಡಗಳೊಂದಿಗೆ ಗಂಗಾಪರಮೇಶ್ವರಿ ವಿಗ್ರಹವನ್ನು ಬೆಳ್ಳಿ ಸಾರೋಟಿನ ಮೂಲಕ ಮೆರವಣಿಗೆಯಲ್ಲಿ ವೇದಿಕೆ ಬಳಿ ಕರೆತರಲಾಯಿತು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಕವಿತಾ ಚಿರುಕುನಯ್ಯ, ಮಂಜುಳಾ ಆಲದಹಳ್ಳಿ, ಎಸ್.ವರದಮ್ಮ ಶ್ರೀನಿವಾಸಪುರು, ಪ್ರಮೋದಿನಿ, ಎಲ್.ಭವಾನಿ, ಟಿ.ಸಿ. ವಸಂತ ಕರಡಕೆರೆ ಅವರನ್ನು ಅಭಿನಂದಿಸಲಾಯಿತು. ಅರುಣೋದಯ ಕಲಾತಂಡದಿಂದ ಸುಗಮ ಸಂಗೀತ, ಸವಿತಾ ಚಿರುಕುಣಿ ಮತ್ತು ಚಿಕ್ಕೋರಯ್ಯ ತಂಡದಿಂದ ಪೂಜಾ ಕುಣಿತ, ಮಾರುತಿ ಪ್ರಸನ್ನ ನೇಗಿಲಯೋಗಿ ತಂಡದಿಂದ ಡೊಳ್ಳುಕುಣಿತ, ಚಿಕ್ಕ ಬೋರಯ್ಯ ಕಲಾತಂಡದ ವೀರಮಕ್ಕಳಿಂದ ಜನಪದ ಗೀತೆಯು ಪ್ರೇಕ್ಷಕರ ಗಮನ ಸೆಳೆದವು.

ಕಾರ್ಯಕ್ರಮದಲ್ಲಿ ಸಮಾಜ ಸೇವಕರಾದ ವರದರಾಜು, ಜಯರಾಮು, ಮುಖಂಡರಾದ ಕೃಷ್ಣಯ್ಯ, ಎಂ.ಶ್ರೀನಿವಾಸ್, ಉದಯ್ ಅಂಬಿಗರ್, ಬಿ.ಲಿಂಗಯ್ಯ, ಈರಯ್ಯ ಕನ್ನಲಿ, ಗಂಜಾಂ ಶಿವು, ಎಂ.ಪಿ.ಪೂರ್ಣಾನಂದ, ರಮೇಶ್ ಭಾಗವಹಿಸಿದ್ದರು.

# ವಿಶ್ವೇಶ್ವರಯ್ಯ ನಾಲೆಗೆ ಟ್ರ್ಯಾಕ್ಟರ್ ಮುಗುಚಿ ಯುವಕ ಸಾವು

ಭಾರತೀನಗರ, ಜೂ.8– ವಿಶ್ವೇಶ್ವರಯ್ಯ ನಾಲೆಗೆ ಟ್ರ್ಯಾಕ್ಟರ್ ಮುಗುಚಿ ಪಶ್ಚಿಮ ಬಂಗಾಲ ಮೂಲಕ ಯುವಕನೊಬ್ಬ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಸಬ್ಬನಹಳ್ಳಿ ಗ್ರಾಮದ ಬಳಿ ಜರುಗಿದೆ.

ಪಶ್ಚಿಮ ಬಂಗಾಳದ ಮಾಲ್ದಾ ನಿವಾಸಿಯಾದ ಸಲಾವುದ್ದೀನ್(25) ಎಂಬಾ ತನೇ ಮೃತ ದುರ್ದೈವಿ. ಈತನಿಗೆ ಪತ್ನಿ, 4 ವರ್ಷದ ಪುತ್ರ ಹಾಗೂ ತಿಂಗಳ ಮಗು ಇದೆ.

ಸಲಾವುದ್ದೀನ್ ವಿಶ್ವೇಶ್ವರಯ್ಯ ನಾಲೆ ಆಧುನೀಕರಣ ಕಾಮಗಾರಿಯಲ್ಲಿ ಕೆಲಸ ಮಾಡುತ್ತಿದ್ದು ಈತ ಸೆಂಟ್ರಿಂಗ್ ಕೆಲಸ ನಿರ್ವಹಿಸುತ್ತಿದ್ದ. ಇಂದು ಸಂಜೆ 7 ಗಂಟೆ ಸಂದರ್ಭದಲ್ಲಿ ಟ್ರ್ಯಾಕ್ಟರ್ ಚಲಾಯಿಸಿಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ನೂತನವಾಗಿ ಕಾಮಗಾರಿ ಮಾಡಲಾಗಿದ್ದ ನಾಲೆಯ ಬದಿಯಲ್ಲಿ ಆಯಾತಪ್ಪಿ ನಾಲೆಗೆ ಉರುಳಿ ಬಿದ್ದು ಟ್ರ್ಯಾಕ್ಟರ್ ಕೆಳಗೆ ಸಿಲುಕಿ ಸಾವನ್ನಪ್ಪಿದ್ದಾನೆ.

ವಿಷಯ ತಿಳಿದ ಕೆ.ಎಂ.ದೊಡ್ಡಿ ಠಾಣಾ ಪೊಲೀಸರು ಸ್ಥಳಕ್ಕೆ ಆಗಮಿಸಿ ನಾಲೆಯಲ್ಲಿದ್ದ ಸಲಾವುದ್ದೀನ್ ದೇಹವನ್ನು ಹೊರತೆಗೆದು, ಮಂಡ್ಯ ಮಿಮ್ಸ್ ಆಸ್ಪತ್ರೆ ಶವಾಗಾರಕ್ಕೆ ರವಾನಿಸಲಾಗಿದೆ. ಈ ಸಂಬಂಧ ಕೆ.ಎಂ. ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 2028ಕ್ಕೆ ಜೆಡಿಎಸ್–ಬಿಜೆಪಿ ಸರ್ಕಾರ ಅಧಿಕಾರಕ್ಕೆ

## ಮತ್ತೊಮ್ಮೆ ಆಯ್ಕೆ ಮಾಡಿದರೆ 2 ಸಾವಿರ ಕೋಟಿ ರೂ. ಗಳ ಅನುದಾನ ತರುವೆ

ಕೆ.ಆರ್.ಪೇಟೆ, ಜೂ.8– ತಾಲೂಕಿನ ಸಮಗ್ರ ಅಭಿವೃದ್ಧಿಯೇ ನನ್ನ ಪ್ರಮುಖ ಗುರಿಯಾಗಿದೆ. ಈಗಿನ ಕಾಂಗ್ರೆಸ್ ಸರ್ಕಾರವು ಕ್ಷೇತ್ರಕ್ಕೆ ನೀಡುತ್ತಿರುವ ಅಲ್ಪ–ಸ್ವಲ್ಪ ಅನುದಾನವು ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗಿದೆ. 2028ಕ್ಕೆ ಜೆಡಿಎಸ್–ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬರುವುದು ಸೂರ್ಯ–ಚಂದ್ರರು ಉದಯಿಸುವುದಷ್ಟೇ ಸತ್ಯವಾಗಿದೆ. ಹಾಗಾಗಿ ಮತ್ತೊಮ್ಮೆ ಕ್ಷೇತ್ರದ ಶಾಸಕನನ್ನಾಗಿ ನನ್ನನ್ನು ಆಯ್ಕೆ ಮಾಡಿದರೆ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಕನಿಷ್ಠ 2 ಸಾವಿರ ಕೋಟಿ ರೂಪಾಯಿಗಳ ಅನುಧಾನವನ್ನು ತಂದು ಕೊಡುವುದಾಗಿ ಕ್ಷೇತ್ರದ ಜನಪ್ರಿಯ ಶಾಸಕ ಹೆಚ್.ಟಿ.ಮಂಜು ಭರವಸೆ ನೀಡಿದರು.



ಅಭಿವೃದ್ದಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ತಾಲೂಕಿನ ಕಿಕ್ಕೇರಿ ಹೋಬಳಿಯ ಗಂಗೇನಹಳ್ಳಿ ಗ್ರಾಮದಲ್ಲಿ ಸುಮಾರು 50ಲಕ್ಷ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿರುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಗಂಗೇನಹಳ್ಳಿ ಗ್ರಾಮದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಂ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿ ಗ್ರಾಮಸ್ಥರು ನೀಡಿದ ಗೌರವವನ್ನು ಸ್ವೀಕರಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ಗಂಗೇನಹಳ್ಳಿ ಕೃಷ್ಣಯ್ಯ, ಸಂಜಯ್, ರಾಮು, ಮಧು, ತಾಲೂಕು ಜೆಡಿಎಸ್ ಪಕ್ಷದ ಕಾರ್ಯಾಧ್ಯಕ್ಷ ಮೆಣಸ ಮಹಾದೇವೇಗೌಡ, ಮಂಜೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಕೆ.ಜಿ.ಪುಟ್ಟರಾಜು, ಶೇಖರ್, ಕೆ.ಆರ್.ಐ.ಡಿ.ಎಲ್ ಇಂಜಿನಿಯರ್ ಚೇತನ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಯಾರನ್ನು ಮೆಚ್ಚಿಸಲು, ಹೊಗಳಿಕೆಗಾಗಿ ಕೆಲಸ ನಿರ್ವಹಿಸಿಲ್ಲ

ಭಾರತೀನಗರ, ಜೂ.8– ಯಾರನ್ನು ಮೆಚ್ಚಿಸಲು ಅಥವಾ ಹೊಗಳಿಕೆಗಾಗಿ ಕೆಲಸ ನಿರ್ವಹಿಸಿಲ್ಲ, ಕಾನೂನಿನ ಚೌಕಟ್ಟಿನಲ್ಲಿ ಕೆಲಸ ನಿರ್ವಹಿಸಿದ್ದೇನೆ ಎಂದು ನಿವೃತ್ತ ಪೊಲೀಸ್ ಅಧೀಕ್ಷಕ ಎಸ್.ಇ. ಗಂಗಾಧರ್‌ಸ್ವಾಮಿ ತಿಳಿಸಿದರು.

ಭಾರತೀನಗರದ ಅಂಬೇಡ್ಕರ್ ಭವನದಲ್ಲಿ ಶರಣರ ಸಂಘಟನಾ ವೇದಿಕೆ ವತಿಯಿಂದ ತಮಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ನನ್ನ ಪೊಲೀಸ್ ಇಲಾಖೆಯ ಸೇವಾ ಅವಧಿಯಲ್ಲಿ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲೂ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಸೇವೆಸಲ್ಲಿಸಿರುವುದು ನನಗೆ ತೃಪ್ತಿತಂದಿದೆ. ಯಾರನ್ನು ಮೆಚ್ಚಿಸಲು ಅಥವಾ ಹೊಗಳಿಕೆಗಾಗಿ ಕೆಲಸ ನಿರ್ವಹಿಸಿಲ್ಲ. ಹಾಗಾಗಿ ಈ ಭಾಗದ ಜನರ ಪ್ರೀತಿ ವಿಶ್ವಾಸಗಳಿಸಿದ್ದರಿಂದ ಇಂದಿಗೂ ಕೂಡ ನನ್ನನ್ನು ನೆನಪಿಸಿಕೊಳ್ಳುತ್ತಿರುವುದಕ್ಕೆ ಈ ಅಭಿನಂದನಾ ಕಾರ್ಯಕ್ರಮ ಸಾಕ್ಷಿಯಾಗಿದೆ ಎಂದರು.



ನಿವೃತ್ತ ಪೊಲೀಸ್ ಅಧೀಕ್ಷಕ ಎಸ್.ಈ.ಗಂಗಾಧರ್‌ಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ವಿವಿ ಪ್ರಾಧ್ಯಾಪಕ ಡಾ. ಕೆಸ್ತೂರು ನಾಗರಾಜು ಅಮೃತೇಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶರಣರ ಸಂಘಟನಾ ವೇದಿಕೆಯ ಜಿಲ್ಲಾಧ್ಯಕ್ಷ ಕಾಡುಕೊತ್ತನಹಳ್ಳಿ ನಂದೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಇದೇ ವೇಳೆ ಶರಣರ ಸಂಘಟನಾ ವೇದಿಕೆಯ ಜಿಲ್ಲಾ ಗೌರವಾಧ್ಯಕ್ಷ ಬಬ್ರುವಾಹನ ಕಾರ್ಯಕ್ರಮ ಕುರಿತು ಮಾತನಾಡಿದರು.

ವೇದಿಕೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ದೀಕ್ಷಿತ್, ಸಂಘಟನೆಯ ಮದ್ದೂರು ತಾಲೂಕು ಅಧ್ಯಕ್ಷ ಗಂಗಾಧರ್, ಮಳವಳ್ಳಿ ತಾಲ್ಲೂಕು ಅಧ್ಯಕ್ಷ ಮಹದೇವಸ್ವಾಮಿ, ಮಹದೇವಪ್ಪ, ಬಿ.ಎಸ್. ಬೋರೇಗೌಡ, ಅಣ್ಣೂರು ಮಹೇಂದ್ರ, ಕರಡಕೆರೆ ಯೋಗೇಶ್ ಇದ್ದರು.

ಒಂದನೇ ಪುಟದಿಂದ

# 1.40 ಕೋಟಿ ಮೌಲ್ಯದ ಭಾರೀ ಪ್ರಮಾಣದ ಗಾಂಜಾ ವಶ

ರಾಜೀವ್‌ನಗರದ ಎರಡನೇ ಹಂತದ ನಿವಾಸಿ ಬಷೀರ್ ಅಹಮದ್ ಮಗ ಮುದಾಸಿರ್ ಅಹಮದ್(40), ಮೊಹಮದ್ ಇಶಾಕ್ ಮಗ ಅಬೂಬಕರ್ ಸಿದ್ದಿಕಿ(35) ಹಾಗೂ ರಾಜೀವನಗರದ ಮೊದಲನೇ ಹಂತದ ನಿವಾಸಿ ಲೇ. ಸೈಯದ್ ಮೆಹಮೂದ್ ಅವರ ಮಗ ಸೈಯದ್ ಮುಜಾವರ್(35) ಎಂದು ಗುರುತಿಸಲಾಗಿದೆ.

**ಮುಂಜಾನೆಯೇ ಕಾರ್ಯಾಚರಣೆ:** ಕಳೆದ ಒಂದು ವಾರದಿಂದ ಸಿಸಿಬಿ ಪೊಲೀಸರಿಗೆ ಅಪಾರ ಪ್ರಮಾಣದ ಗಾಂಜಾ ಮೈಸೂರಿಗೆ ರವಾನೆಯಾಗಲಿದೆ ಎಂಬ ಮಾಹಿತಿ ಲಭ್ಯವಾಗಿತ್ತು. ಪ್ರತಿದಿನ ರಾತ್ರಿ ವೇಳೆ ಮಫ್ತಿಯಲ್ಲಿ ಗಾಂಜಾ ಸಾಗಾಟದ ಜಾಲ ಭೇದಿಸಲು ಸಿಸಿಬಿ ಪೊಲೀಸರು ಕಾದು ಕುಳಿತಿದ್ದರು. ಕಳೆದ ಮಧ್ಯರಾತ್ರಿ 3.15ಕ್ಕೆ ಖಚಿತ

ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತರಾದ ಸಿಸಿಬಿ ಎಸಿಪಿ ಮೊಹಮದ್ ಶರೀಫ್ ರಾವುತರ್, ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ನೇತೃತ್ವದ ತಂಡ ಮೈಸೂರು–ಬನ್ನೂರು ಮುಖ್ಯರಸ್ತೆ ನಾಡನಹಳ್ಳಿ ಗೇಟ್ ಬಳಿ ತಪಾಸಣೆ ನಡೆಸಿದಾಗ ಈ ಅಕ್ರಮ ಬಯಲಿಗೆ ಬಂದಿದೆ.

**ಒಡಿಸ್ಸಾ ಮೂಲ:** ಪೊಲೀಸರ ಕಣ್ತಪ್ಪಿಸಲು ಕ್ಯಾಂಟರ್‌ನಲ್ಲಿ ಗುಂಟೂರು ಬಳಿ ಫಾರಂವೊಂದರಲ್ಲಿ 72 ತೆಂಗಿನ ಸಸಿ ಖರೀದಿಸಿ ಜೋಡಿಸಲಾಗಿತ್ತು. ಮೇಲ್ನೋಟಕ್ಕೆ ತೆಂಗಿನ ಗಿಡ ಸಾಗಿಸುತ್ತಿರುವಂತೆ ಕಾಣುತ್ತಿದ್ದ ಗೂಡ್ಸ್ ವಾಹನದಲ್ಲಿ 1 ಹಾಗೂ 2ಕೆಜಿ ತೂಕದ ಒಟ್ಟು 134 ಪ್ಯಾಕ್ ಒಣಗಿಸಿರುವ ಗಾಂಜಾ ಪತ್ತೆಯಾಗಿದೆ. ಬಂಧಿತ ಆರೋಪಿಗಳು ವಿಚಾರಣೆ ವೇಳೆ ಒಡಿಸ್ಸಾದಿಂದ ಗಾಂಜಾ ತರಲಾಗಿದೆ ಎಂಬ ಮಾಹಿತಿ ನೀಡಿದ್ದಾರೆ.



ಗಾಂಜಾ ಸಾಗಾಟ ಮಾಡುತ್ತಿದ್ದ ಈಚರ್ ವಾಹನ.

**ಮೈಸೂರಿಂದ ಹಂಚಿಕೆ:** ವಶಪಡಿಸಿಕೊಂಡ 280 ಕೆಜಿ ಗಾಂಜಾ ಆರೋಪಿಗಳು ಸುರಕ್ಷಿತವಾಗಿ ಮೈಸೂರಿಗೆ ತಂದಿದ್ದರೆ, ಅದನ್ನು ಕೇರಳ ಸೇರಿದಂತೆ ವಿವಿಧೆಡೆ 1 ಅಥವಾ 2 ಕೆಜಿ ತೂಕದ ಪೊಟ್ಟಣ ಮಾಡಿ ಸಾಗಾಟ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ. ಬಂಧಿತ ನಾಲ್ವರಲ್ಲಿ ಒಬ್ಬನ ಮೇಲೆ ಮಾತ್ರ ಈ ಹಿಂದೆ ಕೆಲ ಅಪರಾಧ ಕೃತ್ಯಗಳಲ್ಲಿ ಪಾಲ್ಗೊಂಡಿರುವ ಪ್ರಕರಣವಿದ್ದು, ಉಳಿದ ಮೂವರ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ.

**ಬೆಚ್ಚಿಬಿದ್ದ ಜನ:** ಬನ್ನೂರು ಮುಖ್ಯರಸ್ತೆಯಲ್ಲಿ ದಾಳಿ ನಡೆಸಿ ಗಾಂಜಾ ಸಾಗಾಟ ಮಾಡುತ್ತಿದ್ದ ಐಷರ್ ವಾಹನ ಕಂಡು ದಾರಿ ಹೋಕರು ಬೆಚ್ಚಿ ಬಿದ್ದರು. ದಾಳಿ ನಡೆಸಿದ್ದು ಮುಂಜಾನೆ 4.45ಕ್ಕೆ ಆದರೂ, ಸ್ಥಳ ಮಹಜರು ನಡೆಸಲು ಹಾಗೂ ವಶಪಡಿಸಿಕೊಂಡ ಗಾಂಜಾ ಪರಿಶೀಲಿಸಿ ದಾಖಲೀಕರಿಸಲು ಬೆಳಗ್ಗೆ 9.30 ಆಗಿತ್ತು. ಅಷ್ಟರಲ್ಲಾಗಲೇ ಮೈಸೂರು–ಬನ್ನೂರು ರಸ್ತೆಯಲ್ಲಿ ಸಂಚರಿಸುವ ನೂರಾರು ಮಂದಿ ವಾಹನ ಸವಾರರು ತೆಂಗಿನ ಸಸಿಗಳ ನಡುವೆ ಮರೆಮಾಚಿ ಅಪಾರ ಪ್ರಮಾಣದ ಗಾಂಜಾ ಸಾಗಾಟ ಮಾಡಲಾಗುತ್ತಿತ್ತು ಎಂಬ ಮಾಹಿತಿ ಪಡೆದು ಹೌಹಾರಿದರು.

**ನಿದ್ದೆಗೆಟ್ಟು ಗಾಂಜಾ ರಾಕೆಟ್ ಭೇದಿಸಿದ ಸಿಸಿಬಿ ಪಡೆ:** ಮಾದಕ ವಸ್ತುಗಳ ಮಾರಾಟ, ಸರಬರಾಜು ತಡೆಗಟ್ಟುವ ನಿಟ್ಟಿನಲ್ಲಿ ಸಮರ ಸಾರಿರುವ ಸಿಸಿಬಿ ಪಡೆ ಮೈಸೂರಿಗೆ ದೊಡ್ಡ ಪ್ರಮಾಣದಲ್ಲಿ ಗಾಂಜಾ ಸರಬರಾಜುತ್ತಿರುವ ಮಾಹಿತಿ ಪಡೆದು ಅದನ್ನು ಭೇದಿಸುವಲ್ಲಿ ನಡೆಸಿದ ಮಿಂಚಿನ ಕಾರ್ಯಾಚರಣೆಗೆ ಪ್ರಶಂಸೆ ವ್ಯಕ್ತವಾಗಿದೆ. ಸಿಸಿಬಿಇ ಎಸಿಪಿ ಮೊಹಮದ್ ಶರೀಫ್ ರಾವುತರ್, ಸಿಸಿಬಿ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ನೇತೃತ್ವದಲ್ಲಿ ಸಬ್‌ಇನ್ಸ್‌ಪೆಕ್ಟರ್‌ಗಳಾದ ಲೇಪಾಕ್ಷ, ಅನಿಲ್, ರೇವಣ್ಣ ಸಿದ್ದಪ್ಪ, ಸಿಬ್ಬಂದಿಗಳಾದ ಚೇತನ್, ಆದಂ, ಸಂತೋಷ್, ಕಿರಣ್, ಸಮೀರ್, ಯಶವಂತ್, ಅಜರದ್, ರಾಜೇಸಾಬ್, ಚಾಲಕರಾದ ಸತೀಶ್, ಸಿದ್ದರಾಜು, ಸುರೇಶ್ ಬಾಬು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು. ಸಿಸಿಬಿ ಕಾರ್ಯಾಚರಣೆಗೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಡಾ.ಹರ್ಷ ಪ್ರಿಯಂವದ, ಕೆ.ಎಸ್.ಸುಂದರ್‌ರಾಜ್ ಹಾಗೂ ಹಿರಿಯ ಅಧಿಕಾರಿಗಳು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

# ಫಿಲಿಪೈನ್ಸ್‌ನಲ್ಲಿ ಪ್ರಬಲ ಭೂಕಂಪ: 35ಕ್ಕೂ ಅಧಿಕ ಸಾವು

ಹಾನಿಗೊಳಗಾಗಿದ್ದು, ಕೆಲವು ಸಂಪೂರ್ಣ ಕುಸಿದಿವೆ ಎಂದು ಮಾಹಿತಿ ನೀಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊಗಳಲ್ಲಿ ಜನರಲ್ ಸ್ಯಾಂಟೋಸ್ ನಗರದ ಒಂದು ವಾಣಿಜ್ಯ ಸಂಕೀರ್ಣ ಸಂಪೂರ್ಣವಾಗಿ ನೆಲಸಮವಾಗಿರುವ ದೃಶ್ಯಗಳು ಕಂಡುಬಂದಿವೆ.

ಜಾಲಿಬೀ ಫಾಸ್ಟ್‌ಫುಡ್ ರೆಸ್ಟೋರೆಂಟ್ ಹೊಂದಿದ್ದ ಕಟ್ಟಡ ಕುಸಿದಿದ್ದು, ಮತ್ತೊಂದು ಪ್ರದೇಶದಲ್ಲಿ ಖಾಲಿಯಾಗಿದ್ದ ಶಾಲಾ ಕಟ್ಟಡವೂ ಧರೆಗುರುಳಿದೆ. "ದೇವರೇ, ಕಟ್ಟಡ ಸಂಪೂರ್ಣ ಕುಸಿದುಬಿಟ್ಟಿದೆ" ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿರುವುದು ವಿಡಿಯೊಗಳಲ್ಲಿ ಕೇಳಿಬಂದಿದೆ.

ಭೂಕಂಪದ ಸುಮಾರು ಎರಡು ಗಂಟೆಗಳ ನಂತರ 6.1 ತೀವ್ರತೆಯ ಪ್ರಬಲ ಕಂಪನ (ಆಫ್ಟರ್‌ಶಾಕ್) ಕೂಡ ಸಂಭವಿಸಿದ್ದು, ಜನರಲ್ಲಿ ಮತ್ತಷ್ಟು ಆತಂಕ ಉಂಟುಮಾಡಿದೆ. ಈ ನಡುವೆ ಅಧಿಕಾರಿಗಳು ಹಾನಿಗೊಳಗಾದ ಕಟ್ಟಡಗಳ ಸಮೀಪ ಹೋಗದಂತೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ.

ಭೂಕಂಪದ ಬಳಿಕ ಪೆಸಿಫಿಕ್ ಸುನಾಮಿ ಎಚ್ಚರಿಕೆ ಕೇಂದ್ರವು ಮುಂದಿನ ಮೂರು ಗಂಟೆಗಳ ಅವಧಿಯಲ್ಲಿ ಫಿಲಿಪೈನ್ಸ್, ಇಂಡೋನೇಷ್ಯಾ, ಪಲಾವ್, ತೈವಾನ್ ಮತ್ತು ಪಪುವಾ ನ್ಯೂಗಿನಿಯಾ ಕರಾವಳಿ ಪ್ರದೇಶಗಳಿಗೆ ಸುನಾಮಿ ಅಲೆಗಳು ಅಪ್ಪಳಿಸುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡಿದೆ. ಇದರಿಂದ ಕರಾವಳಿ ಪ್ರದೇಶಗಳಲ್ಲಿ ವಾಸಿಸುವ ಸಾವಿರಾರು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗುತ್ತಿದೆ.

ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ಮಾರ್ಕೋಸ್ ಜೂನಿಯರ್. ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದು, ಮಿಂಡನಾವೊದ ಪೀಡಿತ ಪ್ರದೇಶಗಳಲ್ಲಿ ಶಾಲೆಗಳಿಗೆ ರಜೆ ಘೋಷಿಸಿದ್ದಾರೆ. ಕರಾವಳಿ ಪ್ರದೇಶದ ನಿವಾಸಿಗಳಿಗೆ ತಕ್ಷಣ ಎತ್ತರದ ಪ್ರದೇಶಗಳಿಗೆ ತೆರಳುವಂತೆ ಸೂಚನೆ ನೀಡಿದ್ದಾರೆ.

ಈಗಲೇ ಸುರಕ್ಷಿತ ಪ್ರದೇಶಗಳಿಗೆ ತೆರಳಿ. ತಡ ಮಾಡಬೇಡಿ. ನಿಮ್ಮ ಜೀವವೇ ಅತ್ಯಂತ ಮುಖ್ಯ ಎಂದು ಮಾರ್ಕೋಸ್ ಮನವಿ ಮಾಡಿದ್ದಾರೆ. ಇಂಡೋನೇಷ್ಯಾ ಸರ್ಕಾರ ಕೂಡ ಉತ್ತರ ಸುಲಾವೆಸಿ, ಗೊರೊಂಟಾಲೊ ಮತ್ತು ಸಂಗಿಹೆ ದ್ವೀಪಗಳ ಕರಾವಳಿ ಪ್ರದೇಶಗಳಲ್ಲಿ ವಾಸಿಸುವ ಜನರನ್ನು ಎತ್ತರದ ಪ್ರದೇಶಗಳಿಗೆ ಸ್ಥಳಾಂತರಿಸಲು ಆದೇಶಿಸಿದೆ. ಜಪಾನ್ ಕೂಡ ತನ್ನ ಪೆಸಿಫಿಕ್ ಕರಾವಳಿ ಭಾಗಗಳಿಗೆ ಸುನಾಮಿ ಸಲಹೆ ಹೊರಡಿಸಿದ್ದು, ಸುಮಾರು ಒಂದು ಮೀಟರ್ ಎತ್ತರದ ಅಲೆಗಳು ಅಪ್ಪಳಿಸುವ ಸಾಧ್ಯತೆ ಇದೆ ಎಂದು ಎಚ್ಚರಿಸಿದೆ.

ಫಿಲಿಪೈನ್ಸ್ ವಿಶ್ವದ ಅತ್ಯಂತ ಭೂಕಂಪ ಪೀಡಿತ ಪ್ರದೇಶಗಳಲ್ಲಿ ಒಂದಾಗಿದ್ದು, ಪೆಸಿಫಿಕ್ "ರಿಂಗ್ ಆಫ್ ಫೈರ್" ವಲಯದಲ್ಲಿದೆ. ಈ ಪ್ರದೇಶದಲ್ಲಿ ಭೂಮಿಯ ಟೆಕ್ಟೋನಿಕ್ ಫಲಕಗಳ ಚಲನೆಯಿಂದ ಆಗಾಗ್ಗೆ ಭೂಕಂಪಗಳು ಸಂಭವಿಸುತ್ತವೆ. ಕಳೆದ ವರ್ಷವೂ ಮಿಂಡನಾವೊ ಪ್ರದೇಶದಲ್ಲಿ 7.4 ಮತ್ತು 6.7 ತೀವ್ರತೆಯ ಭೂಕಂಪಗಳು ಸಂಭವಿಸಿ ಕನಿಷ್ಠ ಎಂಟು ಮಂದಿ ಸಾವನ್ನಪ್ಪಿದ್ದರು.

ಇದಕ್ಕೂ ಮೊದಲು ಸಂಭವಿಸಿದ್ದ 6.9 ತೀವ್ರತೆಯ ಭೂಕಂಪದಿಂದ 76 ಮಂದಿ ಮೃತಪಟ್ಟಿದ್ದು, ಸುಮಾರು 72 ಸಾವಿರ ಕಟ್ಟಡಗಳು ಹಾನಿಗೊಳಗಾಗಿದ್ದವು. ಇದೀಗ 7.8 ತೀವ್ರತೆಯ ಭೂಕಂಪ ಮತ್ತೊಮ್ಮೆ ಫಿಲಿಪ್ಪೀನ್ಸ್‌ನಲ್ಲಿ ಭಾರಿ ಆತಂಕ ಸೃಷ್ಟಿಸಿದ್ದು, ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳು ಭರದಿಂದ ಸಾಗುತ್ತಿವೆ.

# ಬಿಜೆಪಿ ದ್ರೋಹ

ಪ್ರಸ್ತಾಪ ಮಾಡಿದ್ದರು. ಹಾಗಾಗಿ ದೇವೇಗೌಡರು ಮತ್ತೊಮ್ಮೆ ರಾಜ್ಯಸಭೆ ಪ್ರವೇಶಿಸುವ ನಿರೀಕ್ಷೆ ಹೆಚ್ಚಾಗಿತ್ತು. ಆದರೆ, ಈಗ ಅದೆಲ್ಲವೂ ಹುಸಿಯಾಗಿದೆ. ದೇವೇಗೌಡರಿಗೆ ರಾಜ್ಯಸಭಾ ಸ್ಥಾನವನ್ನು ಬಿಜೆಪಿ ನಿರಾಕರಿಸಿದ ರೀತಿ ಅವರಿಗೆ ಅಥವಾ ಪ್ರಾದೇಶಿಕ ಪಕ್ಷಕ್ಕೆ ಮಾತ್ರವಲ್ಲದೆ ಕರ್ನಾಟಕದ ಜನರಿಗೆ ಮಾಡಿದ ಅವಮಾನವಾಗಿದೆ ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಹೇಳಿದ್ದಾರೆ.

ಬಿಜೆಪಿ ಮತ್ತು ಎನ್‌ಡಿಎ ಕರ್ನಾಟಕದ ಜನರನ್ನು ಅವಮಾನಿಸಿವೆ. ಸಂಸತ್ತಿನಲ್ಲಿ ವಿವಿಧ ಮಸೂದೆಗಳನ್ನು ಅಂಗೀಕರಿಸಲು ಜೆಡಿ(ಎಸ್) ಮತ್ತು ದೇವೇಗೌಡರ ಬೆಂಬಲ ಪಡೆದ ನಂತರ ಅವರಿಗೆ ಈ ರೀತಿ ದ್ರೋಹ ಮಾಡುತ್ತಾರೆಂದು ಯಾರೂ ನಿರೀಕ್ಷಿಸಿರಲಿಲ್ಲ. ಮುಂದಿನ ದಿನಗಳಲ್ಲಿ ಜನರು ಬಿಜೆಪಿಗೆ ಪಾಠ ಕಲಿಸುತ್ತಾರೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಬಿಜೆಪಿ ಮತ್ತು ಜೆಡಿ(ಎಸ್) ಚುನಾವಣೆಯಲ್ಲಿ ಯಾರಿಗೆ ಟಿಕೆಟ್ ನೀಡುತ್ತಾರೆ ಎಂಬುದು ಕಾಂಗ್ರೆಸ್‌ಗೆ ಸಂಬಂಧವಿಲ್ಲದ ವಿಚಾರ. ಅದು ಅವರ ಪಕ್ಷದ ನೀತಿಯಾಗಿದೆ ಎಂದು ಹೇಳಿದ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಆದರೆ, ಒಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕು – ಎರಡೂ ಪಕ್ಷಗಳ ನಡುವಿನ ಮೈತ್ರಿ ಈ ಪ್ರಮುಖ ಸ್ಥಾನದಲ್ಲಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಜೂನ್ 25 ರಂದು ಈರಣ್ಣ ಕಡಾಡಿ ಮತ್ತು ನಾರಾಯಣ ಕೊರಗಪ್ಪ(ಇಬ್ಬರೂ ಬಿಜೆಪಿಯಿಂದ), ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ ಮತ್ತು ದೇವೇಗೌಡರ ಅವಧಿ ಕೊನೆಗೊಳ್ಳುತ್ತಿದ್ದು, ಈ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ಜೂನ್ 18 ರಂದು ಚುನಾವಣೆ ನಡೆಯಲಿದೆ. ವಿಧಾನ ಸಭೆಯಲ್ಲಿನ ತನ್ನ ಬಲದ ಆಧಾರದ ಮೇಲೆ ಕಾಂಗ್ರೆಸ್ ಮೂರು ಸ್ಥಾನಗಳನ್ನು ಗೆಲ್ಲಬಹುದಾಗಿದ್ದು, ಬಿಜೆಪಿ ಒಂದು ಸ್ಥಾನ ಗೆಲ್ಲಲಿದೆ.

# ಪ್ರಾಯೋಜಕತ್ವದಲ್ಲಿ ಮೈಸೂರು ರಸ್ತೆಗಳಲ್ಲಿ ಗುಂಡಿ ಉತ್ಸವ

ಚಕ್ರ ಗುಂಡಿಯಲ್ಲಿ ಹೂತುಕೊಂಡು ಮುಂದೆ ಸಾಗದೆ ಚಾಲಕರು ಹರಸಾಹಸ ಪಡು ವಂತಾಯಿತು. ಅಲ್ಲದೆ ಗುಂಡಿ ಬಗೆದು ಮಣ್ಣಾಕುವುದರಿಂದ ಇಡೀ ರಸ್ತೆಯಲ್ಲಿ ಬೊಗ್ಗಡ, ಕೊಚ್ಚೆ ಆವರಿಸಿ ಅವಾಂತರ ಸೃಷ್ಟಿಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕಾಮಗಾರಿಗಳನ್ನು ನಡೆಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದ್ದಾರೆ.

ಪಾಲಿಕೆಯ ಒಳಚರಂಡಿ ವಿಭಾಗದಿಂದ ವರ್ಷದ ಹಿಂದೆ ಕೈಗೊಂಡ ಕಾಮಗಾರಿ ವಿಫಲವಾಗಿದ್ದು, ಅದನ್ನು ಮತ್ತೆ ಲಕ್ಷಾಂತರ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ. ಈ ರೀತಿ ಜನರ ತೆರಿಗೆ ಹಣ ಪೋಲು ಮಾಡುವುದನ್ನು ಕೇಳುವವರೇ ಇಲ್ಲದಂತಾಗಿದೆ. ಇದನ್ನೆಲ್ಲಾ ನೋಡುತ್ತಿದ್ದರೆ ಜನರ ಹಣ ಭಾರೀ ಪ್ರಮಾಣದಲ್ಲಿ ದುರುಪಯೋಗವಾಗುತ್ತಿದೆ.

**ಬಿರುದು–ಸನ್ಮಾನಗಳನ್ನು ನೀಡಬೇಕು!:** ಕೆಲ ತಿಂಗಳ ಹಿಂದಷ್ಟೇ ಡಾಂಬರೀಕರಣ ಮಾಡಿ, ಅಭಿವೃದ್ಧಿ ಪಡಿಸಿದ ರಸ್ತೆಗಳನ್ನು ಮತ್ತೆ ಯುಜಿಡಿ ಕಾಮಗಾರಿ ಹೆಸರಿನಲ್ಲಿ ಅಗೆದು ಹಾಳು ಮಾಡಲಾಗಿದೆ. ಒಂದೆರಡು ಗುಂಡಿಗಳಿದ್ದ ರಸ್ತೆಯನ್ನು ಸಂಪೂರ್ಣವಾಗಿ ಗುಂಡಿಮಯ ಮಾಡುವುದರಲ್ಲಿ ನಗರ ಪಾಲಿಕೆ ಅಧಿಕಾರಿಗಳು ನಿಸ್ಸಿಮರಾಗಿದ್ದು, ಖ್ಯಾತಿ ಪಡೆದವರಿಗೆ ನೀಡುವ ಬಿರುದು– ಸನ್ಮಾನಗಳನ್ನು ನೀಡಿ ಗೌರವಿಸಬೇಕು ಎಂದು ಗುಂಡಿಗಳಿಂದ ಹಾನಿಗೊಳಗಾಗಿ, ಸಂಕಟ ಅನುಭವಿಸುತ್ತಿರುವವರು 'ಮೈಸೂರು ಮಿತ್ರ'ನಲ್ಲಿ ತಮಗಾದ ನೋವನ್ನು ತೋಡಿಕೊಂಡಿದ್ದಾರೆ.

**ತೀವ್ರ ಅಸಡ್ಡೆ:** ಮಳೆಗಾಲ ಎಂಬ ಪರಿಜ್ಞಾನವಿಲ್ಲದೆ ಗುಂಡಿಗಳನ್ನು ಅಗೆಯುತ್ತಿರುವ ಪಾಲಿಕೆ ಹಾಗೂ ಚೆಸ್ಕಾಂ ಅಧಿಕಾರಿಗಳನ್ನು ಪ್ರಶ್ನಿಸಿದರೆ ತೀವ್ರ ಅಸಡ್ಡೆ ತೋರುತ್ತಾರೆ. ಗುಂಡಿಯಲ್ಲಿ ಬಿದ್ದು ಕೈಕಾಲು ಮುರಿದುಕೊಂಡು ಸಂಕಟ ಹೇಳಿಕೊಂಡರೂ ಕಿಂಚಿತ್ತೂ ಕರುಣೆ ಇಲ್ಲದಂತೆ ದರ್ಪ ಮೆರೆಯುತ್ತಾರೆ. ಮೈಸೂರನ್ನು ಸರ್ವನಾಶ ಮಾಡಲೆಂದೇ ಛಲ ತೊಟ್ಟು ನಿಂತಿದ್ದಾರೆ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಸರಿಯಾಗುವ ಲಕ್ಷಣಗಳು ಕಾಣ್ತಾ ಇಲ್ಲ:** ಸಾಂಸ್ಕೃತಿಕ ನಗರಿ, ಅರಮನೆ ನಗರಿ, ಪಾರಂಪರಿಕ ನಗರಿ, ಸ್ವಚ್ಛ ನಗರಿ ಎಂಬಿತ್ಯಾದಿ ಬಿರುದಾಂಕಿತ ಮೈಸೂರಿನ ರಸ್ತೆಗಳನ್ನು ಮುಂದಿನ ದಿನಗಳಲ್ಲಾದರೂ ಸರಿ ಪಡಿಸುತ್ತಾರೆ ಎಂದರೆ, ಆದ್ಯಾವ ಲಕ್ಷಣಗಳು ಕಾಣುತ್ತಿಲ್ಲ. ಅವರಿಗೆ ಗೊತ್ತಿರೋದು ಒಂದೇ. ಅದು ಸಾರ್ವಜನಿಕರ ತೆರಿಗೆ ಹಣವನ್ನು ಬೇಕಾಬಿಟ್ಟಿಯಾಗಿ ವ್ಯಯ ಮಾಡುವುದು ಎಂದು ಕಿಡಿಕಾರಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದ ಒಂದು ರಸ್ತೆ ನಿರ್ಮಾಣ ಮಾಡಿಲ್ಲ. ಹೋಗಲಿ ಡಾಂಬರೀಕರಣ ಮಾಡಿ, ಅಭಿವೃದ್ಧಿಯನ್ನು ಮಾಡಿಲ್ಲ. ಈಗ ಅಲ್ಲೆಲ್ಲೋ ವೈಟ್ ಟ್ಯಾಪಿಂಗ್ ಹೆಸರಲ್ಲಿ ಸಿಮೆಂಟ್ ರಸ್ತೆ ಮಾಡಲಾಗುತ್ತಿದೆ. ಒಂದೆರಡು ರಸ್ತೆ ಸುಧಾರಿಸಿದರೆ ಸಾಕೇ?

# ಗೌಡರ ರಾಜಕೀಯ ಕೊನೆಗೊಳ್ಳುವ ಸಾಧ್ಯತೆ

ಇಂತಹ ಸನ್ನಿವೇಶ ದಲ್ಲೂ ದೇವೇಗೌಡ ಅವರು ತಮಗೆ ರಾಜ್ಯಸಭಾ ಚುನಾವಣೆಯಲ್ಲಿ ಬೆಂಬ ಲಿಸುವಂತೆ ಯಾವುದೇ ನಾಯಕರನ್ನು ಕೋರಲಿಲ್ಲ. ಜೆಡಿಎಸ್ ಸಹ ಈ ಕುರಿತು ಪ್ರಸ್ತಾಪಿಸಲಿಲ್ಲ. ಇದರ ಮಧ್ಯೆ ಬಿಜೆಪಿ ಸಂಸದ ಹಾಗೂ ದೇವೇಗೌಡ ಅಳಿಯ ಡಾ. ಮಂಜುನಾಥ್, ಆರೋಗ್ಯದ ದೃಷ್ಟಿ ಯಿಂದ ಚುನಾವಣಾ ರಾಜಕೀಯದಿಂದ ವಿಶ್ರಮಿಸಿ, ಒಂದು ವೇಳೆ ಆಹ್ವಾನ ಬಂದರೂ ಸ್ವೀಕರಿಸ ಬೇಡಿ ಎಂಬ ಸಲಹೆ ನೀಡಿದ್ದರಂತೆ.

ಕೇಂದ್ರ ಬಿಜೆಪಿ ಸಹ ದೇವೇಗೌಡ ಅವರನ್ನು ಬೆಂಬಲಿಸಬೇಕೇ ಅಥವಾ ಪಕ್ಷದ ಅಭ್ಯರ್ಥಿ ಕಣ್ಕಕಿಳಿಸಬೇಕೇ ಎಂಬ ಕುರಿತು ನಿರ್ಧಾರ ಮಾಡಿರಲಿಲ್ಲ. ಆದರೆ, ನಿನ್ನೆ ತಡರಾತ್ರಿ ಆರ್‌ಎಸ್‌ಎಸ್ ಸಕ್ರಿಯ ಕಾರ್ಯಕರ್ತ ಕುರುಬ ಸಮುದಾಯದ ಪ್ರೊ. ಎಂ.ನಾಗರಾಜು ಅವರನ್ನು ಅಭ್ಯರ್ಥಿ ಯಾಗಿ ಪ್ರಕಟಿಸಿತು. ಇದರಿಂದ ದೇವೇಗೌಡರ ಆಯ್ಕೆ ನಿರೀಕ್ಷೆ ಹುಸಿಗೊಂಡು, ಕಳೆದ ಐದು ದಶಕಗಳ ಅವರ ಸಂಸದೀಯ ಜೀವನ ಕೊನೆಗೊಂಡಿದೆ. ತಾಲೂಕು ಬೋರ್ಡ್ ಚುನಾವಣಾ ಕಣಕ್ಕೆ ಇಳಿಯುವ ಮೂಲಕ ರಾಜಕೀಯ ಪ್ರವೇಶಿಸಿದ್ದ ದೇವೇಗೌಡರು, ವಿಧಾನಸಭೆ, ರಾಜ್ಯಸಭೆ ಹಾಗೂ ಲೋಕ ಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಈ ಅವಧಿಯಲ್ಲಿ ವಿಧಾನಸಭೆಯ ಪ್ರತಿಪಕ್ಷ ನಾಯಕರಾಗಿ, ಸಚಿವರಾಗಿ, ಮುಖ್ಯಮಂತ್ರಿಯಾಗಿ, ಪ್ರಧಾನಿಯಾಗಿ ಅಧಿಕಾರ ಸವಿದ ದೇವೇಗೌಡರು, 2019ರ ಲೋಕಸಭಾ ಚುನಾವಣೆಯಲ್ಲಿ ತುಮಕೂರಿನಿಂದ ಸ್ಪರ್ಧಿಸಿ ಬಿಜೆಪಿ ಅಭ್ಯರ್ಥಿ ವಿರುದ್ಧ ಸೋಲುಂಡಿದ್ದರು. ನಂತರ ಕಾಂಗ್ರೆಸ್ ಹಾಗೂ ಜೆಡಿಎಸ್ ಮೈತ್ರಿ ಸರ್ಕಾರದ ವೇಳೆ ದೇವೇಗೌಡ ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆಗೊಂಡಿದ್ದರು.

# ಸ್ಥಾನವೇ ಹೆಚ್ಚಾಯ್ತಾ!

ಸಚಿವ ಸ್ಥಾನ ಉಳಿಸಿಕೊಳ್ಳಬೇಕು ಎಂಬ ಒಂದೇ ಕಾರಣಕ್ಕೆ ಬಿಜೆಪಿ ನಾಯಕರು ಜೆಡಿಎಸ್‌ಗೆ ಮಾಡುತ್ತಿರುವ ನಿರಂತರ ಅವಮಾನಗಳನ್ನು ಕುಮಾರಸ್ವಾಮಿ ಸಹಿಸಿಕೊಳ್ಳುತ್ತಿರುವುದು ಅತ್ಯಂತ ಆಶ್ಚರ್ಯಕರ ಎಂದು ಟೀಕಿಸಿದ್ದಾರೆ. 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿಯ ಜಿ.ಎಸ್. ಬಸವರಾಜು ಅವರು ದೇವೇಗೌಡರನ್ನು ಸೋಲಿಸಿದ್ದರು. ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ, ಕರ್ನಾಟಕದ ಮಾಜಿ ಪ್ರಧಾನಿ ಎಂಬ ಗೌರವ ನೀಡಿ ಸೋನಿಯಾ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷವು ದೇವೇಗೌಡರನ್ನು ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆ ಮಾಡಲು ಬೆಂಬಲ ನೀಡಿತ್ತು ಎಂದು ಸುರ್ಜೇವಾಲ ನೆನಪಿಸಿದ್ದಾರೆ.

ಕುಮಾರಸ್ವಾಮಿ ಏನಾದರೂ ಬಿಜೆಪಿಯೊಂದಿಗೆ ಕೈಜೋಡಿಸಿದರೆ ನಾನು ಅವರನ್ನು ನನ್ನ ಮಗನೆಂದು ಒಪ್ಪುವುದಿಲ್ಲ, ತ್ಯಜಿಸುತ್ತೇನೆ ಎಂದು ಸ್ವತಃ ದೇವೇಗೌಡರೇ ಈ ಹಿಂದೆ ಸಾರ್ವಜನಿಕವಾಗಿ ಹೇಳಿದ್ದರು. ಈ ಎಲ್ಲಾ ಹೇಳಿಕೆಗಳನ್ನು ಗಾಳಿಗೆ ತೂರಿ ಅಕ್ಟೋಬರ್ 2023ರಲ್ಲಿ ಜೆಡಿಎಸ್ ಮತ್ತು ಕುಮಾರಸ್ವಾಮಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಮೋದಿ ಸರ್ಕಾರದಲ್ಲಿ ಬೃಹತ್ ಕೈಗಾರಿಕೆ ಸಚಿವರಾದರು ಎಂಬುದನ್ನು ಸುರ್ಜೇವಾಲ ನೆನಪಿಸಿದ್ದಾರೆ.

ಇದೀಗ 2026 ರ ಜೂನ್ 7 ರಂದು ಅದೇ ಬಿಜೆಪಿ ಮಾಜಿ ಪ್ರಧಾನಿಗೆ ರಾಜ್ಯಸಭಾ ಟಿಕೆಟ್ ನಿರಾಕರಿಸಿ ಪಕ್ಷದ ಸಾಮಾನ್ಯ ನಾಯಕನಿಗೆ ಮಣೆ ಹಾಕಿದೆ. ಯಾವ ಬೆಲೆ ತೆತ್ತಾದರೂ ಸರಿ, ಯಾವುದೇ ಪರಿಸ್ಥಿತಿಯಲ್ಲಾದರೂ ಸರಿ, ಅಧಿಕಾರ ಹಿಡಿಯುವುದು ಮತ್ತು ಕುರ್ಚಿ ಉಳಿಸಿಕೊಳ್ಳುವುದು ಮಾತ್ರವೇ ಸದ್ಯ ಕರ್ನಾಟಕದಲ್ಲಿ ಜೆಡಿಎಸ್‌ನ ಏಕೈಕ ಮೂಲಮಂತ್ರ ಮತ್ತು ಸಿದ್ಧಾಂತವಾಗಿದೆ ಎಂಬುದು ಈ ಬೆಳವಣಿಗೆಯಿಂದ ಸಾಬೀತಾಗಿದೆ ಎಂದು ಸುರ್ಜೇವಾಲಾ ವ್ಯಂಗ್ಯವಾಡಿದ್ದಾರೆ.

# ಕೊಡಗಿಗೆ ಬಂದಿಳಿದ ಎನ್‌ಡಿಆರ್‌ಎಫ್ ಯೋಧರ ತಂಡ

ಯೋಧರ ತಂಡ ಪ್ರವಾಹ, ಭೂಕುಸಿತ ಸೇರಿದಂತೆ ಎಲ್ಲಾ ರೀತಿಯ ಪ್ರಾಕೃತಿಕ ವಿಕೋಪಗಳನ್ನು ಎದುರಿಸುವ ಪರಿಣಿತಿ ಪಡೆದಿದ್ದಾರೆ. ಮಾತ್ರವಲ್ಲದೆ ಅಪಾಯ ಎದುರಾಗುವ ಸಂದರ್ಭ ಜನ ಜಾನುವಾರು ರಕ್ಷಣೆಗೆ ಅಗತ್ಯವಾಗಿರುವಂತಹ ಸಿಗ್ನಲ್ ಯೂನಿಟ್, ಸ್ಯಾಟ್‌ಲೈಟ್ ಫೋನ್‌ಗಳು, ಲೈಫ್ ಜಾಕೆಟ್‌ಗಳು, ಮೋಟಾರ್ ಬೋಟ್‌ಗಳು, ರ್ಯಾಫ್ಟ್‌ಗಳು, ಮರ ಕತ್ತರಿಸುವ ಯಂತ್ರಗಳು, ವಿವಿಧ ಮಾದರಿಯ ಹಗ್ಗಗಳು, ಸರ್ಚ್‌ಲೈಟ್‌ಗಳು, ಕಟ್ಟಡ ಕುಸಿತದ ಸಂದರ್ಭ ಬಳಸುವ ವಿವಿಧ ಬಗೆಯ ಕಟ್ಟರ್‌ಗಳು, ಆಕ್ಸಿಜನ್ ಸಿಲಿಂಡರ್‌ಗಳು, ಸ್ಟ್ರೆಚ್ಚರ್‌ಗಳು, ಜನರೇಟರ್‌ಗಳು, ಜೀವರಕ್ಷಕ ಔಷಧಗಳ ಸಹಿತ ರಕ್ಷಣಾ ಉಪಕರಣ ಗಳನ್ನು ಹೊತ್ತು ತಂದಿದ್ದಾರೆ.

ಈಗಾಗಲೇ 30 ಮಂದಿಯ ತಂಡ ಮಡಿಕೇರಿಗೆ ಆಗಮಿಸಿದ್ದು, ಜಿಲ್ಲಾಡಳಿತ ಜೊತೆಯಲ್ಲಿ ಚರ್ಚೆ ನಡೆಸಲಾಗಿದೆ. ಮಳೆಗಾಲ ಪ್ರವಾಹ, ಭೂಕುಸಿತ ಸಾಧ್ಯತೆ ಇರುವ ಪ್ರದೇಶಗಳಿಗೆ ತೆರಳಿ ಪರಿಶೀಲನೆ ನಡೆಸಲಾಗುತ್ತದೆ. ಮಾತ್ರವಲ್ಲದೆ ಶಾಲಾ ಕಾಲೇಜುಗಳಿಗೆ ತೆರಳಿ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಾಹಿತಿ ನೀಡಲಾಗುತ್ತದೆ ಎಂದು ಟೀಂ ಕಮಾಂಡರ್ ಇನ್ಸ್‌ಪೆಕ್ಟರ್ ರಾಮ್ ಭಜ್ ಸುದ್ದಿಗಾರರಿಗೆ ಹೇಳಿದರು. 2025ರಲ್ಲಿ ಕೇರಳದ ವಯನಾಡುವಿನಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪದ ಸಂದರ್ಭದಲ್ಲೂ ನಮ್ಮ ಈ ತಂಡ ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿತ್ತು. ಎಲ್ಲಾ ರೀತಿಯ ಪರಿಸ್ಥಿತಿ ಮತ್ತು ರಕ್ಷಣಾ ಕ್ರಮಗಳನ್ನು ನಡೆಸಲು ತಂಡ ಸಿದ್ಧವಾಗಿದೆ. ಜೊತೆಯಲ್ಲೇ ಹನಿ ಹೆಸರಿನ ವಿಶೇಷ ತರಬೇತಿ ಪಡೆದ ಶ್ವಾನವನ್ನು ಈ ಬಾರಿ ಕರೆತರಲಾಗಿದೆ. ಜನರು ಮಳೆಗಾಲದ ಕುರಿತು ಭಯಪಡುವ ಅಗತ್ಯವಿಲ್ಲ ಎಂದು ಅವರು ಅಭಯ ನೀಡಿದರು.

**ಎನ್‌ಡಿಆರ್‌ಎಫ್ ತಂಡಕ್ಕೆ ಹನಿ ಸೇರ್ಪಡೆ:** ಇದೇ ಮೊದಲ ಬಾರಿಗೆ ಎನ್‌ಡಿಆರ್‌ಎಫ್ ಯೋಧರ ತಂಡ ಸದಸ್ಯನಾಗಿ ಹನಿ ಎಂಬ ಹೆಸರಿನ ಶ್ವಾನ ಕೂಡ ರಕ್ಷಣಾ ತಂಡದಲ್ಲಿ ಸ್ಥಾನ ಪಡೆದಿದೆ. 8 ವರ್ಷ ಪ್ರಾಯದ ಜರ್ಮನ್ ಶೆಫರ್ಡ್ ತಳಿಯ ಶ್ವಾನವಾಗಿದ್ದು, ಸೇನಾ ನಿಯಮದಂತೆ 9 ವರ್ಷ ಸೇವೆ ಸಲ್ಲಿಸಿ 2027ರಲ್ಲಿ ಸೇನೆಯಿಂದ ನಿವೃತ್ತವಾಗಲಿದೆ. ಕಟ್ಟಡಗಳು ಕುಸಿತವಾದ ವೇಳೆ ಅವಶೇಷಗಳ ಅಡಿಯಲ್ಲಿ ಯಾರಾದರು ಸಿಲುಕಿಕೊಂಡಿದ್ದರೆ, ಅವರ ಇರುವಿಕೆಯನ್ನು ಹೃದಯ ಬಡಿತದ ಮೂಲಕ ಪತ್ತೆ ಹಚ್ಚುವ ವಿಶೇಷ ತರಬೇತಿಯನ್ನು ಈ ಶ್ವಾನ ಪಡೆದಿದೆ. ಹನಿ ಶ್ವಾನದ ಜೊತೆಯಲ್ಲಿ ಇಬ್ಬರು ಹ್ಯಾಂಡ್ಲರ್‌ಗಳು ಕೂಡ ಇದ್ದು, ಶ್ವಾನ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸಲಿದ್ದಾರೆ.

# ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿ ಮೃತದೇಹ ಪತ್ತೆ

- ಮಹಿಳೆ ಕುಟುಂಬದವರಿಂದ ಪತಿಯಿಂದಲೇ ಹತ್ಯೆ ಆರೋಪ
- ತಾಯಿ ಇಲ್ಲದ ತಬ್ಬಲಿಗಳಾದ ಎರಡು ಮಕ್ಕಳು

ಮೈಸೂರು, ಜೂ.8(ಎಂಕೆ)– ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿಯ ಮೃತದೇಹ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

ಮೈಸೂರಿನ ಸರಸ್ವತಿಪುರಂ 7ನೇ ಮುಖ್ಯ ರಸ್ತೆ ನಿವಾಸಿ ಸಂಧ್ಯಾ(30) ಅವರ ಮೃತ ದೇಹ ನೇಣು ಬಿಗಿದ ಸ್ಥಿತಿಯಲ್ಲಿ ಸೋಮವಾರ ಬೆಳಗ್ಗೆ ಪತ್ತೆಯಾಗಿದ್ದು, ಪತಿಯೇ ಕೊಲೆ ಮಾಡಿ ನೇತು ಹಾಕಿದ್ದಾನೆ ಎಂದು ಮೃತ ಮಹಿಳೆಯ ಸಂಬಂಧಿಕರು ಆರೋಪಿಸಿದ್ದಾರೆ.

ಹುಣಸೂರು ಪುರಸಭೆಯ ಮಾಜಿ ಅಧ್ಯಕ್ಷೆ ಗೀತಾ ನಿಂಗರಾಜು ಅವರ ಪುತ್ರಿ ಸಂಧ್ಯಾ ಅವರನ್ನು 2013ರಲ್ಲಿ ಟಿ.ಕೆ.ಲೇಔಟ್‌ನ ಮಹದೇವ್ ಅವರ ಮಗ ಅಕ್ಷಯ್‌ಗೆ ಕೊಟ್ಟು ವಿವಾಹ ಮಾಡಲಾಗಿತ್ತು. ದಂಪತಿಗೆ 5 ಮತ್ತು 3ನೇ ತರಗತಿ ಓದುತ್ತಿರುವ ಇಬ್ಬರು ಮಕ್ಕಳಿದ್ದಾರೆ. ಗಂಡ–ಹೆಂಡತಿ ನಡುವೆ ಪ್ರತಿನಿತ್ಯ ಜಗಳವಾಗುತಿದ್ದು, ಅಕ್ಷಯ್ ಸಂಧ್ಯಾಳನ್ನು ಕೊಲೆ ಮಾಡಿ, ಅದನ್ನು ಆತ್ಮಹತ್ಯೆ ಎಂದು ಬಿಂಬಿಸುವ ಉದ್ದೇಶದಿಂದ ತಾನೇ ನೇಣು ಹಾಕಿದ್ದಾನೆ ಎಂದು ದೂರಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ಎಂ.ಎ.ರವಿಕಿರಣ್, ಪಿಎಸ್‌ಐ ಭವ್ಯ ಹಾಗೂ ಇನ್ನಿತರೆ ಸಿಬ್ಬಂದಿ ಸ್ಥಳ ಮಹಜರು ನಡೆಸಿ, ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕೆ.ಆರ್. ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದರು.

**ಬಿಗುವಿನ ವಾತಾವರಣ:** ಮರಣೋತ್ತರ ಪರೀಕ್ಷೆಗಾಗಿ ಮೃತ ದೇಹ ರವಾನಿಸಲು ಪೊಲೀಸರು ಮುಂದಾಗುತ್ತಿದ್ದಂತೆ ಅಡ್ಡಗಟ್ಟಿದ ಸಂಧ್ಯಾ ಸಂಬಂಧಿಕರು ಹಾಗೂ ಅಕ್ಕ–ಪಕ್ಕದ ನಿವಾಸಿಗಳು, ಸಂಧ್ಯಾ ಪತಿ ಅಕ್ಷಯ್‌ನನ್ನು ಕೂಡಲೇ ಬಂಧಿಸಬೇಕು. ಆತನೇ



ಮೃತಪಟ್ಟ ಸಂಧ್ಯಾ

> "ಯಾವ ಹಳ್ಳಿ ಹೆಣ್ಣು ಮಕ್ಕಳನ್ನು ಸಿಟಿಗೆ ಮದುವೆ ಮಾಡಿಕೊಡಬೇಡಿ. ಇಲ್ಲಿ ಅವರನ್ನು ಬಾಳಿಸಲ್ಲ. ರೈತರ ಮಕ್ಕಳಾದರೂ ಸರಿ ಹಳ್ಳಿಗೆ ಮದುವೆ ಮಾಡಿಕೊಡಿ. ಅವರು ಚೆನ್ನಾಗಿ ಸಾಕಿಕೊಂಡು ಹೋಗುತ್ತಾರೆ.
> –ನಿಂಗರಾಜು, ಮೃತೆ ತಂದೆ

ಕೊಲೆ ಮಾಡಿ ಪರಾರಿಯಾಗಿದ್ದಾನೆ. ಆತನನ್ನು ಬಂಧಿಸುವವರೆಗೂ ಮೃತ ದೇಹ ರವಾನಿಸಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಇದರಿಂದ ಕೆಲಕಾಲ ಸ್ಥಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು. ಬಳಿಕ ಇನ್ಸ್‌ಪೆಕ್ಟರ್ ರವಿಕಿರಣ್, ಸಂಧ್ಯಾ ಸಂಬಂಧಿಕರು ಹಾಗೂ ನೆರೆಹೊರೆ ನಿವಾಸಿಗಳನ್ನು ಸಮಾಧಾನ ಪಡಿಸಿ, ಕಾನೂನು ರೀತ್ಯ ಕ್ರಮ ಜರುಗಿಸಲು ಅವಕಾಶ ಮಾಡಿಕೊಡಬೇಕು. ಪ್ರಕರಣದ ತನಿಖೆ ನಡೆಸಲು ಅನುವು ಮಾಡಿಕೊಡಬೇಕು ಎಂದು ಕೋರಿದ ಬಳಿಕ ಮೃತ ದೇಹವನ್ನು ರವಾನಿಸಲಾಯಿತು. ಈ ಸಂಬಂಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಚಾಮುಂಡಿಬೆಟ್ಟ ತಪ್ಪಲಿನ ತಿಪ್ಪಯ್ಯನ ಕೆರೆ ಸಂರಕ್ಷಣೆಗೆ ಶೀಘ್ರವೇ ಕ್ರಮ

- ಸಂಸದ ಯದುವೀರ್ ಒಡೆಯರ್ ಭರವಸೆ
- ಸ್ಥಳ ಪರಿಶೀಲನೆ; ಸ್ಥಳೀಯರಿಂದ ಮನವಿ ಸ್ವೀಕಾರ





ಮೈಸೂರಿನ ಪೊಲೀಸ್ ಬಡಾವಣೆ ಬಳಿಯಿರುವ ತಿಪ್ಪಯ್ಯನಕೆರೆಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೋಮವಾರ ಭೇಟಿ ನೀಡಿ ಸ್ಥಳೀಯರಿಂದ ಸಮಸ್ಯೆ ಆಲಿಸಿದರು. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ ಹಾಗೂ ಬಡಾವಣೆಯ ನಿವಾಸಿಗಳು ಉಪಸ್ಥಿತರಿದ್ದರು. ಕಲುಷಿತ ನೀರು ಸೇರಿದ್ದರಿಂದ ತೇಲುಕಳೆಯೊಂದಿಗೆ ಜೀವಕಳೆ ಕಳೆದುಕೊಂಡಿರುವ ತಿಪ್ಪಯ್ಯನಕೆರೆ.

ಮೈಸೂರು,ಜೂ.8(ಎಂಟಿವೈ)–ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ತಿಪ್ಪಯ್ಯನ ಕೆರೆಗೆ ಒಳಚರಂಡಿ ನೀರು ಸೇರಿ ಕಲುಷಿತಗೊಳ್ಳುತ್ತಿರುವುದಕ್ಕೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬೇಸರ ವ್ಯಕ್ತಪಡಿಸಿದ್ದು, ಶೀಘ್ರದಲ್ಲೇ ಕೆರೆ ಸಂರಕ್ಷಣೆಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಮೈಸೂರಿನ ಪೊಲೀಸ್ ಬಡಾವಣೆಗೆ ಹೊಂದಿಕೊಂಡಿರುವ ಐತಿಹಾಸಿಕ ತಿಪ್ಪಯ್ಯನ ಕೆರೆ ಸಂರಕ್ಷಣೆ ಕುರಿತಂತೆ ಸ್ಥಳೀಯರು ಹಾಗೂ ಪರಿಸರವಾದಿಗಳು ಆಗ್ರಹಿಸಿದ ಹಿನ್ನೆಲೆಯಲ್ಲಿ ಕೆರೆ ಪರಿಸ್ಥಿತಿ ಪರಿಶೀಲಿಸಲು ಆಗಮಿಸಿದ್ದ ಸಂಸದ ಯದುವೀರ್ ಒಡೆಯರ್ ಅವರು ಸ್ಥಳೀಯರಿಂದ ಮಾಹಿತಿ ಪಡೆದು ಕೆರೆ ಮಲಿನಗೊಳ್ಳುತ್ತಿರುವುದನ್ನು ಪರಿಶೀಲಿಸಿದರು.

ರಿಂಗ್ ರಸ್ತೆಗೆ ಹೊಂದಿಕೊಂಡಿರುವ ತಿಪ್ಪಯ್ಯನ ಕೆರೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿದೆ. ಸುತ್ತ ಮುತ್ತಲಿನ ಬಡಾವಣೆಯ ನಿರ್ಮಾಣದ ವೇಳೆ ಒಳಚರಂಡಿಯ ಅವೈಜ್ಞಾನಿಕ ಕಾಮಗಾರಿ ಹಾಗೂ ಸೆಪ್ಟಿಕ್ ಟ್ಯಾಂಕ್‌ನಿಂದಾಗಿ ಇಂದು ಇಡೀ ಕೆರೆ ಮಲಿನಗೊಂಡಿರುವುದರ ಬಗ್ಗೆ ಮಾಹಿತಿ ಪಡೆದರು.

## ಜೀವಕಳೆ ಕಳೆದ ತೇಲುಕಳೆ

ರಂದೀಪ್ ಜಿಲ್ಲಾಧಿಕಾರಿಯಾಗಿದ್ದಾಗ 2016–17ರಲ್ಲಿ ಆಟೋಮೋಟೀವ್ ಆಕ್ಸೆಲ್ ಕಾರ್ಖಾನೆಯ ಸಿಎಸ್‌ಆರ್ ಅನುದಾನದಿಂದ ಕೆರೆಗೆ ಕಾಯಕಲ್ಪ ನೀಡಿತ್ತು. ಹೂಳು ತೆಗೆದು ಏರಿ ಮರು ನಿರ್ಮಿಸಲಾಗಿತ್ತು. 2018ರ ಏಪ್ರಿಲ್‌ನಲ್ಲಿ ಕೆರೆ ನಿರ್ವಹಣೆಯನ್ನು ಜಿಲ್ಲಾಡಳಿತ ಮೃಗಾಲಯ ಪ್ರಾಧಿಕಾರಕ್ಕೆ ಹಸ್ತಾಂತರಿಸಿತ್ತು. ಅರಣ್ಯೀಕರಣ ಹುಲ್ಲುಗಾವಲು ನಿರ್ಮಾಣವಾಗಿ ಸೌಂದರ್ಯವೂ ಇಮ್ಮಡಿಸಿತ್ತು. 2022ರಲ್ಲಿ ಎಸ್‌ಟಿಪಿ ಟ್ಯಾಂಕ್‌ಗಳನ್ನು ನಿರ್ಮಿಸಿ ಕೊಳಚೆ ನೀರು ಬರದಿರಲು ಕ್ರಮವಹಿಸುವುದಾಗಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಹೇಳಿತ್ತು. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ.

ಅಲ್ಲದೆ, ಕೆರೆ ಸಂರಕ್ಷಣೆ ಕುರಿತು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ಮೂರು ವರ್ಷದ ಹಿಂದೆ ತಿಳಿನೀರಿನಿಂದ ಹೊಳೆಯುತ್ತಿದ್ದ ತಿಪ್ಪಯ್ಯನ ಕೆರೆಯನ್ನು ಕತ್ತೆ ಕಿವಿ ಎಂಬ ತೇಲುಕಳೆ ಆವರಿಸಿದೆ. ಇದರಿಂದ ಜಲಚರಗಳು

## ಜಲಚರಗಳೇ ನಾಪತ್ತೆ

400 ವರ್ಷಗಳ ಹಿಂದೆ ಚಾಮುಂಡಿ ಬೆಟ್ಟ ದಿಂದ ಹರಿದು ಬರುವ ನೀರನ್ನು ಹಿಡಿದಿಡಲು ಬೆಟ್ಟದ 4 ಕಡೆಯೂ ಒಂದೊಂದು ಕೆರೆಯನ್ನು ನಿರ್ಮಿಸಲಾಗಿತ್ತು. ತಿಪ್ಪಾರಾಯ ಎಂಬ ಸೇನಾ ದಂಡನಾಯಕ ತನ್ನ ಕುದುರೆಗಳಿಗೆ ಇಲ್ಲಿ ನೀರು ಕುಡಿಸುತ್ತಿದ್ದುದರಿಂದ ಹಾಗೂ ಅವನೇ ಈ ಕೆರೆ ನಿರ್ವಹಣೆ ಮಾಡಿದ್ದರಿಂದ ಅವನ ಹೆಸರಿ ನಿಂದಲೇ ಕರೆಯಲಾಗುತ್ತಿದೆ. ತಿಪ್ಪಾರಾಯನ ಕೆರೆ, ತಿಪ್ಪಯ್ಯನ ಕೆರೆ ಆಗಿದೆ.

ಉಸಿರುಗಟ್ಟಿ ಸತ್ತರೆ, ಬಾನಾಡಿಗಳು ಕಾಣದಾಗಿವೆ. ಕೆರೆಯತ್ತ ವಿಹಾರಕ್ಕೆ ಬರಬೇಕೆನ್ನುವವರು, ಕೆರೆ ಹತ್ತಿರದಲ್ಲೇ ನಿವೇಶನ ಖರೀದಿಸಿ ಮನೆ ಕಟ್ಟಿಸಿದವರ ಪಾಲಿಗೆ ಇದೀಗ ಮಲಿನಗೊಂಡಿರುವ ಕೆರೆ ವಾತಾವರಣದಿಂದ ತೊಂದರೆಯಾಗುತ್ತಿದೆ. ಹಂದಿ, ಸೊಳ್ಳೆ ಕಾಟ ಹೆಚ್ಚಾಗಿದೆ. ಕೆರೆಗೆ ನೇರವಾಗಿ ಒಳಚರಂಡಿ ನೀರು ಸೇರುತ್ತಿದೆ. ಮಳೆ ಬಂದು ಕೆರೆಯ ನೀರಿನ ಮಟ್ಟ ಏರಿದರೂ ನೀರು ತಿಳಿಯಾಗಿಲ್ಲ. 'ಸಾತಿ ಕೆರೆ'ಗೆ ಸಂಪರ್ಕಿಸಿರುವ ರಾಜಕಾಲುವೆಯಲ್ಲಿ ಚರಂಡಿ ನೀರು

## ಕೆರೆಯ ಚಿತ್ರಣ

ಲಲಿತಾದ್ರಿಪುರ ಗ್ರಾಮದ ಸರ್ವೆ ಸಂಖ್ಯೆ 31ರಲ್ಲಿ 6.17 ಎಕರೆ ಹಾಗೂ 30ರಲ್ಲಿ 9.01 ಎಕರೆ ವಿಸ್ತೀರ್ಣವನ್ನು ಹೊಂದಿರುವ ಕೆರೆ, ರಿಂಗ್ ರಸ್ತೆಯ ಪಕ್ಕದಲ್ಲೇ ಇದೆ. ಗಿರಿದರ್ಶಿನಿ ಬಡಾವಣೆ, ಪೊಲೀಸ್ ಬಡಾವಣೆ, ಆಲನಹಳ್ಳಿಯ ಒಳಚರಂಡಿ ನೀರು ರಾಜ ಕಾಲುವೆಯ ಮೂಲಕ ಕೆರೆಯ ಒಡಲು ಸೇರುತ್ತಿದೆ. ಮೈಸೂರಿನ ಪೂರ್ವ ಭಾಗದ ಬಡಾವಣೆಗಳ ಚರಂಡಿ ನೀರನ್ನು ಸಂಸ್ಕರಿಸುವ ಘಟಕ ಸ್ಥಾಪಿಸಬೇಕಾಗಿದೆ. ಸಮನ್ವಯದ ಕೊರತೆಯಿಂದ ಕೆರೆಗಳು ಮಲಿನಗೊಳ್ಳುತ್ತಿವೆ.

ಹರಿಯುತ್ತಿದೆ. ಆ ಕೆರೆಯ ರಕ್ಷಣೆಯೂ ಆಗಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತಕುಮಾರ್‌ಗೌಡ, ಸ್ಥಳೀಯರಾದ ಥಾಮಸ್, ಶಿವಕುಮಾರ್, ಶ್ರೀಲಕ್ಷ್ಮಿ, ಭೋಜಪ್ಪ, ಮಹೇಶ್, ಮಹಾದೇವಪ್ಪ, ಸಿದ್ದರಾಮಪ್ಪ, ಹೊನ್ನಪ್ಪ ಸೇರಿದಂತೆ ನೂರಾರು ಮಂದಿ ಹಾಜರಿದ್ದರು.

# ಭೋಗ್ಯಕ್ಕೆ ಹಾಕಿದ್ದ ಜಮೀನು ಮಾರಿ ವಂಚನೆ : ಆರೋಪ

ಮೈಸೂರು,ಜೂ.8–ಭೋಗ್ಯ ಮಾಡಿದ್ದ ಒಟ್ಟು ಕುಟುಂಬದ ಜಮೀನನ್ನು ಭೋಗ್ಯ ಬಿಡುಗಡೆ ಮಾಡದೆ ಮಾರಾಟ ಮಾಡಿ ತಮಗೆ ಅನ್ಯಾಯ ಮಾಡಲಾಗಿದೆ ಎಂದು ಕುರುಬಾರಹಳ್ಳಿಯ ನಿವಾಸಿ ದಿವಂಗತ ಮರೀಗೌಡರ ಪುತ್ರ ಎಂ.ಸಿದ್ದಲಿಂಗಯ್ಯ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ.

ಮೈಸೂರು ತಾಲೂಕು ಕಸಬಾ ಹೋಬಳಿ, ನಾಡನಹಳ್ಳಿ ಗ್ರಾಮದ ಸ.ನಂ.112, 114 ಮತ್ತು 116ರಲ್ಲಿರುವ 6.17 ಎಕರೆ ಜಮೀನನ್ನು ಮಾರಾಟ ಮಾಡಿ ಅನ್ಯಾಯ ಮಾಡಿದ್ದು, ತಮಗೆ ನ್ಯಾಯ ದೊರಕಿಸಿಕೊಡುವಂತೆ ಅವರು ಕೋರಿದ್ದಾರೆ.

ಸಿದ್ದಲಿಂಗಯ್ಯನವರು ಮೈನರ್ ಆದ ಕಾರಣ ಇವರ ಸಹೋದರರಾದ ಸಿದ್ದಯ್ಯ, ಸಿದ್ದೇಗೌಡ ಮತ್ತು ಹುಚ್ಚಯ್ಯ ಅವರುಗಳು ಸೇರಿಕೊಂಡು ಅಬ್ದುಲ್ ರೆಹಮಾನ್ ಉರುಫ್ ಅಮೀರ್ ಜಾನ್ ಸಾಹೇಬ್ ಅವರಿಗೆ 6.17 ಎಕರೆ ಜಮೀನನ್ನು ಭೋಗ್ಯ ಮಾಡಿದ್ದರು. ಆದರೆ ಬಹಳ ವರ್ಷಗಳ ನಂತರ ಸಿದ್ದಯ್ಯ ಮತ್ತು ಸಿದ್ದೇಗೌಡ ವಯೋಸಹಜ ಖಾಯಿಲೆಯಿಂದ ನಿಧನರಾದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಇದೀಗ ಹುಚ್ಚಯ್ಯನವರು ಜಮೀನನ್ನು ಭೋಗ್ಯದಿಂದ ಬಿಡುಗಡೆ ಮಾಡಿಸದೇ ಎರಡು ಸರ್ವೆ ನಂಬರ್‌ಗಳ ಜಮೀನನ್ನು ಯಾರ ಗಮನಕ್ಕೂ ತಾರದೆ ಮಾರಾಟ ಮಾಡಿದ್ದು, ತಮಗೂ ಸೇರಬೇಕಾದ ಜಾಗ ಕೊಡದೇ ಅನ್ಯಾಯವೆಸಗಿದ್ದಾರೆ ಎಂದು ದೂರಿನಲ್ಲಿ ಆಪಾದಿಸಲಾಗಿದೆ.

ಸಂಬಂಧಪಟ್ಟ ಅಧಿಕಾರಿಗಳು 90 ವರ್ಷದವನಾದ ನನ್ನ ಮನವಿಯನ್ನು ಪುರಸ್ಕರಿಸಿ, ಸೂಕ್ತ ತನಿಖೆ ನಡೆಸಿ ತಮಗೆ ನ್ಯಾಯ ದೊರಕಿಸಿಕೊಡುವಂತೆ ಸಿದ್ದಲಿಂಗಯ್ಯ ಅವರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

## ವಿಶ್ವ ಪರಿಸರ ದಿನಾಚರಣೆ...



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಅಭಿಯಾನ ಫೌಂಡೇಶನ್‌ನಿಂದ ಕುವೆಂಪುನಗರ ವಿಶ್ವಮಾನವ ಜೋಡಿ ರಸ್ತೆಯಲ್ಲಿ 20ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಪೋಷಣೆಗಾಗಿ ಟ್ರೀ ಗಾರ್ಡ್ ಅಳವಡಿಸುವ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು. ಈ ವೇಳೆ ರಾಘವೇಂದ್ರ, ಶ್ರೀನಿವಾಸ್, ಸಾಗರ್, ವಿನೋದ್‌ಕುಮಾರ್, ಪ್ರಕಾಶ, ಮಂಜುನಾಥ್, ಆರಾಧ್ಯ, ಜಯಶ್ರೀ, ಶೀತಲ್, ಅರ್ಚನಾ ಇನ್ನಿತರರು ಹಾಜರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

**ಮೈಸೂರು:** ಬೋಗಾದಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಜೂ.9 ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಜನತಾನಗರ, ಬೋಗಾದಿ 2ನೇ ಹಂತ ಉತ್ತರ ಮತ್ತು ದಕ್ಷಿಣ, ಗಂಗೋತ್ರಿ ಕ್ಯಾಂಪಸ್, ಗಂಗೋತ್ರಿ ಕ್ವಾಟ್ರಸ್, ದಾಸನ ಕೊಪ್ಪಲು, ಮರಟಿ ಕ್ಯಾತನಹಳ್ಳಿ, ರೂಪ ನಗರ, ದೀಪಾನಗರ, ಬೋಗಾದಿ, ಪ್ರೀತಿ ಲೇಔಟ್, ಆರ್.ಎಂ.ಪಿ ಲೇಔಟ್, ವಿಜಯ ನಗರ 3ನೇ ಹಂತ, ಹಿನಕಲ್, ವಿಜಯ ನಗರ 4ನೇ ಹಂತ, ವಿಜಯಶ್ರೀಪುರ, ಸುಧಾ ಲೇಔಟ್, ರೈಲ್ವೆ ಲೇಔಟ್, ಎಸ್.ಬಿ.ಎಂ ಲೇಔಟ್, ವಾಗ್ದೇವಿನಗರ, ಸಿ.ಎಫ್.ಟಿ.ಆರ್.ಐ ಲೇಔಟ್, ಯುನಿವರ್ಸಿಟಿ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

## ಶುಭ ಹಾರೈಕೆ...



ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷರಾದ ಮೈಸೂರಿನ ಆರ್.ರಘು ಕೌಟಿಲ್ಯ ವಿಧಾನ ಪರಿಷತ್ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ಮುನ್ನ ಅವರಿಗೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಿಹಿ ತಿನ್ನಿಸಿ, ಶುಭ ಹಾರೈಸಿದರು. ಈ ವೇಳೆ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಎಂಎಲ್ಸಿ ಎನ್.ರವಿಕುಮಾರ್ ಮತ್ತಿತರರಿದ್ದರು

# ಆದರ್ಶ ವಿದ್ಯಾಲಯಗಳಲ್ಲಿ ಪ್ರವೇಶ ಪರೀಕ್ಷೆಗಾಗಿ ಅರ್ಜಿ ಆಹ್ವಾನ

ಮೈಸೂರು,ಜೂ.8– 2026–27 ನೇ ಸಾಲಿನ ಆದರ್ಶ ವಿದ್ಯಾಲಯಗಳಲ್ಲಿ 7, 8 ಮತ್ತು 9ನೇ ತರಗತಿಯಲ್ಲಿ ಖಾಲಿ ಇರುವ ಸೀಟುಗಳಿಗೆ ಭರ್ತಿಗಾಗಿ ಜೂನ್ 8ರಿಂದ 20ವರೆಗೆ ಜಿಲ್ಲೆಯ ಆರು ಆದರ್ಶ ವಿದ್ಯಾಲಯಗಳಲ್ಲಿ ಪ್ರವೇಶ ಪರೀಕ್ಷೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆದರ್ಶ ವಿದ್ಯಾಲಯ ಹೆಚ್.ಡಿ.ಕೋಟೆ ತಾಲೂಕು ರವೀಂದ್ರ ಬಾಬು ದೂ.ಸಂ:9902377356, ಆದರ್ಶ ವಿದ್ಯಾಲಯ ಹುಣಸೂರು ತಾಲೂಕು ಚಂದ್ರಕುಮಾರ್ ದೂ.ಸಂ: 7892118767, ಆದರ್ಶ ವಿದ್ಯಾಲಯ ಕೆ.ಆರ್.ನಗರ ತಾಲೂಕು ರುಕ್ಮಿಣಿ ದೂ.ಸಂ: 998002884, ಆದರ್ಶ ವಿದ್ಯಾಲಯ ಜಾಕಿ ಕ್ವಾಟ್ರಸ್ ಸರ್ಕಲ್ ಮೈಸೂರು ನಗರ ಬೋರರಾಜು ದೂ.ಸಂ: 8497847517, ಆದರ್ಶ ವಿದ್ಯಾಲಯ ನಂಜನಗೂಡು ತಾಲೂಕು ಸುಮಾ ದೂ.ಸಂ: 948272226, ಆದರ್ಶ ವಿದ್ಯಾಲಯ ಟಿ.ನರಸೀಪುರ ತಾಲೂಕು ಮಂಜಣ್ಣ ದೂ.ಸಂ: 9900163242 ಮುಖ್ಯ ಶಿಕ್ಷಕರನ್ನು ಸಂಪರ್ಕಿಸಬಹುದೆಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮನುಷ್ಯ–ದೇವರ ಸಂಬಂಧ ಅರಿಯುವುದೇ ಜ್ಞಾನ

## ಕಲ್ಕತ್ತಾದ ಪ್ರೆಸಿಡೆನ್ಸಿ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ನಿರ್ಮಲ್ಯ ನಾರಾಯಣ್ ಚಕ್ರವರ್ತಿ ಅಭಿಮತ

ಮೈಸೂರು,ಜೂ.8(ಎಂಕೆ)–ಮನುಷ್ಯ ಮತ್ತು ದೇವರ ನಡುವಿನ ಸಂಬಂಧ ಅರಿಯುವುದೇ ಜ್ಞಾನ ಎಂದು ಕಲ್ಕತ್ತಾದ ಪ್ರೆಸಿಡೆನ್ಸಿ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ನಿರ್ಮಲ್ಯ ನಾರಾಯಣ್ ಚಕ್ರವರ್ತಿ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ತತ್ವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ವತಿಯಿಂದ ಆಯೋಸಿಜಿರುವ 'ಶ್ರೀಮಧ್ವ ಮತ್ತು ಶ್ರೀಚೈತನ್ಯ ವೈಷ್ಣವ ಚಳವಳಿಗೆ ಶಕ್ತಿ ತುಂಬಿದ ಅದ್ಭುತ ಪ್ರವರ್ತಕರು' ಕುರಿತ ಮೂರು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯ ಮತ್ತು ದೇವರ ಸಂಬಂಧವನ್ನು ದಾರ್ಶನಿಕರು ನಾನಾ ವಿಧದಲ್ಲಿ ವಿವರಿಸಿದ್ದು, ಇದನ್ನು ಸೂಕ್ತವಾಗಿ ಅರಿಯುವುದೇ ಜ್ಞಾನ ಎಂದು ತಿಳಿಸಿದರು.

ಜೀವಾತ್ಮ ಮತ್ತು ಪರಮಾತ್ಮ ನಡುವಿನ ವ್ಯತ್ಯಾಸ ಮತ್ತು ಸಂಬಂಧವು ಭಾರತೀಯ ತತ್ತ್ವಶಾಸ್ತ್ರ ಮತ್ತು ಆಧ್ಯಾತ್ಮಿಕತೆಯ ಅತ್ಯಂತ ಪ್ರಮುಖ ಪರಿಕಲ್ಪನೆಗಳಾಗಿದ್ದು, ಈ ಎರಡರ ಬಗ್ಗೆಯೂ ಸಿದ್ಧಾಂತವಿದೆ. ಚೈತನ್ಯರು ಗೌಡೀಯ ವೈಷ್ಣವ ಪಂಥವು ಜೀವ ಮತ್ತು ಪರಮಾತ್ಮನ ಸಂಬಂಧವನ್ನು ಭಕ್ತಿ ಮಾರ್ಗದಲ್ಲಿ ಶೋಧಿಸುತ್ತದೆ. ಇಲ್ಲಿ ಬ್ರಹ್ಮನೇ ಕೃಷ್ಣ, ಪ್ರಪಂಚವೇ ದೇವರ ಮಾಯೆಯ ಸೃಷ್ಟಿ ಮತ್ತು ಅದು ಸತ್ಯವೂ ಹೌದು ಎಂದು ಪ್ರತಿಪಾದಿಸುತ್ತದೆ. ಈ ಲೀಲೆಯನ್ನು ಅರಿಯುವುದೇ ದೇವರ ಸ್ವರೂಪ ತಿಳಿಯುವ ಮಾರ್ಗ. ಎಂದು ಅವರು ವಿವರಿಸಿದರು.

ಬೆಂಗಳೂರಿನ ಪೂರ್ಣಪ್ರಜ್ಞಾ ಸಂಶೋಧನಾ ಮಂದಿರ ನಿರ್ದೇಶಕ ಪ್ರೊ.ವೀರನಾರಾಯಣ ಪಾಂಡುರಂಗಿ, ಕಲ್ಕತ್ತಾದ ಕಲ್ಯಾಣಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ದಿಲೀಪ್‌ಕುಮಾರ್ ಮೊಹಾಂತ, ಭಾರತೀಯ ತತ್ವಶಾಸ್ತ್ರ ಸಂಶೋಧನಾ ಮಂಡಳಿ (ಐಸಿಪಿಆರ್) ಸದಸ್ಯ ಗಿರೀಶ್ ಕುಮಾರ್, ತತ್ವಶಾಸ್ತ್ರ ಅಧ್ಯಯನ – ಸಂಶೋಧನಾ ವಿಭಾಗದ ನಿರ್ದೇಶಕ ಪ್ರೊ.ಎಂ. ಡ್ಯಾನಿಯಲ್, ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ.ಎಸ್. ವೆಂಕಟೇಶ್, ಪ್ರೊ.ವಿ.ಎನ್.ಶೇಷಗಿರಿರಾವ್ ಇದ್ದರು.



'ಶ್ರೀಮಧ್ವ ಮತ್ತು ಶ್ರೀಚೈತನ್ಯ ವೈಷ್ಣವ ಚಳವಳಿಗೆ ಶಕ್ತಿ ತುಂಬಿದ ಅದ್ಭುತ ಪ್ರವರ್ತಕರು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕಲ್ಕತ್ತಾದ ಪ್ರೆಸಿಡೆನ್ಸಿ ವಿವಿ ಕುಲಪತಿ ಪ್ರೊ.ನಿರ್ಮಲ್ಯ ನಾರಾಯಣ್ ಚಕ್ರವರ್ತಿ ಉದ್ಘಾಟಿಸಿದರು.

# ಕೆಂಡಗಣ್ಣ ವಿಶ್ವಕರ್ಮರ ಪರಿಷತ್‌ಗೆ ಆಯ್ಕೆಗೆ ಆಗ್ರಹ

ಮೈಸೂರು,ಜೂ.8(ಎಂಟಿವೈ)–ವಿಶ್ವಕರ್ಮ ಜಾಗೃತಿ ವೇದಿಕೆ ಅಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡುವಂತೆ ವಿಶ್ವಕರ್ಮ ಜಾಗೃತಿ ವೇದಿಕೆ ಪ್ರಧಾನ ಕಾರ್ಯದರ್ಶಿ ಟಿ.ಎ.ಸಿದ್ದರಾಜು ಮನವಿ ಮಾಡಿದ್ದಾರೆ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಂಡಗಣ್ಣ ವಿಶ್ವಕರ್ಮ ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ವಿಶ್ವಕರ್ಮ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಲು ಅವರನ್ನು ಎಂಎಲ್ಸಿ ಮಾಡಬೇಕು. ಕಾಂಗ್ರೆಸ್ ವಿರುದ್ಧ ಟೀಕೆ ಮಾಡಿದವರಿಗೆ ತಕ್ಕ ಉತ್ತರ ನೀಡುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಎಂಎಲ್ಸಿ ಮಾಡಬೇಕು. ತಪ್ಪಿದಲ್ಲಿ ಯಾವುದಾದರೊಂದು ನಿಗಮ, ಮಂಡಳಿಗೆ ಅಧ್ಯಕ್ಷರನ್ನಾಗಿ ನೇಮಿಸಬೇಕು ಎಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಸತೀಶ್, ಮಹಾಂತೇಶ್ ಬಡಿಗೇರ್, ಮೂರ್ತಿ, ಮಂಜು, ಸಿದ್ದೇಶ್, ನಾಗರಾಜು ಇದ್ದರು.

# ದೇಶ - ವಿದೇಶ

## ತಮಿಳುನಾಡು ಸಿಎಂ ವಿರುದ್ಧ ಅವಹೇಳನ: ಯೂಟ್ಯೂಬರ್ ಬಂಧನ

**ಚೆನ್ನೈ:** ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಹಾಗೂ ಕೆಲ ಸಚಿವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಯೂಟ್ಯೂಬರ್‌ನನ್ನು ಚೆನ್ನೈ ಪೊಲೀಸರು ಬಂಧಿಸಿದ್ದಾರೆ.



ಯೂಟ್ಯೂಬರ್ ಮರಿದಾಸ್ ಅವರನ್ನು ಗ್ರೇಟರ್ ಚೆನ್ನೈ ಪೊಲೀಸರು ಬಂಧಿಸಿದ್ದು, ಇವರು ಯೂಟ್ಯೂಬ್ ಚಾನೆಲ್ ಒಂದಕ್ಕೆ ನೀಡಿದ ಸಂದರ್ಶನದಲ್ಲಿ ತಮಿಳುನಾಡು ಸಿಎಂ ವಿಜಯ್, ಕೆಲವು ಸಚಿವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದರು. ರಾಜ್ಯ ಸರ್ಕಾರದ ವಿರುದ್ಧ ನಿರಂತರವಾಗಿ ಆರೋಪ ಮತ್ತು ಟೀಕೆ ಮಾಡುತ್ತಿದ್ದರು ಎನ್ನಲಾಗಿದೆ. ಈ ಸಂಬಂಧ ಚೆನ್ನೈನ ಸೈಬರ್ ಕ್ರೈಮ್ ಪೊಲೀಸರು ಸುಮೋಟೋ ಪ್ರಕರಣ ದಾಖಲಿಸಿಕೊಂಡು, ಮಧುರೈ ನಗರ ಪೊಲೀಸರ ಸಹಾಯದಿಂದ ಸೂರ್ಯನಗರದ ನಿವಾಸದಲ್ಲಿ ಮರಿದಾಸ್ ಅವರನ್ನು ಬಂಧಿಸಿ, ಚೆನ್ನೈನಲ್ಲಿ ಹೆಚ್ಚಿನ ವಿಚಾರಣೆ ನಡೆಸಿದ್ದಾರೆ.

ಈ ಹಿಂದೆ ಡಿಎಂಕೆ ಅಧಿಕಾರವಧಿಯಲ್ಲೂ ತಮ್ಮ ರಾಜಕೀಯ ಹೇಳಿಕೆಗಳಿಂದ ವಿವಾದಕ್ಕೆ ಗುರಿಯಾಗಿದ್ದು, ಹಲವಾರು ಪ್ರಕರಣಗಳು ದಾಖಲಾಗಿವೆ. ಸಾಮಾಜಿಕ ಮಾಧ್ಯಮಗಳಲ್ಲಿ ಅಪಾರ ಸಂಖ್ಯೆಯ ಫಾಲೋವರ್ಸ್ ಹೊಂದಿದ್ದು, ಇವರ ಬಂಧನಕ್ಕೆ ಬಿಜೆಪಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

## ಟೇಕ್ ಆಫ್ ಆದ ವಿಮಾನ ಕೆಲವೇ ಕ್ಷಣದಲ್ಲಿ ಬೆಂಕಿಗಾಹುತಿ; ಇಬ್ಬರು ಸಾವು

**ಸ್ಯಾಂಟೋ ಡೊಮಿಂಗೊ:** ಭಾನುವಾರ ಸಂಜೆ ಡೊಮಿನಿಕನ್ ರಿಪಬ್ಲಿಕ್‌ನಲ್ಲಿ ಟೇಕ್ ಆಫ್ ಆದ ಕೆಲವೇ ಕ್ಷಣಗಳಲ್ಲಿ



ಖಾಸಗಿ ಜೆಟ್‌ವೊಂದು ಪತನಗೊಂಡಿದೆ. ಅಪಘಾತದಲ್ಲಿ ಪೈಲಟ್‌ಗಳಾದ ಎರಿಕ್ ಜೇವಿಯರ್ ಡಿಯಾಗೋ ಮತ್ತು ರೂಡಿ ಗಜಲ್ ಸಾವನ್ನಪ್ಪಿದ್ದಾರೆ. ವಿಮಾನ ಹೊತ್ತಿ ಉರಿಯುವ ಬೆಚ್ಚಿಬೀಳಿಸುವ ವೀಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಪೈಲಟ್ ಹೊರತಾಗಿ ವಿಮಾನದಲ್ಲಿ ಯಾವುದೇ ಪ್ರಯಾಣಿಕರಿರಲಿಲ್ಲ ಎಂದು ತಿಳಿದುಬಂದಿದೆ.

ಈ ವಿಮಾನ ಲಾ ರೊಮಾನಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣ(ಎಲ್‌ಆರ್‌ಎಂ)ದಿಂದ ಟೆಕ್ಸಾಸ್‌ನ ಆಸ್ಟಿನ್‌ಗೆ ಹೊರಟಿತ್ತು. ಆದರೆ ಟೇಕ್ ಆಫ್ ಆದ ನಂತರ ತುರ್ತು ಪರಿಸ್ಥಿತಿಯನ್ನು ಘೋಷಿಸಿತು. ಸಿಬ್ಬಂದಿ ಎಲ್‌ಆರ್‌ಎಂಗೆ ಹಿಂತಿರುಗಲು ಪ್ರಯತ್ನಿಸಿದರು, ಆದರೆ ಜೆಟ್ ರನ್‌ವೇ 29ರಲ್ಲಿ ತೀವ್ರವಾಗಿ ಸ್ಪರ್ಶಿಸಿ, ರನ್‌ವೇಯಿಂದ ಹೊರಬಿದ್ದಿದ್ದರಿಂದ ಬೆಂಕಿ ಹೊತ್ತಿಕೊಂಡಿದ್ದರಿಂದ ಇಬ್ಬರು ಪೈಲಟ್‌ಗಳು ಸಾವನ್ನಪ್ಪಿದರು. ಮೇಜರ್ ಲೀಗ್ ಬೇಸ್‌ಬಾಲ್ ಮಾಜಿ ತಾರೆಯೊಬ್ಬರ ಕುಟುಂಬ ಸದಸ್ಯರು ಹಾಗೂ ಸ್ನೇಹಿತರನ್ನು ಕರೆತರಲು ಈ ವಿಮಾನ ಟೆಕ್ಸಾಸ್‌ಗೆ ಹೊರಟಿತ್ತು ಎನ್ನಲಾಗಿದೆ.

## ಸುಫಾರಿ ಕಿಲ್ಲರ್ ಬಬ್ಲು ಎನ್‌ಕೌಂಟರ್

**ಲಕ್ನೋ:** ನಟೋರಿಯಸ್ ಸುಫಾರಿ ಕಿಲ್ಲರ್‌ನನ್ನು ಉತ್ತರ ಪ್ರದೇಶದ ಪೊಲೀಸರು ಎನ್‌ಕೌಂಟರ್ ಮಾಡಿದ್ದಾರೆ.



ಅಯೋಧ್ಯೆಯಲ್ಲಿ ಸ್ಪೆಷಲ್ ಟಾಸ್ಕ್ ಫೋರ್ಸ್ ಪೊಲೀಸರ ತಂಡ ನಡೆಸಿದ ಎನ್‌ಕೌಂಟರ್‌ಗೆ 40ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದ ಸುಪಾರಿ ಕಿಲ್ಲರ್ ಭಾನು ಪ್ರತಾಪ್ ಸಿಂಗ್ ಅಲಿಯಾಸ್ ಬಬ್ಲು ಬಲಿಯಾಗಿದ್ದಾನೆ. ಈ ವೇಳೆ ಇಬ್ಬರೂ ಪೊಲೀಸರು ಗಾಯಗೊಂಡಿದ್ದು, ಅವರನ್ನು ಅಸ್ಪತ್ರೆಗೆ ದಾಖಲಿಸಲಾಗಿದೆ.

ಭಾನುವಾರ ರಾತ್ರಿ ಆರೋಪಿಯು ತನ್ನ ಸಹಚರನೊಂದಿಗೆ ಬೈಕ್‌ನಲ್ಲಿ ಪರಾರಿಯಾಗುತ್ತಿರುವ ಬಗ್ಗೆ ಮಾಹಿತಿ ತಿಳಿಸಿದ ಎಸ್‌ಟಿಎಫ್ ತಂಡ, ತಕ್ಷಣ ಕಾರ್ಯಾಚರಣೆ ಆರಂಭಿಸಿತ್ತು. ಆಮಿಘಾಟ್ ಬಳಿ ಆರೋಪಿಯನ್ನು ತಡೆಯಲು ಮುಂದಾದಾಗ ಆತ ಗುಂಡು ಹಾರಿಸಿದ್ದರಿಂದ ಪೊಲೀಸರು ಪ್ರತಿದಾಳಿ ನಡೆಸಿದ್ದಾರೆ. ಈ ವೇಳೆ ಗುಂಡು ತಗುಲಿ ಗಾಯಗೊಂಡಿದ್ದ ಬಬ್ಲುನನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಆತ ಸಾವನ್ನಪ್ಪಿದ್ದಾನೆ. ಈತನ ಸಹಚರ ಪರಾರಿಯಾಗಿದ್ದಾನೆ. ಭಾನು ಪ್ರತಾಪ್ ಸಿಂಗ್ ಕೊಲೆ, ಸುಲಿಗೆ ಮತ್ತು ಡಕಾಯಿತಿ ಸೇರಿದಂತೆ ಸುಮಾರು 40 ವಿವಿಧ ಕ್ರಿಮಿನಲ್ ಅಪರಾಧ ಪ್ರಕರಣಗಳನ್ನು ಎದುರಿಸುತ್ತಿದ್ದ. ನ್ಯಾಯಾಲಯಕ್ಕೆ ಹಾಜರಾಗದೆ ತಲೆ ಮರೆಸಿಕೊಂಡಿದ್ದ ಈತನಿಗಾಗಿ ಪೊಲೀಸರು ತೀವ್ರ ಹುಡುಕಾಟ ನಡೆಸುತ್ತಿದ್ದರು. ಈತನ ತಲೆಗೆ 1.65 ಲಕ್ಷ ರೂ. ಬಹುಮಾನವನ್ನೂ ಘೋಷಿಸಲಾಗಿತ್ತು.

## ಭಾರತೀಯರೇ, ತಕ್ಷಣ ಇರಾನ್ ಬಿಟ್ಟು ಹೊರಡಿ!

**ಇರಾನ್:** ಪಶ್ಚಿಮ ಏಷ್ಯಾ ಕದನ ವಿರಾಮದ ಮಾತುಕತೆಗಳು ತೀವ್ರವಾಗಿ ಕ್ಷೀಣಿಸುವುದರ ಜೊತೆಗೆ ಇರಾನ್ ಮತ್ತು ಇಸ್ರೇಲ್ ಪರಸ್ಪರ ದಾಳಿ ಮುಂದುವರೆಸಿರುವ ಹಿನ್ನೆಲೆಯಲ್ಲಿ ಟೆಹ್ರಾನ್‌ನಲ್ಲಿರುವ ಭಾರ



ತೀಯ ರಾಯಭಾರಿ ಕಚೇರಿಯು ಹೊಸ ಮತ್ತು ತುರ್ತು ಪ್ರಯಾಣ ಸಲಹೆಗಳನ್ನು ಇಂದು ಹೊರಡಿಸಿದೆ.

ಇಲ್ಲಿನ ಪರಿಸ್ಥಿತಿ ವಿಷಮವಾಗಿದ್ದು, ಯಾವ ಕ್ಷಣದಲ್ಲಿ, ಏನಾದರೂ ಸಂಭವಿಸಬಹುದು. ಹೀಗಾಗಿ, ಭಾರತೀಯ ನಾಗರಿಕರು ಇರಾನ್ ದೇಶಕ್ಕೆ ಪ್ರಯಾಣಿಸುವುದನ್ನು ನಿಲ್ಲಿಸಬೇಕು. ಸದ್ಯ ಇಲ್ಲಿವವರು ತಕ್ಷಣವೇ ದೇಶವನ್ನು ತೊರೆಯಬೇಕು ಎಂದು ಸೂಚನೆ ನೀಡಿದೆ. ಕಳೆದ 24 ಗಂಟೆಗಳಲ್ಲಿ ನಡೆದಿರುವ ಭಾರಿ ಸೇನಾ ಜಮಾವಣೆ, ಪ್ರಮುಖ ನಗರಗಳ ಮೇಲಿನ ವಾಯುದಾಳಿಗಳು ಮತ್ತು ಇಡೀ ಪ್ರದೇಶದಾದ್ಯಂತ ನಡೆದಿರುವ ಕ್ಷಿಪಣಿ ದಾಳಿಗಳ ಬೆನ್ನಲ್ಲೇ ಈ ತುರ್ತು ಆದೇಶ ಹೊರಬಿದ್ದಿದೆ. ಇರಾನ್ ಮೇಲೆ ಅಮೆರಿಕ, ಇಸ್ರೇಲ್ ಪಡೆಗಳ ಜಂಟಿ ದಾಳಿಯು ಇಂದಿಗೆ 100 ದಿನಕ್ಕೆ ಕಾಲಿಟ್ಟಿದ್ದು, ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಮತ್ತಷ್ಟು ತಾರಕಕ್ಕೇರಿದೆ. ಸೋಮವಾರ ಇಸ್ರೇಲ್–ಇರಾನ್ ಪರಸ್ಪರ ಭಾರಿ ದಾಳಿ ನಡೆಸಿವೆ. ಇದು ತಾತ್ಕಾಲಿಕ ಕದನ ವಿರಾಮದ ಉಲ್ಲಂಘನೆ ಮಾತ್ರವಲ್ಲದೆ ಭವಿಷ್ಯದಲ್ಲಿ ಸಂಘರ್ಷ ಭೀಕರವಾಗುವ ಎಚ್ಚರಿಕೆಯಾಗಿದೆ.

## ಬಂಗಾಳದಿಂದ ಬಾಂಗ್ಲಾದೇಶದ 4800 ಅಕ್ರಮ ವಲಸಿಗರ ಗಡಿಪಾರು

**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ನೆಲೆಸಿದ್ದ ಬಾಂಗ್ಲಾದೇಶದ 4,800 ಅಕ್ರಮ ವಲಸಿಗರನ್ನು ಗಡಿಪಾರು ಮಾಡಲಾಗಿದೆ. ಈ ವಿಷಯ ತಿಳಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ, ಭಾರತ–ಬಾಂಗ್ಲಾದೇಶದ ಗಡಿಯಲ್ಲಿ ಸುರಕ್ಷಿತಗೊಳಿಸುವುದು ಮತ್ತು ಅಕ್ರಮ ವಲಸೆಯನ್ನು ತಡೆಗಟ್ಟುವುದು ನಮ್ಮ ಸರ್ಕಾರದ ಪ್ರಮುಖ ಆದ್ಯತೆ ಎಂದಿದ್ದಾರೆ.



ಗಡಿ ಜಿಲ್ಲೆಗಳ ವಸತಿ ಕೇಂದ್ರಗಳಿಂದ ಈಗಾಗಲೇ ಸುಮಾರು 4,800 ಅಕ್ರಮ ವಲಸಿಗರನ್ನು ಬಾಂಗ್ಲಾದೇಶಕ್ಕೆ ಗಡಿಪಾರು ಮಾಡಲಾಗಿದ್ದು, ಇನ್ನುಳಿದ 836 ಜನರ ಸ್ವದೇಶಿ ವಾಪಸಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಗಡಿ ರಕ್ಷಣೆಯನ್ನು ಬಲಪಡಿಸುವ ನಿಟ್ಟಿನಲ್ಲಿ ತಡೆಗೋಡೆ ನಿರ್ಮಾಣ ಬಾಕಿ ಇರುವ 556 ಕಿ.ಮೀ ವ್ಯಾಪ್ತಿಯ ಪೈಕಿ 100 ಕಿ.ಮೀ ಭೂಮಿಯನ್ನು ಈಗಾಗಲೇ ಭದ್ರತಾ ಪಡೆಗೆ ಹಸ್ತಾಂತರಿಸಿದೆ. ಪಾರದರ್ಶಕ ಆಡಳಿತ ತರಲು ಜನಗಣತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಆಗಸ್ಟ್ 1ರಿಂದ 15ರವರೆಗೆ ಮನೆ–ಮನೆ ಸಮೀಕ್ಷೆ ನಡೆಯಲಿದೆ. ಮುಂದಿನ ವರ್ಷದ ಫೆಬ್ರವರಿ ಅಂತ್ಯದ ವೇಳೆಗೆ ಈ ಪ್ರಕ್ರಿಯೆ ಪೂರ್ಣಗೊಂಡು, ಗಡಿ ವಿಂಗಡಣೆ ಕಾರ್ಯ ನಡೆಯಲಿದೆ. ಜೂನ್ 22 ರಂದು ರಾಜ್ಯ ಬಜೆಟ್ ಮಂಡನೆಯಾಗಲಿದ್ದು, ಮುಂದಿನ ವಾರದಿಂದ ರಾಜ್ಯದ ಜನರಿಗಾಗಿ ಕೇವಲ 5 ರೂಪಾಯಿ ಸಬ್ಸಿಡಿ ದರದಲ್ಲಿ ಮೀನು ಊಟದ ಸೌಲಭ್ಯ ಪರಿಚಯಿಸುವುದಾಗಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 9 ಜೂನ್ 2026

# ಕೊಡ್ಲಿಪೇಟೆಯಲ್ಲಿ ಜನಮನ ರಂಜಿಸಿದ ಸಾಂಸ್ಕೃತಿಕ ವೈಭವ

ಮಡಿಕೇರಿ, ಜೂ.8–ಶಿಕ್ಷಣದೊಂದಿಗೆ ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆ ಬೆಳೆಸಿಕೊಂಡು ಸಾಹಿತ್ಯಾಸಕ್ತರಾಗಬೇಕು ಎಂದು ಕೇಂದ್ರ ದಕ್ಷಿಣ ವಲಯ ಸಾಂಸ್ಕೃತಿಕ ನಿರ್ದೇಶಕ ಕೆ.ಕೆ.ಗೋಪಾಲಕೃಷ್ಣ ತಿಳಿಸಿದ್ದಾರೆ.

ಕೇಂದ್ರ ಸಂಸ್ಕೃತಿ ಸಚಿವಾಲಯ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು ಹಾಗೂ ಕುಶಾಲನಗರ ದಕ್ಷಿಣ ಸಿರಿ ಸ್ನೇಹ ಬಳಗದ ವತಿಯಿಂದ ಕೊಡ್ಲಿಪೇಟೆಯ ಎಸ್‌ಜಿಎಸ್ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಎರಡು ದಿನಗಳ ಕಾಲ ನಡೆದ 'ಮಾನ್ಸೂನ್ ಸಾಂಸ್ಕೃತಿಕ ಉತ್ಸವ' ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿ ಸನಾತನ ಸಂಸ್ಕೃತಿ ಹೊಂದಿದ್ದು, ಸಮಾನತೆ, ಭಾತೃತ್ವ, ಏಕತೆ ಹೊಂದಿದೆ. ವಿಶ್ವದಲ್ಲಿಯೇ ಭಾರತೀಯ ಸಂಸ್ಕೃತಿಗೆ ಹೆಚ್ಚಿನ ಸ್ಥಾನಮಾನ ಇದೆ ಎಂದರು.

ತಂಜಾವೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ದಕ್ಷಿಣ ರಾಜ್ಯಗಳಲ್ಲಿ ಆಯಾಯ ಜಿಲ್ಲೆ, ರಾಜ್ಯಕ್ಕೆ ಸಂಬಂಧಿಸಿದಂತೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ.



ಮಾನ್ಸೂನ್ ಸಾಂಸ್ಕೃತಿಕ ಉತ್ಸವದಲ್ಲಿ ಡೊಳ್ಳು ಕುಣಿತದಲ್ಲಿ ತೊಡಗಿರುವ ಕಲಾವಿದರು

ಅದೇ ರೀತಿ ಜಿಲ್ಲೆಯ ಕಲಾವಿದರುಗಳಿಗೆ ಹಾಗೂ ಅಕ್ಕಪಕ್ಕದ ಜಿಲ್ಲೆಯ ಕಲಾವಿದರು ಒಂದೆಡೆ ಸೇರಿ ಎರಡು ದಿನಗಳ ಕಾರ್ಯಕ್ರಮ "ಮಾನ್ಸೂನು ಉತ್ಸವ" ಎಂಬ ಹೆಸರಿನಡಿ ನಡೆಸಲು ಕನ್ನಡ ಸಿರಿ ಸ್ನೇಹಬಳಗ ನಮಗೆ ಸಹಕಾರ ನೀಡುತ್ತಿದೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿದ್ದ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ನಮ್ಮ ವಿದ್ಯಾಸಂಸ್ಥೆಯಲ್ಲಿ ವಿಶೇಷವಾದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುತ್ತಿರುವುದು ಹೆಮ್ಮೆಯ ವಿಷಯ ಎಂದರು. ಸಮಾಜ ಇಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಸ್ವೀಕರಿಸಿ ಯುವಪೀಳಿಗೆಗೆ ಪರಿಚಯಿಸಬೇಕೆಂದರು.

ಕಾರ್ಯಕ್ರಮದ ಸಂಯೋಜಕರಾದ ಕನ್ನಡ ಸಿರಿ ಸ್ನೇಹ ಬಳಗದ ಅಧ್ಯಕ್ಷ ಬಿ.ಎಸ್.ಲೋಕೇಶ್ ಸಾಗರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ರಾಣಿ ಮಾಚಯ್ಯ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ ರವೀಂದ್ರ ಕುಮಾರ್, ಎಸ್.ಜಿ.ವಿದ್ಯಾಸಂಸ್ಥೆಯ ಪ್ರಾಂಶುಪಾಲೆ ತನುಜ, ಕಾರ್ಯದರ್ಶಿ ನಂಜುಂಡ, ಪತ್ರಕರ್ತ ನಾಗರಾಜ, ಕೆ.ಅಶ್ವಥ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕೊಡಗಿನ ಉಮ್ಮತ್ತಾಟ್, ಊರೊಟ್ಟಿಕೊಟ್, ಬಾಲೋಪಾಟ್, ಕಂಸಾಳೆ, ಡೊಳ್ಳು ಕುಣಿತ, ಜೇನು ಕುರುಬ ನೃತ್ಯ, ಜಾನಪದ ಹಾಡುಗಳು, ಜಾನಪದ ನೃತ್ಯ, ಕೋಲಾಟ್, ಮುಂತಾದ ಕಲೆಗಳು ಪ್ರದರ್ಶಿಸಿ ಜನಮನ ರಂಜಿಸುವಲ್ಲಿ ಯಶಸ್ವಿಯಾಯಿತು.

ಶಾಲೆಯ ಕನ್ನಡ ಭಾಷಾ ಶಿಕ್ಷಕ ಚಂದ್ರಶೇಖರ ಸ್ವಾಗತಿಸಿದರು. ಮಣಜೂರು ಮಂಜುನಾಥ್ ನಿರೂಪಿಸಿ, ವಂದಿಸಿದರು.

## ಜನವಸತಿ ಪ್ರದೇಶಕ್ಕೆ ಲಗ್ಗೆ ಇಟ್ಟ 4 ಕಾಡಾನೆ: ವ್ಯಕ್ತಿ ಪಾರು

ಮಡಿಕೇರಿ: ಕೊಡ್ಲಿಪೇಟೆ ಸಮೀಪದ ಬೆಸೂರು ಗ್ರಾಪಂ. ವ್ಯಾಪ್ತಿಯ ಕಟ್ಟೆಪುರ ಗ್ರಾಮದಲ್ಲಿ ಸೋಮವಾರ ಬೆಳಿಗ್ಗೆ 9 ಗಂಟೆಗೆ 4 ಕಾಡಾನೆಗಳು ಗುಂಪಾಗಿ ಜನವಸತಿ ಪ್ರದೇಶಕ್ಕೆ ಲಗ್ಗೆ ಇಟ್ಟಿದೆ.

ಸ್ಥಳೀಯರಾದ ಕೆ.ಟಿ.ಅಪ್ಪಾಜಿ ಗೌಡ ಎಂಬವರು ಕಾಫಿ ತೋಟದಲ್ಲಿ ಕೃಷಿ ಕಾರ್ಯದಲ್ಲಿದ್ದಾಗ ಏಕಾಏಕಿ ಕಾಡಾನೆಗಳು ದಾಳಿ ನಡೆಸಿದ್ದು, ಪವಾಡ ಸದೃಶ ರೀತಿಯಲ್ಲಿ ಓಡಿ ಅನಾಹುತದಿಂದ ಪಾರಾಗಿದ್ದಾರೆ. ಕಾಡಾನೆ ದಾಳಿಯಿಂದ ಸ್ಥಳೀಯ ನಿವಾಸಿಗಳು ಆತಂಕಕ್ಕೊಳಗಾಗಿದ್ದಾರೆ.

ಕಾಡಾನೆಗಳ ಗುಂಪಿನಲ್ಲಿದ್ದ ದೊಡ್ಡ ಗಾತ್ರದ ಆನೆಯೊಂದು ನನ್ನ ಬೆನ್ನಟ್ಟಿ ಬಂತು. ಅಪಾಯ ಅರಿತು ಸ್ಥಳದಿಂದ ಓಡಿ ಪಾರಾಗಿದ್ದಾಗಿ ಹೇಳಿದರು. ಕೂಲಿ ಕಾರ್ಮಿಕರು ಕೆಲಸಕ್ಕೆ ತೆರಳುವ ಸಮಯದಲ್ಲಿ ಆನೆ ದಾಳಿ ಮಾಡಿರುವುದು ಆತಂಕ ಉಂಟು ಮಾಡಿದೆ. ನಮ್ಮ ಭಾಗದಲ್ಲಿ ಆನೆ ದಾಳಿಯಿಂದ ಕೃಷಿ ಬೆಳೆಗಳು, ಕಾಫಿ ಗಿಡಗಳು ನಾಶವಾಗಿವೆ. ಅರಣ್ಯ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಈ ಭಾಗದಲ್ಲಿ ಕಾಣಿಸಿಕೊಂಡಿರುವ ಬೃಹತ್ ಗಾತ್ರದ ಆನೆಯನ್ನು ಸೆರೆ ಹಿಡಿದು ಸ್ಥಳಾಂತರ ಮಾಡಬೇಕೆಂದು ಅಪ್ಪಾಜಿ ಗೌಡ ಆಗ್ರಹಿಸಿದರು.



ಜನವಸತಿ ಪ್ರದೇಶಕ್ಕೆ ಬರುತ್ತಿರುವ ಕಾಡಾನೆ

ಇತ್ತೀಚಿನ ದಿನಗಳಲ್ಲಿ ಜಿಲ್ಲೆಯ ಗಡಿ ಪ್ರದೇಶವಾದ ಈ ಭಾಗದಲ್ಲಿ ಕಾಡಾನೆಗಳು ಕೃಷಿ ಬೆಳೆಗಳನ್ನು ನಾಶ ಮಾಡುತ್ತಿದ್ದು, ರೈತರು ಬೆಳೆಗಾರರಿಗೆ ನಷ್ಟ ಉಂಟಾಗುತ್ತಿದೆ. ಕೆಲ ವರ್ಷಗಳ ಹಿಂದೆ ಈ ಭಾಗದಲ್ಲಿ ಕಾಡಾನೆ ದಾಳಿಯಿಂದ ನಿರಂತರವಾಗಿ ಸಾವು ನೋವು ಸಂಭವಿಸಿವೆ. ಅನಾಹುತ ಘಟಿಸುವ ಮುನ್ನ ಅರಣ್ಯ ಇಲಾಖೆ ತುರ್ತುಕ್ರಮ ತೆಗೆದುಕೊಳ್ಳಬೇಕು. ಇಲಾಖೆ ಮತ್ತು ಶಾಸಕರು ಸರಕಾರದ ಗಮನಕ್ಕೆ ತಂದು ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಕೊಡ್ಲಿಪೇಟೆ ಚೇಂಬರ್ ಆಫ್ ಕಾಮರ್ಸ್ ಸ್ಥಾನೀಯ ಸಮಿತಿ ಗೌರವ ಅಧ್ಯಕ್ಷ ಹೆಚ್.ಸಿ. ಯತೀಶ್ ಕುಮಾರ್ ಆಗ್ರಹಿಸಿದ್ದಾರೆ.

## ಗಿಡ ನೆಟ್ಟು ಪ್ರಕೃತಿಯನ್ನು ಪ್ರೀತಿಸಬೇಕು



ಅರಮೇರಿ ಕಳಂಚೇರಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿದರು.

ವಿರಾಜಪೇಟೆ: ಪ್ರಕೃತಿಯ ಉಳಿವಿಗಾಗಿ ಮಾನವರು ಗಿಡ ಮರವನ್ನು ಬೆಳೆಸುವ ಮೂಲಕ ಪ್ರಕೃತಿಯನ್ನು ಪ್ರೀತಿಸುವಂತಾಗಬೇಕು ಎಂದು ಗೋಣಿಕೊಪ್ಪಲು ಕೃಷ್ಣ ಚೈತನ್ಯ ಹೇಳಿದರು.

ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ ಹೊಂಬೆಳಕು ಮಾಸಿಕ ತತ್ವಚಿಂತನಾಗೋಷ್ಠಿಯಲ್ಲಿ ಪ್ರಕೃತಿಯ ಕೌತುಕಗಳು ಎಂಬ ವಿಷಯದ ಬಗ್ಗೆ ಮಾತನಾಡಿ, ಮಾನವನಿಂದ ಪ್ರಕೃತಿಯ ಮೇಲೆ ನಡೆಯುತ್ತಿರುವ ಕ್ರೌರ್ಯದಿಂದ ಅಗುವ ದುಷ್ಪರಿಣಾಮಗಳಿಂದಾಗಿ ಮಾನವನೇ ಎದುರಿಸುತ್ತಿರುವ ಸಂಕಷ್ಟಗಳು ಅದರಿಂದ ನಮಗೆ ಸಾಧ್ಯವಾದಷ್ಟು ಹೂ ಮತ್ತು ಹಣ್ಣು ಗಿಡಗಳನ್ನು ಬೆಳೆಸಿ ಪ್ರಕೃತಿಗೆ ಕೊಟ್ಟರೆ ಪಕ್ಷಿಗಳಿಗೆ ಅಹಾರವಾಗುತ್ತದೆ ಅದನ್ನು ತಿಂದ ಪಕ್ಷಿಗಳು ಇತರೆಡೆಗಳಲ್ಲಿ ಬೀಜವನ್ನು ಹರಡುತ್ತವೆ ಎಂದರು.

ಉದ್ಘಾಟಿಸಿದ ಪಕ್ಷಿ ತಜ್ಞ,ಡಾ.ಎಸ್.ವಿ. ನರಸಿಂಹನ್ ಮಾತನಾಡಿ, ಪ್ರಕೃತಿ ಶಬ್ದಾಡಂಬರವಿಲ್ಲದೆ ಪಾಠ ಕಲಿಸುವ ಗುರುವಂತೆ, ಪರಿಸರ ನಮಗೆ ಜ್ಞಾನವನ್ನು ಮಾತ್ರವಲ್ಲ ನೀತಿ ಪಾಠವನ್ನೂ ಕಲಿಸುತ್ತದೆ, ಪ್ರಕೃತಿಯನ್ನು ಅರಿತರೆ ನಾವು ದೇವರ ಮನಸ್ಸನ್ನು ಅರಿತಂತೆ, ಪ್ರಕೃತಿಯೇ ದೇವರ ಸೃಷ್ಟಿ. ಪ್ರಕೃತಿಯಲ್ಲಿರುವಂತ ಗರಿಕೆಹುಲ್ಲು ಸೇರಿದಂತೆ ಪ್ರತಿ ವಸ್ತುಗಳು ಮಾನವನ ಉಪಯೋಗಕ್ಕೆ ಬರುತ್ತದೆ ಅದರಿಂದ ಪ್ರಕೃತಿಯನ್ನು ಪ್ರೀತಿಸುವಂತಾಗಬೇಕು ಎಂದರು.

ಅರಮೇರಿ ಕಳಂಚೇರಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಸಾನಿಧ್ಯ ವಹಿಸಿ ಉತ್ತಮ ಪರಿಸರದಲ್ಲಿ ಕೆಡುಕನ್ನು ಮಾಡದೆ ಒಳಿತನ್ನು ಮಾಡುವಂತಾಗಬೇಕು. ಮನುಷ್ಯ ತನ್ನ ಬದುಕಿನಲ್ಲಿ ತನ್ನನ್ನು ತಾನು ತಿಳಿದುಕೊಂಡು ನಿರ್ಮಲವಾದ ಮನಸ್ಸನ್ನು ರೂಢಿಸಿಕೊಳ್ಳುವಂತಾಗಬೇಕು. ಪ್ರಕೃತಿಯ ಬಗ್ಗೆ ಆಂದೋಲನ ವಾಗಬೇಕಾಗಿದೆ ಎಂದರು.

ವೇದಿಕೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಪೊನ್ನಂಪೇಟೆ–ವಿರಾಜಪೇಟೆ ತಾಲೂಕು ಅಧ್ಯಕ್ಷ ಎನ್.ಎಂ. ರಾಜೇಶ್, ನಿರ್ದೇಶಕ ಎಸ್.ಎಲ್.ಮಹದೇವಪ್ಪ ಉಪಸ್ಥಿತರಿದ್ದರು.

## ಡಾ.ಮಂಥರ್ ಗೌಡಗೆ ಸಚಿವ ಸ್ಥಾನ ನೀಡಲು ಆಗ್ರಹ

ಕುಶಾಲನಗರ: ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿರುವ ಮಂಥರ್ ಗೌಡ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಪಕ್ಷದ ಬಲವರ್ಧನೆಗೆ ಹೆಚ್ಚಿನ ಗಮನಹರಿಸಬೇಕೆಂದು ಕಾಂಗ್ರೆಸ್ ಮುಖಂಡರು ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಚಿವ ಸಂಪುಟದ ಎರಡನೇ ಪಟ್ಟಿಯಲ್ಲಿ ಸಚಿವರಾಗಿ ಮಂಥರ್‌ಗೌಡ ನೇಮಕವಾಗಬೇಕು. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪ್ರಬಲ ಅಭ್ಯರ್ಥಿಯನ್ನು ಸೋಲಿಸಿ, ಸಿದ್ದರಾಮಯ್ಯನವರ ಸರ್ಕಾರದಲ್ಲಿ ಕ್ಷೇತ್ರಕ್ಕೆ ಸಾಕಷ್ಟು ಅನುದಾನವನ್ನು ತಂದು ಜನಾನುರಾಗಿಯಾಗಿರುವ ಡಾ. ಮಂಥರ್ ಗೌಡಗೆ ಜಿಲ್ಲೆಯ ಮಂತ್ರಿಯಾಗಿ ಪ್ರಾತಿನಿಧ್ಯ ವಹಿಸಲು ಅವಕಾಶ ಮಾಡಿಕೊಡಬೇಕು ಎಂದು ಕಾಂಗ್ರೆಸ್ ಮುಖಂಡ ಕೆ.ಎಸ್. ಕೃಷ್ಣೇಗೌಡ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.




ಮಂಥರ್ ಗೌಡಗೆ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಮುಖಂಡರು ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡ ಲೋಕೇಶ್ ಟಿ.ಜಿ. ಮಾತನಾಡಿ, ಯುವಕರು ಉತ್ತಮ ಸಂಘಟಕರು ಆಗಿರುವ ಮಂಥರ್ ಗೌಡ ಅವರು ಕ್ಷೇತ್ರದ ಉದ್ದಗಲಕ್ಕೆ ಓಡಾಡಿ ಉತ್ತಮ ಕೆಲಸಗಳನ್ನು ಮಾಡುತ್ತಿದ್ದು, ಪಕ್ಷದ ಬಲವರ್ಧನೆಗೆ ಮಂತ್ರಿಸ್ಥಾನ ನೀಡಿ ಸಹಕರಿಸಬೇಕು ಎಂದರು. ತಾಪಂ ಮಾಜಿ ಉಪಾಧ್ಯಕ್ಷ ಟಿ.ಕೆ. ಪಾಂಡುರಂಗ ಮಾತನಾಡಿ, ಜಿಲ್ಲೆಗೆ ಸಚಿವ ಸ್ಥಾನ ನೀಡಲು ವರಿಷ್ಠರು ಗಮನ ಹರಿಸಬೇಕು. ಮಂಥರ್‌ಗೌಡರಿಗೆ ಸಚಿವ ಸ್ಥಾನ ಸಿಗಬೇಕು ಎಂಬುದು ಕ್ಷೇತ್ರದ ಬಹುಸಂಖ್ಯಾತ ಕಾರ್ಯಕರ್ತರ, ಸಾರ್ವಜನಿಕ ಪಕ್ಷಾತೀತರ ಅಭಿಪ್ರಾಯವಾಗಿದೆ ಎಂದರು. ಮುಖಂಡರಾದ ಎಚ್.ಸಿ.ಮೂರ್ತಿ, ಮೋಹನ್ ಕುಮಾರ್, ಟಿ.ಎ. ರವಿಚಂದ್ರ ಮತ್ತು ಟಿ.ಜಿ. ಸಂಜೀವ್‌ಮೂರ್ತಿ ಉಪಸ್ಥಿತರಿದ್ದರು.

## ಮಾರುತಿ ವ್ಯಾನ್–ಸ್ಕೂಟಿ ಡಿಕ್ಕಿ: ಸವಾರ ಸಾವು

ವಿರಾಜಪೇಟೆ: ಸ್ಕೂಟರ್ ಮತ್ತು ಮಾರುತಿ ವ್ಯಾನ್ ನಡುವೆ ಸಂಭವಿಸಿದ ಅಪಘಾತದಲ್ಲಿ ಸ್ಕೂಟರ್ ಸವಾರ ಅಸು ನೀಗಿರುವ ಘಟನೆ ನಿನ್ನೆ ರಾತ್ರಿ ಸಂಭವಿಸಿದೆ.



ಬಿಳುಗುಂದ ಗ್ರಾಮದ ನಿವಾಸಿ ವಾಸು ಅವರ ಪುತ್ರ ಪ್ರಗತ್ ಹಾಗೂ ನೆರೆಮನೆಯ ಚಂಗಪ್ಪ ತಮ್ಮ ಸ್ಕೂಟಿ (ಕೆಎ 12, ಡಬ್ಲ್ಯೂ–6873)ಯಲ್ಲಿ ರಾತ್ರಿ 8 ಗಂಟೆ ಸಮಯದಲ್ಲಿ ಅಮ್ಮತ್ತಿಗೆ ತೆರಳುತ್ತಿದ್ದ ವೇಳೆ ಸಿದ್ದಾಪುರದಿಂದ ಬಟ್ಟೆ ವ್ಯಾಪಾರ ಮುಗಿಸಿಕೊಂಡು ವಿರಾಜಪೇಟೆ ಕಡೆಗೆ ಬರುತ್ತಿದ್ದ ಮಾರುತಿ ವ್ಯಾನ್ (ಕೆಎ 51, ಎಲ್–7201) ಡಿಕ್ಕಿ ಹೊಡೆದು ಮಗುಚಿ ಕೊಂಡಿದೆ. ಸ್ಕೂಟಿ ಚಾಲಕ ಪ್ರಗತ್ (32)ಗೆ ಗಂಭೀರ ಗಾಯ ಉಂಟಾಗಿದ್ದು, ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ನಂತರ ಹೆಚ್ಚಿನ ಚಿಕಿತ್ಸೆಗೆಂದು ಮಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗದಲ್ಲಿ ಕೊನೆಯುಸಿರೆಳೆದರು. ಈ ಅಪಘಾತದಲ್ಲಿ ಗಾಯಗೊಂಡಿರುವ ಹಿಂಬದಿ ಸವಾರ ಚಂಗಪ್ಪರನ್ನು ಚಿಕಿತ್ಸೆಗಾಗಿ ಸುಳ್ಯದ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಲತಾ ಪ್ರಕರಣ ದಾಖಲಿಸಿಕೊಂಡು ಅಪಘಾತದ ಎರಡೂ ವಾಹನಗಳನ್ನು ವಶಪಡಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

## ಅರಿವು ಯೋಜನೆ: ಜೂ.15 ರವರೆಗೆ ಅವಧಿ ವಿಸ್ತರಣೆ

ಮಡಿಕೇರಿ,ಜೂ.8–ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ವತಿಯಿಂದ ಮತೀಯ ಅಲ್ಪ ಸಂಖ್ಯಾತರಾದ ಮುಸ್ಲಿಂ, ಜೈನ್, ಬೌದ್ಧ, ಸಿಖ್, ಪಾರ್ಸಿ ಜನಾಂಗದವರಿಗೆ ಅರಿವು ಯೋಜನೆಯಡಿಯಲ್ಲಿ ನಿಗಮದಿಂದ ಸಾಲ ಸೌಲಭ್ಯಗಳನ್ನು ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜೂ.15 ರವರೆಗೆ ಅವಧಿ ವಿಸ್ತರಿಸಲಾಗಿದೆ. ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಅರಿವು ವಿದ್ಯಾಭ್ಯಾಸ ಯೋಜನೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (KEA Via/CET/NEET ಮುಖಾಂತರ) ಎಂ.ಬಿ.ಬಿ.ಎಸ್, ಬಿ.ಡಿ.ಎಸ್, ಬಿ.ಇ/ಬಿ.ಟೆಕ್, ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್, ಬಿ ಆಯುಷ್, ಫಾರ್ಮಸಿ, ಕೃಷಿ ವಿಜ್ಞಾನ ಮತ್ತು ಪಶು ವೈದ್ಯಕೀಯ ವ್ಯಾಸಂಗಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಾಲ ನೀಡಲಾಗುತ್ತದೆ.

ನಿಗಮದ ವೆಬ್‌ಸೈಟ್: https://kmdconline.karnataka.gov.in/ ಮೂಲಕ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ), ಮೌಲಾನಾ ಅಜಾದ್ ಭವನ, ಗ್ರಾಮಾಂತರ ಪೊಲೀಸ್ ಠಾಣೆ ಹತ್ತಿರ, ಕಾಲೇಜು ರಸ್ತೆ, ಮಡಿಕೇರಿ, ಕಚೇರಿಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿ ಪಡೆಯಲು ಈ ಕಚೇರಿಯ ದೂರವಾಣಿ ಸಂಖ್ಯೆ 08272–201449ನ್ನು ಸಂಪರ್ಕಿಸಬಹುದು. ಎಂದು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವ್ಯವಸ್ಥಾಪಕರು ತಿಳಿಸಿದ್ದಾರೆ.

## ತೋಟಕ್ಕೆ ನುಗ್ಗಿದ ಕಾರು : ಮಹಿಳೆಗೆ ಗಾಯ

ಮಡಿಕೇರಿ: ಚಾಲಕನ ನಿಯಂತ್ರಣ ತಪ್ಪಿದ ಕಾರೊಂದು ರಸ್ತೆ ಬದಿ ತೋಟಕ್ಕೆ ನುಗ್ಗಿದ ಘಟನೆ ವಿರಾಜಪೇಟೆ–ನಾಪೋಕ್ಲು ಮುಖ್ಯ ರಸ್ತೆಯ ಚೆಯ್ಯಂಡಾಣೆಯಲ್ಲಿ ನಡೆದಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕೇರಳದ ಕಾಸರಗೋಡುವಿನಿಂದ ಚೇಲಾವರ ಜಲಪಾತ ಹಾಗೂ ಕಬ್ಬೆಬೆಟ್ಟ ವೀಕ್ಷಣೆಗೆ ತೆರಳುತ್ತಿದ್ದ ಪ್ರವಾಸಿಗರ ಕಾರು (ಕೆಎಲ್.14, ಎಹೆಚ್–0668) ಚೆಯ್ಯಂಡಾಣೆ ಪಟ್ಟಣದ ಸರ್ಕಾರಿ ಆರೋಗ್ಯ ಕೇಂದ್ರದ ವಸತಿ ಗೃಹದ ಸಮೀಪದಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆಯ ಬದಿಯ ತೋಟಕ್ಕೆ ನುಗ್ಗಿದೆ. ಅಪಘಾತದಿಂದ ಕಾರಿನ ಮುಂಭಾಗ ಜಖಂಗೊಂಡಿದ್ದು ಕಾರಿನಲ್ಲಿದ ಮಹಿಳೆಗೆ ಸಣ್ಣಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತೋಟದೊಳಗಿದ್ದ ಕಾರನ್ನು ಸ್ಥಳೀಯರು ಜೀಪ್ ಮೂಲಕ ಹಗ್ಗ ಕಟ್ಟಿ ಎಳೆದು ಹೊರ ತೆಗೆದರು.

# ಕೆರೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ

ಚಾಮರಾಜನಗರ, ಜೂ.8– ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಮ್ಮಿಕೊಳ್ಳಲಾಗುತ್ತಿರುವ 4.25 ಕೋಟಿ ವೆಚ್ಚದ ಕೋಡಿಮೋಳೆ ಕೆರೆ ಅಭಿವೃದ್ಧಿ ಕಾಮಗಾರಿಗೆ ಇಂದು ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು ನಗರಾಭಿವೃದ್ಧಿ ಪ್ರಾಧಿಕಾರದಿಂದ 3.50 ಕೋಟಿ ವೆಚ್ಚದಲ್ಲಿ ಕೋಡಿಮೋಳೆ ಕೆರೆ ಹಾಗೂ 60 ಲಕ್ಷ ವೆಚ್ಚದಲ್ಲಿ ಸೋಮವಾರಪೇಟೆ ಬಳಿ ಕಟ್ಟೆ ಅಭಿವೃದ್ಧಿ ಕಾಮಗಾರಿ ಮಾಡಲಾಗುತ್ತಿದೆ. ಕೋಡಿಮೋಳೆ ಕೆರೆ ಅಭಿವೃದ್ಧಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಾಕಿಂಗ್ ಪಾತ್, ವಿದ್ಯುತ್ ದೀಪ, ಪಾರ್ಕಿಂಗ್ ಜನರು ಕುಳಿತುಕೊಳ್ಳಲು ಕಲ್ಲು ಬೆಂಚುಗಳ ವ್ಯವಸ್ಥೆ, ರಸ್ತೆ ಅಭಿವೃದ್ಧಿ ಸೇರಿವೆ ಎಂದರು.

ಸೋಮವಾರಪೇಟೆಯಿಂದ ಭುವನೇಶ್ವರಿ ವೃತ್ತ ಹಾಗೂ ಭುವನೇಶ್ವರಿ ವೃತ್ತದಿಂದ ಜಾಲಹಳ್ಳಿ ಹುಂಡಿವರೆಗೆ ವಿದ್ಯುತ್ ಬೀದಿ ದೀಪಗಳನ್ನು 80 ಲಕ್ಷ ವೆಚ್ಚದಲ್ಲಿ ಅಳವಡಿಸಲಾಗುತ್ತಿದೆ. ಪಟ್ಟಣದ ಅಭಿವೃದ್ಧಿಗಾಗಿ ನೂರಾರು ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ ಮಾತನಾಡಿದರು. ಜಿಲ್ಲಾ ಪಂಚಾಯಿತಿ ಕೆಡಿಪಿ ಅಧಿಕಾರೇತರ ಸದಸ್ಯರಾದ ಸಯ್ಯದ್ ಮುಸಾಯಿಲ್, ತಾಲೂಕು ಪಂಚಾಯಿತಿ ಕೆ.ಡಿ.ಪಿ ಸದಸ್ಯರಾದ ಶ್ರೀನಿವಾಸ್, ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಮರಿಸ್ವಾಮಿ, ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಪುಟ್ಟಸ್ವಾಮಿ ದ್ವಾರಕಿ, ರಾಜು, ಕನಿಷ್ಠ ವೇತನ ಸಲಹಾ ಮಂಡಳಿ ಮಾಜಿ ಅಧ್ಯಕ್ಷರಾದ ಉಮೇಶ್, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಸೀಮಾ, ಸಣ್ಣ ನೀರಾವರಿ ಇಲಾಖೆ ಇಂಜಿನಿಯರ್ ಮಂಜುಳ, ಮುಖಂಡರಾದ ಗೋವಿಂದಶೆಟ್ಟಿ, ಪ್ರಕಾಶ್, ರಮೇಶ್, ನಟರಾಜು, ಸ್ವಾಮಿ ಇತರರಿದ್ದರು.



ಕೆರೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.

**ವಿದ್ಯುತ್ ಚಿತಾಗಾರಕ್ಕೆ ಚಾಲನೆ:** ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ (ಸಿಮ್ಸ್) ಹಿಂಭಾಗದಲ್ಲಿ 4 ಕೋಟಿ ರೂ. ವೆಚ್ಚದಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣಕ್ಕೆ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರು ಗುದ್ದಲಿಪೂಜೆ ನೆರವೇರಿಸಿದರು. ಪೌರಾಯುಕ್ತರಾದ ಪರಶುರಾಮ ಛಲವಾದಿ, ಕಿರಿಯ ಇಂಜಿನಿಯರ್ ಗಿರೀಶ್ ಆರಾಧ್ಯ, ನಗರಸಭೆ ಮಾಜಿ ಅಧ್ಯಕ್ಷ ರಾಜಪ್ಪ ಇತರರಿದ್ದರು.

# ಸರ್ಕಾರಿ ಜಾಗ ಅತಿಕ್ರಮಣ ತೆರವಿಗೆ ಒತ್ತಾಯಿಸಿ ಧರಣಿ

ಕೊಳ್ಳೇಗಾಲ: ತಾಲೂಕು ಗುಂಡಾಲ್ ಜಲಾಶಯದ ಹಳೇ ಸ್ಥಿರ ಅಚ್ಚುಕಟ್ಟು ವ್ಯಾಪ್ತಿಯ ರೈತರ ಹಿತರಕ್ಷಣಾ ಸಂಘದಿಂದ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸೋಮವಾರ ತಾಲೂಕು ಕಚೇರಿ ಮುಂಭಾಗ ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಯಿತು.

ಸಾಮಾಜಿಕ ಹೋರಾಟಗಾರ ಅಣಗಳ್ಳಿ ದಶರಥ್ ಹಾಗೂ ರೈತ ಸಂಘಟನೆಗಳ ಸಹಕಾರದೊಂದಿಗೆ ನಡೆದ ಧರಣಿಯಲ್ಲಿ ನಮ್ಮ ಬೇಡಿಕೆಗಳು ಈಡೇರುವ ತನಕ ಜಾಗ ಬಿಟ್ಟು ಕದಲುವುದಿಲ್ಲ. ಸಂಬಂಧಿಸಿದ ನೀರಾವರಿ, ಕಂದಾಯ, ನಗರಸಭೆ ಅಧಿಕಾರಿಗಳು ಆಗಮಿಸಬೇಕು, ಸಮಸ್ಯೆ ಬಗೆಹರಿಸುವತನಕ ಧರಣಿ ಕೈಬಿಡುವುದಿಲ್ಲ ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಗೋಪಿನಾಥಂವರೆಗಿನ ಗ್ರಾಮಗಳಲ್ಲಿ ಮೊದಲು ಗ್ರಾಮಠಾಣೆ ನಿಗಧಿ ಮಾಡಬೇಕು. ಗ್ರಾಮ ಠಾಣೆ ಗುರುತಿಸಿದ ಹಿನ್ನೆಲೆ ಶೇ.70ರಷ್ಟು ಮಂದಿಗೆ ಇ ಸ್ವತ್ತು ಸಿಕ್ಕಿಲ್ಲ, ಮದ್ರಾಸ್ ಸರ್ಕಾರದಲ್ಲಿದ್ದ ಅನೇಕ ಮೂಲ ದಾಖಲೆಗಳು ತಿದ್ದುಪಡಿಯಾಗುತ್ತಿವೆ. ಇದರಿಂದಾಗಿ ಸರ್ಕಾರಿ ಆಸ್ತಿ, ಕೆರೆ ಕಟ್ಟೆಗಳು ಅತಿಕ್ರಮವಾಗಿವೆ. ಮದ್ರಾಸ್ ಸರ್ಕಾರದ ಮೂಲ ದಾಖಲೆಯಂತೆ ಅತಿಕ್ರಮವಾಗಿರುವ ಜಾಗ ವಶಕ್ಕೆ ಪಡೆಯಬೇಕು. ರೈತರ ಜಮೀನುಗಳಿಗೆ ಕಲುಷಿತ ನೀರು ಪೂರೈಕೆ, ಯುಜಿಡಿ ನೀರು ಪೂರೈಕೆಗೆ ಶಾಶ್ವತ ಪರಿಹಾರ ಸಿಗಬೇಕು. ಹಿಂದಿನ ಮೂಲ ದಾಖಲಾತಿಯಂತೆ ಕೆರೆ ಕಟ್ಟೆಗಳ ದಾಖಲಾತಿಗಳಂತೆ ಗೋಮಾಳ ಇನ್ನಿತರೆ ಜಾಗಗಳನ್ನು ತಿದ್ದುಪಡಿ ಮಾಡಬೇಕು. ಗ್ರಾಮಠಾಣೆ ವ್ಯಾಪ್ತಿ ಗುರುತಿಸಿ ಇಸ್ವತ್ತು ನೀಡುವ ಮೂಲಕ ಬಡವರಿಗೆ ಸ್ಪಂದಿಸಬೇಕು ಎಂದು ಆಗ್ರಹಿಸಿದರು.



ತಹಸೀಲ್ದಾರ್ ಬಸವರಾಜು ಅವರು ರೈತರ ಅಹವಾಲು ಆಲಿಸಿದರು.

ತಹಸೀಲ್ದಾರ್ ಬಸವರಾಜು ಪ್ರತಿಭಟನಾಕಾರರು ಅಹವಾಲು ಆಲಿಸಿ ನಿಮ್ಮ ಬಳಿ ಇರುವ ದಾಖಲೆ ಪ್ರದರ್ಶಿಸಿ ಸ್ಥಳಕ್ಕೆ ಹೋಗಿ ಪರಿಶೀಲಿಸೋಣ ಎಂದು ಕೆಲವು ಸ್ಥಳಗಳಿಗೂ ಪ್ರತಿಭಟನಾಕಾರರು ಜೊತೆ ತೆರಳಿ ಪರಿಶೀಲಿಸಿದರು.

ಈ ವೇಳೆ ಛಲವಾದಿ ಮಹಾಸಭೆ ರಾಜ್ಯ ಘಟಕದ ಮಾಜಿ ಉಪಾಧ್ಯಕ್ಷ ಬಸವರಾಜು, ರೈತ ಸಂಘದ ಅಧ್ಯಕ್ಷ ನಾಗರಾಜು, ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ, ರೈತ ಸಂಘದ ಮಾಜಿ ಅಧ್ಯಕ್ಷ ರೇಚಣ್ಣಸ್ವಾಮಿ, ರಾಜಣ್ಣ, ನಾಗರಾಜು, ಫಾಲಕ್ಷ, ವೀರಭದ್ರಸ್ವಾಮಿ, ಮಲ್ಲರಾಜು ಇನ್ನಿತರಿದ್ದರು.

## ಮ.ಬೆಟ್ಟ ಮಾರ್ಗದಲ್ಲಿ ಪ್ಲಾಸ್ಟಿಕ್ ಸಂಗ್ರಹ ಅಭಿಯಾನ



ಮಹದೇಶ್ವರ ಬೆಟ್ಟ ಮಾರ್ಗದಲ್ಲಿ ಪ್ಲಾಸ್ಟಿಕ್ ಮುಕ್ತ ಅಭಿಯಾನ ನಡೆಯಿತು.

ಕೌದಳ್ಳಿ, ಜೂ.8– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕೌದಳ್ಳಿ ಅರಣ್ಯ ವಲಯದ ವತಿಯಿಂದ ಮಲೆ ಮಹದೇಶ್ವರ ಬೆಟ್ಟ ಮಾರ್ಗದಲ್ಲಿ ಪ್ಲಾಸ್ಟಿಕ್ ಮುಕ್ತ ಅಭಿಯಾನ ಹಾಗೂ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ವಲಯ ಅರಣ್ಯಾಧಿಕಾರಿ ಮಾದೇಶ್ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೌದಳ್ಳಿ ಮತ್ತು ಮುಚ್ಚುಬಾವಿ ಕ್ಯಾಂಪ್ ಸಿಬ್ಬಂದಿ ಭಾಗವಹಿಸಿ, ಕೌದಳ್ಳಿ ಫಾರೆಸ್ಟ್ ಡಿ–ಲೈನ್‌ನಿಂದ ಮಲೆ ಮಹದೇಶ್ವರ ಬೆಟ್ಟದ ಮುಖ್ಯ ರಸ್ತೆಯ ಎರಡೂ ಬದಿಗಳಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಿ ಸ್ವಚ್ಛತಾ ಕಾರ್ಯ ನಡೆಸಿದರು.

ಕಾರ್ಯಕ್ರಮದಲ್ಲಿ ಉಪ ವಲಯ ಅರಣ್ಯಾಧಿಕಾರಿ ಆನಂದ್ ಹಲಸಪ್ಪಗೋಳ, ಗಸ್ತು ಅರಣ್ಯ ಪಾಲಕರಾದ ಮಲ್ಲಪ್ಪ, ಸಿದ್ದಪ್ಪ, ಪ್ರೇಮನಗೌಡ ಹಾಗೂ ಅರಣ್ಯ ವೀಕ್ಷಕ ವಿಕ್ರಂ ಉಪಸ್ಥಿತರಿದ್ದರು.

ಸಂತ ಅಂಥೋಣಿಯ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಿದರು. ಕಾಲೇಜಿನ ಪ್ರಾಂಶುಪಾಲ ಡೆನ್ನಿಸ್ ಸಂಬತ್ ಕುಮಾರ್ ಹಾಗೂ ವಾಣಿಜ್ಯ ಉಪನ್ಯಾಸಕ ಸುಪ್ರೀತ ಅವರು ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಅಗತ್ಯತೆ ಮತ್ತು ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಧಿಕಾರಿಗಳು, ಪರಿಸರವನ್ನು ಸ್ವಚ್ಛವಾಗಿಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದ್ದು, ಏಕಬಳಕೆ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಹಸಿರು ಪರಿಸರ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಈ ಅಭಿಯಾನ ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿತು.

## ಚಾ.ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ

### 415 ಮಂದಿ ತಪಾಸಣೆ, 220 ಮಂದಿಗೆ ಶಸ್ತ್ರ ಚಿಕಿತ್ಸೆಗೆ ಆಯ್ಕೆ

ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 415 ಮಂದಿ ತಪಾಸಣೆ ಮಾಡಿಸಿಕೊಂಡರು. 220 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದೊಯ್ಯಲು ವ್ಯವಸ್ಥೆ ಮಾಡಲಾಯಿತು.



ಚಾಮರಾಜನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.


ರೋಟರಿ ಸಂಸ್ಥಾಪಕ ಸದಸ್ಯ ಸಿ.ವಿ. ಶ್ರೀನಿವಾಸಶೆಟ್ಟಿ ಮಾತನಾಡಿ, ರೋಟರಿ ಸಂಸ್ಥೆ ಪ್ರತಿ ತಿಂಗಳು ಮೊದಲ ಭಾನುವಾರ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಆಯೋಜಿಸುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆಯುತ್ತಿರುವುದು ಸಂತಸವಾಗಿದ್ದು, ಮುಂದಿನ ಶಿಬಿರದ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಈ ಬಾರಿ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ತಪಾಸಣೆ ಮಾಡಿಸಿಕೊಂಡಿದ್ದು, 220 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಕೊಂಡಿದ್ದಾರೆ. ರೋಟರಿ ಸಂಸ್ಥೆಯು ಸೇವೆ ಮಾಡಲು ಸಿದ್ದವಿದ್ದು, ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕಣ್ಣಿನ ಆರೋಗ್ಯದ ಕಡೆ ಗಮನ ಹರಿಸುವುದು ಇಂದಿನ ಡಿಜಿಟಲ್ ಯುಗದಲ್ಲಿ ಅಗತ್ಯವಾಗಿದೆ. ಈ ಶಿಬಿರಕ್ಕೆ ಹೊರ ಜಿಲ್ಲೆಗಳಿಂದ ಜನತೆ ಬರುತ್ತಿದ್ದು, ಶಿಬಿರದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದರು.

ಶಿಬಿರದಲ್ಲಿ ರೋಟರಿ ಸಂಸ್ಥೆಯ ಸಂಸ್ಥಾಪಕ ಸದಸ್ಯ ಅಶ್ವಥ್ ನಾರಾಯಣ್, ಮುಂದಿನ ಸಾಲಿನ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ, ಮಾಜಿ ಅಧ್ಯಕ್ಷರಾದ ನಾಗರಾಜು, ಯೋಗರಾಜು, ಎ.ಶ್ರೀನಿವಾಸನ್, ಸುರೇಶ್, ಎಸ್ ಆರ್ ಎಸ್ ಶ್ರೀನಿವಾಸ, ಕೆಂಪನಪುರ ಮಹಾದೇವಸ್ವಾಮಿ, ಸುರೇಶ್ ಕುಮಾರ್, ಮುಂದಿನ ಸಾಲಿನ ಕಾರ್ಯದರ್ಶಿ ಅಂಕಶೆಟ್ಟಿ, ಸಿದ್ದಮಲ್ಲಪ್ಪ, ನೇಮಿರಾಜ್, ಸವಿತಾ, ಪಿಆರ್‌ಓ ವಿಜಯಕುಮಾರ್ ಇತರರಿದ್ದರು.

## ನನಗೆ ಸಚಿವ ಸ್ಥಾನ ಸಿಗಲಿದೆ: ವಿಶ್ವಾಸ



ಪುಟ್ಟರಂಗಶೆಟ್ಟಿ

ಚಾಮರಾಜನಗರ: ನನಗೆ ಮೊದಲ ಹಂತದಲ್ಲೇ ಸಚಿವ ಸ್ಥಾನ ಕೊಡಬೇಕಿತ್ತು. ಪ್ರಸ್ತುತ ಎರಡನೇ ಹಂತದಲ್ಲಿ ನನಗೆ ಸಚಿವ ಸ್ಥಾನ ಸಿಗಲಿದೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯಸಭೆ ಹಾಗೂ ವಿಧಾನಪರಿಷತ್ ಚುನಾವಣೆ ಮುಗಿದ ಕೂಡಲೇ ಸಚಿವ ಸಂಪುಟ ವಿಸ್ತರಣೆಯಾಗಲಿದೆ. ಆಗ ನನಗೆ ಸಚಿವ ಸ್ಥಾನ ದೊರೆಯಲಿದೆ ಎಂದರು.

ರಾಜ್ಯದಲ್ಲೇ ನಾನು ಉಪ್ಪಾರ ಸಮುದಾಯದ ಏಕೈಕ ಶಾಸಕನಾಗಿದ್ದೇನೆ. 4 ಬಾರಿ ಗೆದ್ದಿದ್ದೇನೆ. ಘಟಾನುಘಟಿಗಳನ್ನು ಸೋಲಿಸಿ ಶಾಸಕನಾಗಿದ್ದೇನೆ. ಅಲ್ಲದೇ ನಾನು ಕಳೆದ 47 ವರ್ಷಗಳಿಂದ ಕಾಂಗ್ರೆಸ್‌ನಲ್ಲಿದ್ದು, ನನ್ನದೇ ಇತಿಹಾಸವಿದೆ. ಯಾವುದೇ ರೀತಿಯಿಂದ ನೋಡಿದರೂನನಗೆ ಸಚಿವ ಸ್ಥಾನ ಕೊಡಲೇಬೇಕು. ಜಿಲ್ಲೆಗೆ ಒಬ್ಬರಂತೆ ಸಚಿವ ಸ್ಥಾನ ನೀಡಿದರೂ ನನಗೆ ನೀಡಬೇಕು. ಜಿಲ್ಲೆಯಲ್ಲಿ ನಾನು ಹಿರಿಯ ಶಾಸಕನಾಗಿದ್ದು, ಜಾತಿವಾರು ತೆಗೆದುಕೊಂಡರು ನನಗೆ ಸಚಿವ ಸ್ಥಾನ ನೀಡಬೇಕು ಎಂದರು.

**ಚಾಮರಾಜನಗರಕ್ಕೆ ಡಿಕೆಶಿ ಬರುತ್ತಾರೆ:** ಚಾಮರಾಜನಗರಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬರುತ್ತಾರೆ. ಅವರು ದೇವರ ಭಕ್ತರಾದರೂ ಅವರಿಗೆ ಮೂಢನಂಬಿಕೆಯಿಲ್ಲ. ಹಾಗಾಗಿ ಚಾಮರಾಜನಗರಕ್ಕೆ ಬರುತ್ತಾರೆ ಎಂದು ತಿಳಿಸಿದರು. ಜೂ.22ಕ್ಕೆ ಚಾಮರಾಜನಗರದಲ್ಲಿ ರಾಜ್ಯಮಟ್ಟದ ಭಗೀರಥ ಜಯಂತಿ ಹಾಗೂ ಉಪ್ಪಾರ ಸಮಾವೇಶ ನಿಗಧಿಯಾಗಿತ್ತು. ಆದರೆ ಸಿಎಂ ಬದಲಾವಣೆ ಆಗಿರುವುದರಿಂದ ದಿನಾಂಕವು ಬದಲಾಗಲಿದೆ. ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರ ಅನುಮತಿ ಪಡೆದು ಮತ್ತೊಂದು ದಿನಾಂಕ ನಿಗಧಿಪಡಿಸಲಾಗುವುದು ಎಂದರು.

## ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನ

ಚಾಮರಾಜನಗರ: ತಾಲೂಕಿನ ಹರದನಹಳ್ಳಿ ಪ.ವರ್ಗದ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 5 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪ.ಪಂಗಡ, ಜಾತಿ ಹಾಗೂ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ವೆಬ್‌ಸೈಟ್ https://shp.karnataka.gov.in./shpapp/Default ಮೂಲಕ ಜು.31 ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರು, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಚೇರಿ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಸಂಚಾರ ನಿಯಮ ಉಲ್ಲಂಘನೆ ; ಮೈಸೂರು ನಗರ ವ್ಯಾಪ್ತಿಯಲ್ಲಿ 458 ಕೋಟಿ, ಜಿಲ್ಲೆಯಲ್ಲಿ 184 ಕೋಟಿ ರೂ. ದಂಡ ಬಾಕಿ

● ದಂಡದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಿರುವ ಬಗ್ಗೆ ಪ್ರಚಾರ ಮಾಡಿ ; ದಂಡ ವಸೂಲಿಗೆ ಕ್ರಿಯಾ ಯೋಜನೆ ರೂಪಿಸಿ ● ಅಧಿಕಾರಿಗಳಿಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ನಿರ್ದೇಶನ

ಮೈಸೂರು,ಜೂ.8(ಪಿಎಂ)– ಸಂಚಾರ ನಿಯಮ ಉಲ್ಲಂಘನೆ ಸಂಬಂಧ ಮೈಸೂರು ನಗರ ವ್ಯಾಪ್ತಿಯಲ್ಲಿ 458 ಕೋಟಿ ರೂ. ಹಾಗೂ ಜಿಲ್ಲೆಯಲ್ಲಿ 184 ಕೋಟಿ ರೂ. ದಂಡ ವಸೂಲಿ ಬಾಕಿ ಇದ್ದು, ಸರ್ಕಾರ ಜೂ.21ರಿಂದ ಜು.10ರವರೆಗೆ ದಂಡ ಪಾವತಿಗೆ ಶೇ.50ರಷ್ಟು ರಿಯಾಯಿತಿ ನೀಡಿರುವ ಬಗ್ಗೆ ವ್ಯಾಪಕ ಪ್ರಚಾರದೊಂದಿಗೆ ದಂಡದ ಬಾಕಿ ಮೊತ್ತ ವಸೂಲಿಗೆ ಕ್ರಮ ವಹಿಸುವಂತೆ ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖಾಧಿಕಾರಿಗಳಿಗೆ ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ನಿರ್ದೇಶನ ನೀಡಿದರು.

ಮೈಸೂರಿನ ಜಯನಗರದ ನ್ಯಾಯಾಲಯದ ಸಂಕೀರ್ಣದ ಕಾನ್ಫರೆನ್ಸ್ ಹಾಲ್‌ನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. ಸಂಚಾರ ನಿಯಮ ಉಲ್ಲಂಘನೆ ಮತ್ತು ಸಾರಿಗೆ ಇಲಾಖೆ ಸಂಬಂಧ ದಂಡ ಪಾವತಿಗೆ ಶೇ.50ರಷ್ಟು ರಿಯಾಯಿತಿಯನ್ನು ಸರ್ಕಾರ ನೀಡಿದೆ. ಮೇ 2026ರ ಮೊದಲು ದಾಖಲಾಗಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಹಾಗೂ 1991ರಿಂದ 2022ರ ಅವಧಿಯಲ್ಲಿ ಸಾರಿಗೆ ಇಲಾಖೆಯಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ದಂಡದಲ್ಲಿ ಶೇ.50 ರಿಯಾಯಿತಿ ನೀಡುವ ಕುರಿತು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ ಎಂದರು.

ಈ ಹಿಂದೆ ನಡೆದ ಲೋಕ್ ಅದಾಲತ್‌ನಲ್ಲಿ 77 ಲಕ್ಷದ 41 ಸಾವಿರ 50 ಪ್ರಕರಣಗಳು ಇತ್ಯರ್ಥವಾಗಿತ್ತು. ಇದರಿಂದ 201 ಕೋಟಿ ರೂ. ವಸೂಲಿಯಾಗಿ ಸರ್ಕಾರಕ್ಕೆ ಆದಾಯ ತಂದುಕೊಡಲಾಗಿದೆ. ಅಂತೆಯೇ ಈ ರಿಯಾಯಿತಿ ಯೋಜನೆಯ ಪ್ರಯೋಜನ ನಾಗರಿಕರು ಪಡೆದುಕೊಳ್ಳಲು ಸಂಬಂಧಿಸಿದ ಅಧಿಕಾರಿಗಳು ಕ್ರಮ ವಹಿಸಬೇಕು. ಈ ನಿಟ್ಟಿನಲ್ಲಿ ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಶೇ.50ರಷ್ಟು ರಿಯಾಯಿತಿ ಸಂಬಂಧ ರೂಪಿಸಿರುವ ಕ್ರಿಯಾ ಯೋಜನೆ ಸಮರ್ಪಕ ರೀತಿ ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ರಿಯಾಯಿತಿಯಡಿ ದಂಡ ಪಾವತಿಗೆ ಸ್ಥಾಪಿಸಿರುವ ಬೂತ್‌ಗಳ ಬಗ್ಗೆ ಪ್ರಚಾರ ನೀಡಬೇಕು. ಆ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳನ್ನು ಮುಕ್ತಾಯಗೊಳಿಸಬಹುದು. ಹಾಗೆಯೇ ತಾಲೂಕು ಅಧಿಕಾರಿಗಳು ಪ್ರತ್ಯೇಕ ಸಭೆ ನಡೆಸಿ ಕ್ರಿಯಾ ಯೋಜನೆ ರೂಪಿಸುವಂತೆ ಸೂಚನೆ ನೀಡಿದರು.

ಪ್ರಸ್ತುತ ಪೊಲೀಸ್ ಸಂಚಾರ ವಿಭಾಗದ ಮೈಸೂರು ನಗರ ವ್ಯಾಪ್ತಿ ಸಂಬಂಧ 1,04,18,480 (1.04 ಕೋಟಿ) ಪ್ರಕರಣಗಳಲ್ಲಿ 458,04,01,700 (458 ಕೋಟಿ) ದಂಡ ಬಾಕಿಯಿದೆ. ಅಂತೆಯೇ ಜಿಲ್ಲೆಯಲ್ಲಿ 36,73,737 (36.73 ಲಕ್ಷ) ಪ್ರಕರಣಗಳಲ್ಲಿ 184,05,74,500 ರೂ. (184 ಕೋಟಿ) ಬಾಕಿಯಿದೆ. ಒಟ್ಟಾರೆ 1,40,92,217 ಪ್ರಕರಣಗಳಲ್ಲಿ 642,09,76,200 (642 ಕೋಟಿ) ರೂ. ದಂಡ ಬಾಕಿ ಉಳಿದಿದೆ ಎಂದು ಹೇಳಿದರು.

ಅದೇ ರೀತಿ ಸಾರಿಗೆ ಇಲಾಖೆ ಸಂಬಂಧ ಆರ್‌ಟಿಓ ಮೈಸೂರು ಪೂರ್ವ ವಿಭಾಗದಲ್ಲಿ 792 ಪ್ರಕರಣಗಳಲ್ಲಿ 24.12 ಲಕ್ಷ ರೂ. ಹಾಗೂ ಆರ್‌ಟಿಓ ಹುಣಸೂರು ವಿಭಾಗದಲ್ಲಿ 864 ಪ್ರಕರಣಗಳಲ್ಲಿ 30.99 ಲಕ್ಷ ರೂ. ದಂಡ ಬಾಕಿಯಿದೆ. ಒಟ್ಟಾರೆ 1,656 ಪ್ರಕರಣಗಳಲ್ಲಿ 55.11 ಲಕ್ಷ ರೂ. ದಂಡ ಬಾಕಿ ಉಳಿದಿದೆ. ಈ ಎಲ್ಲಾ ದಂಡದ ಮೊತ್ತ ವಸೂಲಿಗೆ ಹಮ್ಮಿಕೊಂಡ ಕ್ರಿಯಾಯೋಜನೆ ಬಗ್ಗೆ ಮಾಹಿತಿ ನೀಡುವಂತೆ ಅವರು ಕೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಎಲ್ಲಾ ತಾಲೂಕು ಮಟ್ಟದಲ್ಲಿ ಅಧಿಕಾರಿಗಳು ಈ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಹಾಗೂ ಬೀಟ್‌ನಲ್ಲಿ ಸಹ ತಿಳುವಳಿಕೆ ಮೂಡಿಸಲಾಗುತ್ತಿದೆ. ಸಾಮಾಜಿಕ ಜಾಲತಾಣದ ಈ ಬಗ್ಗೆ ತಿಳಿಸಲಾಗುತ್ತಿದೆ. ಸ್ವಯಂ ಆಗಿ ಸವಾರರೇ ತಮ್ಮ ವಾಹನದ ನೋಂದಣಿ ಸಂಖ್ಯೆ ಪರಿಶೀಲನೆ ಮಾಡಿಕೊಳ್ಳಬಹುದು. ಈ ಬಗ್ಗೆಯೂ ಪ್ರಚಾರ ಮಾಡಲಾಗುತ್ತಿದೆ. ಕೆಲವರು ಉದ್ದೇಶಪೂರ್ವಕವಾಗಿ ಪಾವತಿಸದೇ ಇರುವವರನ್ನು ಪತ್ತೆ ಮಾಡಿ ದಂಡ ವಸೂಲಿಗೆ ಕ್ರಮ ವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನಗರ ಪೊಲೀಸ್ ಡಿಸಿಪಿ ಸುಂದರ್‌ರಾಜ್ ಮಾತನಾಡಿ, 2025ರ ಸಾಲಿನ ರಿಯಾಯಿತಿಯಡಿ ಎರಡು ಕಂತುಗಳಲ್ಲಿ 53.5 ಕೋಟಿ ರೂ. ದಂಡ ಸಂಗ್ರಹ ಮಾಡಲಾಗಿದೆ. ಪ್ರಸ್ತುತ ಬಾಕಿ ಇರುವ 458 ಕೋಟಿ ರೂ. ವಸೂಲಿ ಸಂಬಂಧ ಸಾಮಾಜಿಕ ಜಾಲತಾಣ, ಮಾಧ್ಯಮದ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಿದ್ದೇವೆ. 18 ಸಿವಿಲ್ ಹಾಗೂ 5 ಟ್ರಾಫಿಕ್ ಠಾಣೆಗಳು ನಗರ ವ್ಯಾಪ್ತಿಯಲ್ಲಿ ಇದ್ದು, ದಂಡ ಪಾವತಿಗೆ ವ್ಯವಸ್ಥೆ ಮಾಡುತ್ತೇವೆ. ಅಗತ್ಯವಿರುವ ಠಾಣೆಗಳಲ್ಲಿ ಹೆಚ್ಚುವರಿ ಬೂತ್‌ಗಳ ವ್ಯವಸ್ಥೆ ಮಾಡುತ್ತೇವೆ. ಈ ದಂಡ ವಸೂಲಿಯಲ್ಲಿ ಕಳೆದ ಬಾರಿ ನಮ್ಮ ಮೈಸೂರು ನಗರ ಪೊಲೀಸ್ ರಾಜ್ಯದಲ್ಲಿ ದ್ವಿತೀಯ ಸ್ಥಾನ ಗಳಿಸಿದೆ. ಈ ಅವಧಿಯಲ್ಲಿ 53.5 ಕೋಟಿ ರೂ. ದಂಡ ಸಂಗ್ರಹಿಸಲಾಗಿದೆ. ಉಳಿದಂತೆ ತಮ್ಮ ಸೂಚನೆಯಂತೆ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ ಆದ ಹಿರಿಯ ಸಿವಿಲ್ ನ್ಯಾಯಾಧೀಶ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಲೋಕೇಶ್, ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಶಿವಶಂಕರ್, ಮೈಸೂರು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಮಲ್ಲಿಕ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.


ಮೈಸೂರಿನ ಜಯನಗರದ ಕೋರ್ಟ್‌ನ ಕಾನ್ಫರೆನ್ಸ್ ಹಾಲ್‌ನಲ್ಲಿ ಸೋಮವಾರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಅವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಭೆ ನಡೆಯಿತು.

## ಆ.21ರಿಂದ 23ರವರೆಗೆ ಸುಪ್ರೀಂಕೋರ್ಟ್‌ನಲ್ಲಿ ವಿಶೇಷ ಲೋಕ್ ಅದಾಲತ್

# ಮೈಸೂರು ಜಿಲ್ಲೆ ಸಂಬಂಧ 37 ಪ್ರಕರಣ ಆಯ್ಕೆ

● ಈ ಪೈಕಿ ಈಗಾಗಲೇ ಎರಡು ಇತ್ಯರ್ಥ ; ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಮಾಹಿತಿ ● 'ಸಮಾಧಾನ ಸಮಾರೋಹ-2026' ಶೀರ್ಷಿಕೆಯಡಿ ನಡೆಯುವ ಲೋಕ್ ಅದಾಲತ್

ಮೈಸೂರು,ಜೂ.8(ಪಿಎಂ)– ಸುಪ್ರೀಂಕೋರ್ಟ್ ವತಿಯಿಂದ 'ಸಮಾಧಾನ ಸಮಾರೋಹ–2026' ಶೀರ್ಷಿಕೆಯಡಿ ವಿಶೇಷ ಲೋಕ್ ಅದಾಲತ್ ಅನ್ನು ಆಗಸ್ಟ್ 21ರಿಂದ 23ರವರೆಗೆ ನಡೆಸಲಾಗುತ್ತಿದೆ. ಸದರಿ ಅದಾಲತ್‌ಗಾಗಿ ಮೈಸೂರು ಜಿಲ್ಲೆ ಸಂಬಂಧ 37 ಪ್ರಕರಣಗಳನ್ನು ಸುಪ್ರೀಂಕೋರ್ಟ್ ಆಯ್ಕೆ ಮಾಡಿದ್ದು, ಈ ಪೈಕಿ 2 ಪ್ರಕರಣಗಳು ಈಗಾಗಲೇ ಇತ್ಯರ್ಥಗೊಂಡಿವೆ ಎಂದು ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ತಿಳಿಸಿದರು.

ಮೈಸೂರಿನ ಜಯನಗರದ ನ್ಯಾಯಾಲಯದ ಸಂಕೀರ್ಣದ ಕಾನ್ಫರೆನ್ಸ್ ಹಾಲ್‌ನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಅಧಿಕಾರಿಗಳ ಸಭೆಯಲ್ಲಿ ಮಾಧ್ಯಮದವರಿಗೆ ಅವರು ಮಾಹಿತಿ ನೀಡಿದರು. ಈ ವಿಶೇಷ ಲೋಕ್ ಅದಾಲತ್ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳಿಗೆ ಮಾತ್ರ ಅನ್ವಯಿಸಲಿದೆ. ಪಕ್ಷಗಾರರ ಸಮ್ಮತಿಯಿಂದ ರಾಜೀಯಾಗಬಹುದಾದ ಪ್ರಕರಣಗಳನ್ನು ಪರಿಗಣಿಸಲಾಗುತ್ತದೆ. ರಾಜೀ ಪ್ರಕರಣಗಳಲ್ಲಿ ನ್ಯಾಯಾಲಯ ಶುಲ್ಕ ಹಿಂದಿರುಗಿಸಲಾಗುವುದು. ಇದು ಸುಲಭ ಮತ್ತು ವೇಗವಾಗಿ ಇತ್ಯರ್ಥಪಡಿಸಬಹುದಾದ ಮಾರ್ಗವಾಗಿದೆ ಎಂದು ಹೇಳಿದರು.

ಈ ಲೋಕ್ ಅದಾಲತ್ ಆದೇಶವು ಅಂತಿಮವಾಗಿದ್ದು, ಅದನ್ನು ಪ್ರಶ್ನಿಸಲು ಅವಕಾಶ ಇರುವುದಿಲ್ಲ. ಈ ಸಂಬಂಧ ನ್ಯಾಯಾಂಗದ ಅಧಿಕಾರಿಗಳು ಮತ್ತು ತರಬೇತಿಪಡೆದ ಮಧ್ಯೆಸ್ಥಿಕೆದಾರರು ಕರ್ನಾಟಕ ಹೈಕೋರ್ಟ್ ಮತ್ತು ಜಿಲ್ಲಾ ಕೋರ್ಟ್‌ಗಳಲ್ಲಿ ಪೂರ್ವ ಲೋಕ್ ಅದಾಲತ್ ಪ್ರಕ್ರಿಯೆಗಳನ್ನು ನಡೆಸುತ್ತಾರೆ. ಇದು ಪಕ್ಷಗಾರರ ನಡುವೆ ಸೌಹಾರ್ದಯುತ, ಲಿಖಿತ ಇತ್ಯರ್ಥಕ್ಕೆ ಸಹಕಾರಿ. ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಸಂಬಂಧಿತ ಪ್ರಕರಣಗಳ ಪಟ್ಟಿಯನ್ನು ನೋಡಬಹುದು. ಪೀಠಗಳನ್ನು ರಚಿಸಿ ಪೂರ್ವಭಾವಿಯಾಗಿ ಸಹ ಲೋಕ್ ಅದಾಲತ್ ನಡೆಸಲಾಗುತ್ತದೆ ಎಂದು ತಿಳಿಸಿದರು.

ಪಕ್ಷಕಾರರುಗಳು ತಮ್ಮ ವಾಸಸ್ಥಳಗಳ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಲ್ಲಿ ತೆರೆಯಲಾಗಿರುವ ವಿಡಿಯೋ ಕಾನ್ಫರೆನ್ಸ್ ಕೇಂದ್ರಗಳಿಗೆ ಭೇಟಿ ನೀಡಿ ಆ.21ರಿಂದ 23ರವರೆಗೆ ನಡೆಯುವ ವಿಶೇಷ ಲೋಕ್ ಅದಾಲತ್‌ನಲ್ಲಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು. ಈ ಕುರಿತು ಗೂಗಲ್ ಫಾರ್ಮ್ ಲಭ್ಯವಿದ್ದು, ಅದನ್ನು ಜುಲೈ 31ರ ಒಳಗಾಗಿ ಸಂಬಂಧಪಟ್ಟ ವಕೀಲರು ಅಥವಾ ಪಕ್ಷಗಾರರು ಗೂಗಲ್ ಫಾರ್ಮ್ ಭರ್ತಿ ಮಾಡಬಹುದು ಎಂದರು.

ಹೆಚ್ಚಿನ ಮಾಹಿತಿಗಾಗಿ NALSA ಸಹಾಯವಾಣಿ ಸಂಖ್ಯೆ 15100 ಮತ್ತು www.kslsa.kar.nic ವೆಬ್‌ಸೈಟ್ ಅಥವಾ ಆಯಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಮತ್ತು ತಾಲ್ಲೂಕು ಕಾನೂನು ಸೇವಾ ಸಮಿತಿಗಳ ಸದಸ್ಯ ಕಾರ್ಯದರ್ಶಿಯವರನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ ಆದ ಹಿರಿಯ ಸಿವಿಲ್ ನ್ಯಾಯಾಧೀಶ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ ಮಾತನಾಡಿ, ಪಾರ್ಟಿಗಳು ಏನಾದರೂ ಬರಲಿಕ್ಕೆ ಸಾಧ್ಯವಾಗದ ಪಕ್ಷದಲ್ಲಿ ವಿಡೀಯೋ ಕಾನ್ಫರೆನ್ಸ್ ಮೂಲಕ ಇತ್ಯರ್ಥಕ್ಕೆ ಅವಕಾಶ ಕಲ್ಪಿಸಲಾಗುತ್ತದೆ ಎಂದು ತಿಳಿಸಿದರು.

## ಹಸು ಸಾಕಾಣಿಕೆ, ಗುಣಮಟ್ಟದ ಹಾಲು ಉತ್ಪಾದನೆ ಕುರಿತು ತರಬೇತಿ ಕಾರ್ಯಾಗಾರ



ಹಾರ್ಟ್ ಸಂಸ್ಥೆ ವತಿಯಿಂದ ಹಸು ಸಾಕಾಣಿಕೆ ಮತ್ತು ಗುಣಮಟ್ಟದ ಹಾಲು ಉತ್ಪಾದನೆ ವಿಷಯದ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ಮೈಸೂರು, ಜೂ. 8– ಹಾರ್ಟ್ ಸಂಸ್ಥೆ ವತಿಯಿಂದ ರೈತರು, ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರು, ಯುವಕರು ಹಾಗೂ ಹೈನುಗಾರಿಕೆ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವವರಿಗಾಗಿ ಹಸು ಸಾಕಾಣಿಕೆ ಮತ್ತು ಗುಣಮಟ್ಟದ ಹಾಲು ಉತ್ಪಾದನೆ ವಿಷಯದ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವು ಜೂ.14ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಹಾರ್ಟ್ ಸಂಸ್ಥೆ, ಕೋಟೆಹುಂಡಿ (ರಿಂಗ್ ರೋಡ್ ಹತ್ತಿರ), ಮೈಸೂರು ಇಲ್ಲಿ ನಡೆಯಲಿದೆ.

ಕಾರ್ಯಾಗಾರದಲ್ಲಿ ಪಶುಸಂಗೋಪನಾ ಮತ್ತು ಹೈನುಗಾರಿಕೆ ತಜ್ಞರು ಭಾಗವಹಿಸಿ ಹಸುಗಳ ವೈಜ್ಞಾನಿಕ ಸಾಕಾಣಿಕೆ, ಉತ್ತಮ ತಳಿಗಳ ಆಯ್ಕೆ, ಸಮತೋಲಿತ ಆಹಾರ ನಿರ್ವಹಣೆ, ಆರೋಗ್ಯ ಸಂರಕ್ಷಣೆ, ರೋಗಗಳ ತಡೆಗಟ್ಟುವಿಕೆ, ಲಸಿಕೆ ಕಾರ್ಯಕ್ರಮಗಳು, ಸ್ವಚ್ಛ ಹಾಗೂ ಗುಣಮಟ್ಟದ ಹಾಲು ಉತ್ಪಾದನೆ, ಮೌಲ್ಯವರ್ಧನೆ ಹಾಗೂ ಹೈನುಗಾರಿಕೆಯಿಂದ ಆದಾಯ ಹೆಚ್ಚಿಸುವ ಕುರಿತು ಸಮಗ್ರ ಮಾಹಿತಿ ನೀಡಲಿದ್ದಾರೆ.

ಹೈನುಗಾರಿಕೆಯನ್ನು ಲಾಭದಾಯಕ ಉದ್ಯಮವನ್ನಾಗಿ ರೂಪಿಸಿಕೊಳ್ಳಲು ಬಯಸುವ ರೈತರು ಹಾಗೂ ಆಸಕ್ತರು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಹಾರ್ಟ್ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: ಮೊಬೈಲ್: 93536–30903 ಸಂಪರ್ಕಿಸಬಹುದು.

## ಜೋಯಾಲುಕ್ಕಾಸ್ ಫೌಂಡೇಶನ್‌ನಿಂದ ಆರು ರಾಜ್ಯಗಳ 13 ಸಾವಿರ ವಿದ್ಯಾರ್ಥಿಗಳಿಗೆ ಶಾಲಾ ಕಿಟ್ ವಿತರಣೆ

Joyalukkas
World's favourite jeweller

**ಕೊಚ್ಚಿ:** ಹೊಸ ಶೈಕ್ಷಣಿಕ ವರ್ಷದ ಆರಂಭದಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ 13 ಸಾವಿರ ವಿದ್ಯಾರ್ಥಿಗಳಿಗೆ ಶಾಲಾ ಕಿಟ್‌ಗಳನ್ನು ವಿತರಿಸುವುದಾಗಿ ಜೋಯಾಲುಕ್ಕಾಸ್ ಫೌಂಡೇಶನ್ ಘೋಷಿಸಿದೆ.

ಸಾಮಾಜಿಕ ಕಲ್ಯಾಣ ಮತ್ತು ಶೈಕ್ಷಣಿಕ ಸಬಲೀಕರಣಕ್ಕೆ ತನ್ನ ನಿರಂತರ ಬದ್ಧತೆಯ ಭಾಗವಾಗಿ ಈ ಸೇವಾಕಾರ್ಯ ಹಮ್ಮಿಕೊಂಡಿದ್ದು, ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಮತ್ತು ಒಡಿಶಾ ರಾಜ್ಯಗಳ ಮಕ್ಕಳಿಗೆ ಇದರ ಪ್ರಯೋಜನ ದೊರಕಲಿದೆ. ಎಲ್‌ಕೆಜಿಯಿಂದ 4ನೇ ತರಗತಿವರೆಗಿನ ಅರ್ಹ ಪ್ರತಿಯೊಬ್ಬ ವಿದ್ಯಾರ್ಥಿಗೂ ಉತ್ತಮ ಗುಣಮಟ್ಟದ ಶಾಲಾ ಬ್ಯಾಗ್, ನೋಟ್‌ಬುಕ್‌ಗಳು, ಪೆನ್ಸಿಲ್ ಪೆಟ್ಟಿಗೆ, ಊಟದ ಬಾಕ್ಸ್, ನೀರಿನ ಬಾಟಲ್ ಮತ್ತು ಛತ್ರಿಯನ್ನು ಒಳಗೊಂಡ ಸಮಗ್ರ ಶಾಲಾ ಕಿಟ್ ಅನ್ನು ವಿತರಿಸಲಾಗುತ್ತದೆ. ನೂತನ ಶೈಕ್ಷಣಿಕ ವರ್ಷ ಆರಂಭವಾಗುತ್ತಿದ್ದಂತೆ ಆಯಾ ರಾಜ್ಯಗಳಲ್ಲಿನ ಜೋಯಾಲುಕ್ಕಾಸ್ ಶೋ ರೂಂಗಳ ಮೂಲಕ ಶಾಲಾ ಕಿಟ್‌ಗಳನ್ನು ಅರ್ಹರಿಗೆ ನೀಡಲಾಗುವುದು.

ಈ ಕಾರ್ಯಕ್ರಮವು ದೇಶದಾದ್ಯಂತ ಅಂಚಿನಲ್ಲಿರುವ ಸಮುದಾಯಗಳನ್ನು ಬೆಂಬಲಿಸುವ ಗುರಿಯನ್ನು ಹೊಂದಿರುವ ಜೋಯಾಲುಕ್ಕಾಸ್ ಫೌಂಡೇಶನ್‌ನ ವಿಶಾಲವಾದ ಸಾಮಾಜಿಕ ಸಂಪರ್ಕ ಪ್ರಯತ್ನಗಳ ಭಾಗವಾಗಿದೆ. ಈ ಮೂಲಕ, ಪ್ರತಿ ಮಗುವೂ ಆರ್ಥಿಕ ಹಿನ್ನೆಲೆ ಮೀರಿ ಶೈಕ್ಷಣಿಕ ವರ್ಷವನ್ನು ಆತ್ಮವಿಶ್ವಾಸ ಮತ್ತು ಕಲಿಕೆಯ ಅಗತ್ಯಗಳೊಂದಿಗೆ ಪ್ರಾರಂಭಿಸಬೇಕು. ಇದರಿಂದ ಪೋಷಕರಿಗೂ ಸ್ವಲ್ಪ ಪ್ರಮಾಣದ ವೆಚ್ಚ ಕಡಿಮೆ ಮಾಡಬಹುದು ಎಂಬುದು ಫೌಂಡೇಶನ್‌ನ ಆಶಯವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಜೂ.11ರಂದು ಪೂರ್ವಭಾವಿ ಸಭೆ



ಮೈಸೂರು,ಜೂ.8– ಶ್ರೀ ಕೆಂಪೇಗೌಡ ಹಾಗೂ ಡಾ॥ಫ.ಗು. ಹಳಕಟ್ಟಿಯವರ ಜನ್ಮ ದಿನ–ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಆಚರಿಸುವ ಸಂಬಂಧ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜೂ.11 ರಂದು ಸಂಜೆ 4 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣ, ಸಿದ್ದಾರ್ಥನಗರ ಇಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ನೂತನ ಪದಾಧಿಕಾರಿಗಳಿಗೆ ಅಭಿನಂದನೆ

ಮೈಸೂರು, ಜೂ.8– ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಮಾಜಿ ಮೇಯರ್ ಶಿವಕುಮಾರ್ ಹಾಗೂ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ನೇಮಕಗೊಂಡ ನಗರ ಪಾಲಿಕೆ ಮಾಜಿ ಸದಸ್ಯ ಗುರುವಿನಾಯಕ ಅವರನ್ನು ಮೈಸೂರು ನಗರ ಎಸ್‌ಟಿ ಮೋರ್ಚಾ ವತಿಯಿಂದ ಅಭಿನಂದಿಸಲಾಯಿತು.

ಈ ವೇಳೆ ಪಕ್ಷದ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಪರಿಶಿಷ್ಟ ಪಂಗಡ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಬಿಜೆಪಿ ಪಕ್ಷದ ಕೊಡುಗೆ ಶ್ಲಾಘನೀಯವಾಗಿದೆ. ಆದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ಸಮುದಾಯಕ್ಕೆ ಅನ್ಯಾಯ ಮಾಡಿದ್ದು, ಇದರ ವಿರುದ್ಧ ರಾಜ್ಯಾದ್ಯಂತ ಹೋರಾಟ ನಡೆಸಲು ಪಕ್ಷ ಸಿದ್ಧತೆ ನಡೆಸಿದೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮಾಜಿ ಮೇಯರ್ ಶಿವಕುಮಾರ್, ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಎಸ್‌ಟಿ ಸಮುದಾಯದ ಸಂಘಟನೆ ಪರ್ವ ನಡೆಸಬೇಕು. ಪ್ರಧಾನಿ ನರೇಂದ್ರ ಮೋದಿಯವರು ಕಳಂಕ ರಹಿತ ಆಡಳಿತ ನಡೆಸುತ್ತಿದ್ದಾರೆ. ಈ ಬಗ್ಗೆ ಪ್ರತಿಯೊಬ್ಬ ಭಾರತೀಯರೂ ಹೆಮ್ಮೆ ಪಡಬೇಕು. ಸಮುದಾಯದ ಜನರು ಇರುವ ಕಡೆ ಪಕ್ಷವನ್ನು ಮತ್ತಷ್ಟು ಸಂಘಟಿಸಲು ಎಲ್ಲರೂ ಒಗ್ಗೂಡಿ ಕೆಲಸ ಮಾಡೋಣ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಗರ ಪ್ರಧಾನ ಕಾರ್ಯದರ್ಶಿ ವಿ.ಸೋಮಸುಂದರ್, ನಗರ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಕೃಷ್ಣಕುಮಾರ್, ನಾಗೇಶ್, ಪ್ರಮುಖರಾದ ನಾರಾಯಣ ಲೋಲಪ್ಪ ವೀರನಗೆರೆ ಶ್ರೀನಿವಾಸ, ಜೆ.ಸಿ.ಬಿ.ರವಿ, ಮಂಜುನಾಥಪುರಂ ಕರಣಿ ಮಹೇಶ್, ಅನಿಲ್, ರಮೇಶ್, ಡಿ.ಸುನಿಲ್, ನಿಖಿಲ್, ಬಾಲರಾಜ್, ಎಸ್.ಮಹೇಶ್, ಎಸ್.ತ್ಯಾಗರಾಜ್, ಎಸ್‌ಟಿ ಮೋರ್ಚಾದ ಕೆಆರ್ ಕ್ಷೇತ್ರದ ಅಧ್ಯಕ್ಷ ನಂದೀಶ್ ನಾಯಕ, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಉದ್ಬೂರು ಉಮೇಶ್, ಹಂಚ್ಯಾ ರವಿ, ಗಂಗಾಧರ್, ಡಿ.ಪ್ರಕಾಶ್ ನಾಯಕ, ಆಟೋ ಕುಮಾರ್ ಮತ್ತಿತರರಿದ್ದರು.


ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಮಾಜಿ ಮೇಯರ್ ಶಿವಕುಮಾರ್ ಹಾಗೂ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಗುರುವಿನಾಯಕ ಅವರನ್ನು ಮೈಸೂರು ನಗರ ಎಸ್‌ಟಿ ಮೋರ್ಚಾ ವತಿಯಿಂದ ಅಭಿನಂದಿಸಲಾಯಿತು.

## ಪ್ರತಿಭಾ ಪುರಸ್ಕಾರ ನಗದು ಬಹುಮಾನ

ಮೈಸೂರು, ಜೂ.8– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ 111ನೇ ಜಯಂತಿಯನ್ನು ಸೆಪ್ಟೆಂಬರ್/ಅಕ್ಟೋಬರ್ ತಿಂಗಳಲ್ಲಿ ಪಿರಿಯಾಪಟ್ಟಣ ತಾಲೂಕು, ಬೆಟ್ಟದಪುರದ ಶ್ರೀ ಸಲೀಲಾಖ್ಯ ಮಠದಲ್ಲಿ ಏರ್ಪಡಿಸಲಾಗಿದೆ. ಆ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಗುವುದು.

2025–26ನೇ ಶೈಕ್ಷಣಿಕ ವರ್ಷದಲ್ಲಿ ಜರುಗಿದ ರಾಜ್ಯ ಹಾಗೂ ಕೇಂದ್ರೀಯ ಪಠ್ಯಕ್ರಮಗಳಲ್ಲಿ ಎಸ್‌ಎಸ್‌ಎಲ್‌ಸಿ/10ನೇ ತರಗತಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿರುವ ಪ್ರತಿಭಾವಂತ ವೀರಶೈವ ಲಿಂಗಾಯತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಜೂ.30 ರೊಳಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಜೆಎಸ್‌ಎಸ್ ಮಹಾವಿದ್ಯಾಪೀಠ ಈ ವಿಳಾಸಕ್ಕೆ ಕಳುಹಿಸಿಕೊಡಬೇಕು. ಹೆಚ್ಚಿನ ವಿವರಗಳಿಗೆ ಮೊ. 9980906762, 9449030588 ಸಂಪರ್ಕಿಸಬಹುದು.

## ಜೂ.14ರಂದು ಎಂಜಿಪಿ ಮಾಸಿಕ ಸಭೆ; ಪಾದಚಾರಿ ಮಾರ್ಗಗಳ ಅತಿಕ್ರಮಣ ಕುರಿತು ಚರ್ಚೆ

ಮೈಸೂರು,ಜೂ.8(ಪಿಎಂ)– ಮೈಸೂರು ಗ್ರಾಹಕರ ಪರಿಷತ್ತಿನ (ಎಂಜಿಪಿ) ಮಾಸಿಕ ಸಭೆ ಜೂ.14ರಂದು ನಡೆಯಲಿದ್ದು, ಸಭೆಯಲ್ಲಿ ಪಾದಚಾರಿ ಮಾರ್ಗಗಳ ಅತಿಕ್ರಮಣದಿಂದಾಗುವ ದುಷ್ಪರಿಣಾಮ ಹಾಗೂ ಅನಾಹುತಗಳ ಕುರಿತು ಚರ್ಚೆ ನಡೆಯಲಿದೆ.

ಮೈಸೂರಿನ ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿರುವ ಎಂಜಿಪಿ ಕಚೇರಿಯಲ್ಲಿ ಅಂದು ಸಂಜೆ 4ಕ್ಕೆ ಸಭೆ ನಿಗದಿಗೊಳಿಸಲಾಗಿದೆ. ಚರ್ಚೆಯನ್ನು ಮೈಸೂರು ಆರ್ಕಿಟೆಕ್ಚರ್ ಶಾಲೆಯ ಡೀನ್ ಡಾ. ಎಚ್.ಎಸ್.ಚಂಪಾ ಆರಂಭಿಸಲಿದ್ದಾರೆ. ಅವರು ವಿದ್ಯಾರ್ಥಿಗಳಿಂದ ನಡೆಯುತ್ತಿರುವ ಅಧ್ಯಯನದ ಆಧಾರದ ಮೇಲೆ ನಗರದ ಪಾದಚಾರಿ ಮಾರ್ಗಗಳ ಇತ್ತೀಚಿನ ಸ್ಥಿತಿಯ ಕುರಿತು ಮಾಹಿತಿ ಮತ್ತು ಪ್ರಾಥಮಿಕ ಶಿಫಾರಸುಗಳನ್ನು ಹಂಚಿಕೊಳ್ಳಲಿದ್ದಾರೆ. ಈ ಅಧ್ಯಯನವು ಹಲವಾರು ಆಶ್ಚರ್ಯಕರ ಸಂಗತಿಗಳನ್ನು ಬಹಿರಂಗಪಡಿಸಲಿದೆ.

ಪೊಲೀಸ್ ಇಲಾಖೆ ಮತ್ತು ಮಹಾನಗರ ಪಾಲಿಕೆಯ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಶ್ನೆಗಳನ್ನು ಕೇಳಲು ಬಯಸುವ ನಾಗರಿಕರು ತಮ್ಮ ಪ್ರಶ್ನೆಗಳನ್ನು ಮುಂಚಿತವಾಗಿ mygrapa@gmail.comಗೆ ಇಮೇಲ್ ಮಾಡಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ.: 0821–2515150 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

### ಮೂರೇ ದಿನಕ್ಕೆ ಮುಗಿದ ಏಕೈಕ ಟೆಸ್ಟ್

# ಅಫ್ಘಾನಿಸ್ತಾನ್ ವಿರುದ್ಧ ಭಾರತಕ್ಕೆ ಐತಿಹಾಸಿಕ ಗೆಲುವು

ಮುಲ್ಲನ್‌ಪುರ, ಜೂ.8(ವಿವಿಹೆಚ್)– ಇಲ್ಲಿನ ಮಹಾರಾಜ ಯದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಅಫ್ಘಾನಿಸ್ತಾನ ವಿರುದ್ಧ ನಡೆದ ಏಕೈಕ ಟೆಸ್ಟ್ ಪಂದ್ಯದಲ್ಲಿ ಟೀಂ ಇಂಡಿಯಾ ಇನ್ನಿಂಗ್ಸ್ ಹಾಗೂ 300 ರನ್‌ಗಳ ಭಾರೀ ಅಂತರದ ಗೆಲುವು ದಾಖಲಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ, ನಾಯಕ ಶುಭ್‌ಮನ್ ಗಿಲ್ 126(177) ಹಾಗೂ ಕೆ.ಎಲ್.ರಾಹುಲ್ 100(165) ಶತಕದ ನೆರವನಿಂದ 8 ವಿಕೆಟ್ ನಷ್ಟಕ್ಕೆ 564ರನ್ ಗಳಿಸಿ, ಡಿಕ್ಲೇರ್ ಪಡೆದುಕೊಂಡಿತು.

ಈ ಮೊತ್ತವನ್ನು ಬೆನ್ನತ್ತುವಲ್ಲಿ ವಿಫಲವಾದ ಅಫ್ಘಾನಿಸ್ತಾನ್, ತನ್ನ ಎರಡೂ ಇನ್ನಿಂಗ್ಸ್‌ನಲ್ಲಿ ಕೇವಲ 264 (ಮೊದಲ ಇನ್ನಿಂಗ್ಸ್ 152, 2ನೇ ಇನ್ನಿಂಗ್ಸ್ 112)ರನ್ ಗಳಿಸಲಷ್ಟೆ ಶಕ್ತವಾಗಿ ಸೋಲೊಪ್ಪಿಕೊಂಡಿತು. ಟೀಂ ಇಂಡಿಯಾ ಪರ ಚೊಚ್ಚಲ ಪಂದ್ಯ ಆಡಿದ ಸ್ಪಿನ್ನರ್ ಮಾನವ್ ಸುತಾರ್ (33ಕ್ಕೆ 6) ಬೌಲಿಂಗ್ ದಾಳಿಗೆ ಅಫ್ಘನ್ ಪಡೆ ತತ್ತರಿಸಿ, ತನ್ನ ಮೊದಲ ಇನಿಂಗ್ಸ್‌ನಲ್ಲಿ 152 ರನ್‌ಗಳಿಗೆ ಆಲೌಟ್ ಆಯಿತು. ಇದರೊಂದಿಗೆ 412 ರನ್‌ಗಳ ಹಿನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ಅಫ್ಘನ್, ವಾಷಿಂಗ್ಟನ್ ಸುಂದರ್ ಹಾಗೂ ಕುಲ್ದೀಪ್ ಯಾದವ್ ಬೌಲಿಂಗ್ ದಾಳಿಗೆ ನಲುಗಿ, ಕೇವಲ 35.5 ಓವರ್‌ಗಳಲ್ಲಿಯೇ ಸರ್ವಪತನ ಕಂಡು 112 ರನ್ ಗಳಿಸಿ 300 ರನ್‌ಗಳ ಹೀನಾಯ ಸೋಲು ಅನುಭವಿಸಿತು.

ಭಾರತ ತನ್ನ ಮೊದಲ ಇನಿಂಗ್ಸ್ ಅನ್ನು 564/8 ರನ್‌ಗಳಿಗೆ ಡಿಕ್ಲೇರ್ ಮಾಡಿಕೊಂಡು, ಮೂರನೇ ದಿನದಾಟದಲ್ಲಿ ಪ್ರವಾಸಿ ತಂಡವನ್ನು ಎರಡು ಬಾರಿ ಆಲೌಟ್ ಮಾಡಿದ ಟೀಂ ಇಂಡಿಯಾ ಐತಿಹಾಸಿಕ ದಾಖಲೆ ಬರೆಯಿತು.

ಭಾರತದ ಪರ ಅತ್ಯುತ್ತಮ ಬೌಲರ್ ದಾಳಿ ನಡೆಸಿದ ಮಾನವ್ ಸುತಾರ್ ಮೊದಲ ಇನಿಂಗ್ಸ್‌ನಲ್ಲಿ 33 ರನ್ ನೀಡಿ 6 ವಿಕೆಟ್ ಪಡೆದು ಮಿಂಚಿದರು. ಪ್ರಸಿದ್ಧ ಕೃಷ್ಣ ಕೂಡ 3 ವಿಕೆಟ್ ಪಡೆದುಕೊಂಡರು. ಎರಡನೇ ಇನಿಂಗ್ಸ್‌ನಲ್ಲಿ ವಾಷಿಂಗ್ಟನ್ ಸುಂದರ್ 4 ವಿಕೆಟ್ ಹಾಗೂ ಕುಲದೀಪ ಯಾದವ್ 3 ವಿಕೆಟ್ ಪಡೆಯುವ ಮೂಲಕ ತಂಡಕ್ಕೆ ಸುಲಭದ ಗೆಲುವು ತಂದುಕೊಟ್ಟರು.

ಪಂದ್ಯದಲ್ಲಿ ಉತ್ತಮ ಪ್ರದರ್ಶನ ತೋರಿದ ಮಾನವ್ ಸುತಾರ್ ಚೊಚ್ಚಲ ಪಂದ್ಯದಲ್ಲಿಯೇ ಪಂದ್ಯಶ್ರೇಷ್ಠ ಪಡೆದು ಗಮನ ಸೆಳೆದರು.



ಟ್ರೋಫಿಯೊಂದಿಗೆ ಟೀಂ ಇಂಡಿಯಾ ಆಟಗಾರರ ಸಂಭ್ರಮ.

### ದಾಖಲೆ ಗೆಲುವು

ಇಂದು ಟೀಂ ಇಂಡಿಯಾಗೆ ಸಿಕ್ಕ ಈ ಗೆಲುವು ಭಾರತದ 93 ವರ್ಷಗಳ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಸಿಕ್ಕ ಅತೀ ದೊಡ್ಡ ಗೆಲುವಾಗಿದೆ. 2018 ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಭಾರತ ಇನ್ನಿಂಗ್ಸ್ ಮತ್ತು 272 ರನ್‌ಗಳಿಂದ ಗೆಲುವು ಸಾಧಿಸಿತ್ತು. ಇದು ಈವರೆಗಿನ ದಾಖಲೆ ಯಾಗಿತ್ತು. ಇಂದು ನಡೆದ ಪಂದ್ಯದಲ್ಲಿ ಅಫ್ಘಾನಿಸ್ತಾನ ವಿರುದ್ಧ ಇನ್ನಿಂಗ್ಸ್ ಮತ್ತು 300 ರನ್‌ಗಳ ಭಾರೀ ಗೆಲುವು ದಾಖಲಿಸುವ ಮೂಲಕ ತನ್ನದೇ ಹಿಂದಿನ ದಾಖಲೆ ಮುರಿದಿದೆ.

### ಸಂಕ್ಷಿಪ್ತ ಸ್ಕೋರ್

**ಟೀಂ ಇಂಡಿಯಾ ಮೊದಲ ಇನಿಂಗ್ಸ್:** **564/8:** (ಶುಭಮನ್ ಗಿಲ್ 126 (177) ಕೆ.ಎಲ್.ರಾಹುಲ್ 100(165), ಸಾಯ್ ಸುದರ್ಶನ್ 81 (104), ಮೊಹಮ್ಮದ್ ಸಲೀಮ್ ಸಫಿ 140ಕ್ಕೆ6)

**ಅಫ್ಘಾನಿಸ್ತಾನ ಮೊದಲ ಇನಿಂಗ್ಸ್** **152/10:** (ರಹಮತ್ ಶಾ 60 (135), ಹಶ್ಮತುಲ್ಲಾ ಶಾಹಿದಿ 20 (48), ಮಾನವ್ ಸುತಾರ್ 33ಕ್ಕೆ6, ಪ್ರಸಿದ್ಧ ಕೃಷ್ಣ 37ಕ್ಕೆ3, ವಾಷಿಂಗ್ಟನ್ ಸುಂದರ್ 21ಕ್ಕೆ1)

**ಅಫ್ಘಾನಿಸ್ತಾನ ಎರಡನೇ ಇನ್ನಿಂಗ್ಸ್** **112/10:** (ಸೇದಿಖುಲ್ಲಾ ಅಟಲ್ 42, ರಹಮಾನಲ್ಲಾ ಗುರ್ಬಾಜ್ 24: ವಾಷಿಂಗ್ಟನ್ ಸುಂದರ್ 4/36 ಹಾಗೂ ಕುಲದೀಪ್ ಯಾದವ್ 3/30).

ಮೈಸೂರು ಮಿತ್ರ ಮಂಗಳವಾರ 9 ಜೂನ್ 2026

ತಾಲೂಕು ಆಡಳಿತದ ರೈತ ವಿರೋಧಿ ನೀತಿ ಖಂಡಿಸಿ

# ನಂ.ಗೂಡಲ್ಲಿ ರೈತ ಸಂಘದಿಂದ ಬಾರುಕೋಲು ಚಳುವಳಿ



ರೈತ ಸಂಘದ ಕಾರ್ಯಕರ್ತರು ಬಾರುಕೋಲು ಚಳುವಳಿ ನಡೆಸಿದರು.

ನಂಜನಗೂಡು, ಜೂ.8– ತಾಲೂಕಿನ ಹಳ್ಳಿಗಳಿಗೆ ಸಮಗ್ರ ನೀರಾವರಿ ಯೋಜನೆಗೆ ಒತ್ತಾಯಿಸಿ ಹಾಗೂ ತಾಲೂಕು ಆಡಳಿತದ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಸೋಮವಾರ ನಗರದ ತಾಲೂಕು ಕಚೇರಿ ಎದುರು ಬೃಹತ್ ಬಾರುಕೋಲು ಚಳುವಳಿ ನಡೆಸಿ, ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಯಿತು.

ದಲಿತ ಸಂಘಟನೆ, ಛಲವಾದಿ ಮಹಾಸಭಾ, ಜನಸಂಗ್ರಾಮ ಪರಿಷತ್ ಹಾಗೂ ಕೆಆರ್‌ಎಸ್ ಪಕ್ಷದ ಬೆಂಬಲದೊಂದಿಗೆ ಆಯೋಜಿಸಿದ್ದ ಬಾರುಕೋಲು ಚಳುವಳಿಯಲ್ಲಿ ರೈತ ಸಂಘದ ಕಾರ್ಯಕರ್ತರು ನಗರದ ಖಾಸಗಿ ಬಸ್ ನಿಲ್ದಾಣದ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಅಲ್ಲಿಂದ ಎಂಜಿಎಸ್ ರಸ್ತೆ ಮೂಲಕ ಪಾದಯಾತ್ರೆ ಮೂಲಕ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಬಳಿಕ ಅನಿರ್ದಿಷ್ಟಾವಧಿ ಪ್ರತಿಭಟನೆಗೆ ಮುಂದಾದರು.

ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ಮಾತನಾಡಿ, ನಂಜನಗೂಡು ತಾಲೂಕು ಕಚೇರಿಯಲ್ಲಿ ಲಂಚಾವತಾರ ತಾಂಡವವಾಡುತ್ತಿದೆ. ಹಣಬಾಕ ಅಧಿಕಾರಿಗಳ ವಿರುದ್ಧ ಅನ್ನದಾತರು ಸಿಡಿದೆದ್ದಿದ್ದಾರೆ. ರೈತರ ಸಮಸ್ಯೆಗಳ ಬಗ್ಗೆ ಉದಾಸೀನ ತೋರುವ ಅಧಿಕಾರಿಗಳ ಧೋರಣೆ ಖಂಡಿಸಿ ಬಾರುಕೋಲು ಚಳವಳಿ ಹಮ್ಮಿಕೊಳ್ಳಲಾಗಿದೆ. ರೈತರ ಕೃಷಿ ಭೂಮಿಗೆ ಸಂಬಂಧಿಸಿದಂತೆ ಯಾವುದೇ ಕೆಲಸ ಕಾರ್ಯಗಳು ನಡೆಯಬೇಕಾದರೆ ಅಧಿಕಾರಿಗಳಿಗೆ ಲಂಚ ನೀಡಬೇಕು. ಜಮೀನಿನ ದಾಖಲಾತಿಗಳು, ವಂಶವೃಕ್ಷ, ಜನನ ಮತ್ತು ಮರಣ ದೃಢೀಕರಣ ಸೇರಿದಂತೆ ಇತರೆ ದಾಖಲಾತಿಗಳನ್ನು ಪಡೆಯಲು ಲಂಚದ ಹಣ ನೀಡದಿದ್ದರೆ ಕೆಲಸ ನಡೆಯುವುದಿಲ್ಲ. ಆದ್ದರಿಂದ ರೈತರ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯಬೇಕಿದ್ದರೆ ಸಾಕಷ್ಟು ವರ್ಷಗಳಿಂದ ಒಂದೇ ಸ್ಥಳದಲ್ಲಿ ನೆಲೆಯೂರಿರುವ ಅಧಿಕಾರಿಗಳನ್ನು ಎತ್ತಂಗಡಿ ಮಾಡಬೇಕು. ತಾಲೂಕಿನಲ್ಲಿ ರೈತರು ಹೋರಾಟದ ಮೂಲಕ ಶಾಸಕರನ್ನು ಹಳ್ಳಿಗಳಿಗೆ ಪ್ರವೇಶಿಸದಂತೆ ತಡೆಯೊಡ್ಡಿರುವ ನಿದರ್ಶನಗಳಿದ್ದು, ಚುನಾಯಿತ ಜನಪ್ರತಿನಿಧಿಗಳು ರೈತರನ್ನು ಲಘುವಾಗಿ ಪರಿಗಣಿಸಿದಲ್ಲಿ ಮುಂಬರುವ ದಿನಗಳಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ. ಅಲ್ಲದೇ ಸ್ಥಳಕ್ಕೆ ಜಿಲ್ಲಾಧಿಕಾರಿ, ಶಾಸಕರು ಆಗಮಿಸಿ ರೈತರ ಬೇಡಿಕೆ ಈಡೇರಿಕೆಗೆ ಸಂಬಂಧಿಸಿದಂತೆ ಸ್ಪಷ್ಟ ನಿಲುವು ಪ್ರಕಟಿಸುವವರೆಗೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಸತೀಶ್ ರಾವ್, ರಾಜ್ಯ ಉಪಾಧ್ಯಕ್ಷ ಇಮ್ಮಾವು ರಘು, ತಾಲೂಕು ಅಧ್ಯಕ್ಷ ಸೂರಳ್ಳಿ ಮಹಾದೇವ ನಾಯಕ, ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ಅಭಿ ನಾಗಭೂಷಣ್, ಜನ ಸಂಗ್ರಾಮ ಪರಿಷತ್ ಗೌರವಾಧ್ಯಕ್ಷ ನಗರ್ಲೆ ವಿಜಯ್ ಕುಮಾರ್, ರಾಮಕೃಷ್ಣ ಕಳ್ಳಿಪುರ ಮಹದೇವಸ್ವಾಮಿ, ಆಲಗೂಡು ಮಹದೇವ, ಶಂಕರ ನಾಯಕ, ದೊಡ್ಡಯ್ಯ, ಶ್ವೇತ, ಸವಿತ, ದೇವರಾಜ್, ಶಿವಕುಮಾರ್, ಮಹದೇವಸ್ವಾಮಿ ಸೇರಿದಂತೆ 800ಕ್ಕೂ ಹೆಚ್ಚು ಮಂದಿ ಪ್ರತಿಭಟನಾಕಾರರು ಭಾಗವಹಿಸಿದ್ದರು.

### ಮುಂದುವರಿದ ರೈತರ ಹೋರಾಟ

**ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಶ್ವೇತಾ ರಾಮು ಪ್ರತಿಭಟನಾಕಾರರೊಂದಿಗೆ ಮಾತನಾಡಿ ತಾಲೂಕು ಕಚೇರಿಯಲ್ಲಿ ಬಹುತೇಕ ಎಲ್ಲಾ ಕೆಲಸ ಕಾರ್ಯಗಳು ಆನ್‌ಲೈನ್ ಮೂಲಕ ನಡೆಯುತ್ತಿದ್ದು, ಅನಗತ್ಯವಾಗಿ ಯಾವುದೇ ಅರ್ಜಿಗಳನ್ನು ವಿಳಂಬವಾಗಿ ವಿಲೇವಾರಿ ಮಾಡುತ್ತಿಲ್ಲ. ಇನ್ನು ರೈತರ ಬೇಡಿಕೆಗಳನ್ನು ಇಲಾಖೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಆದ್ಯತೆ ಮೇರೆಗೆ ಬಗೆಹರಿಸುವುದಾಗಿ ಭರವಸೆ ನೀಡಿದರಾದರೂ, ಪ್ರತಿಭಟನಾನಿರತ ರೈತರು ಹೋರಾಟ ಮುಂದುವರೆಸಿದರು.**

## ಸರಗೂರಲ್ಲಿ ಶಾಲಾ ದಾಖಲಾತಿ ಆಂದೋಲನ



ಸರಗೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆ ವತಿಯಿಂದ ಜಾಥಾ ನಡೆಯಿತು.

ಸರಗೂರು, ಜೂ.8– ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆ ವತಿಯಿಂದ ಶಾಲಾ ದಾಖಲಾತಿ ಆಂದೋಲನ ನಡೆಯಿತು.

ಮುಖ್ಯ ಶಿಕ್ಷಕ ಹೆಚ್.ಎನ್.ನಿಂಗರಾಜು ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಲವು ಉಚಿತ ಸೌಲಭ್ಯಗಳು ಸಿಗಲಿದೆ. ಶಾಲಾ ಮಕ್ಕಳಿಗೆ ಪೌಷ್ಟಿಕಾಂಶ ಒದಗಿಸಲು ನಿತ್ಯ ಹಾಲು, ಮಧ್ಯಾಹ್ನ ಬಿಸಿ ಯೂಟ, ಉಚಿತ ಪಠ್ಯಪುಸ್ತಕಗಳು, ನೋಟ್ ಬುಕ್‌ಗಳು, ಉಚಿತ ಶಾಲಾ ಬ್ಯಾಗ್, ಸಮವಸ್ತ್ರ, ಶೂ, ಉಚಿತ ಬಸ್ ಪಾಸ್, ವಿದ್ಯಾರ್ಥಿ ವೇತನ ವಿವಿಧ ಜಾತಿ/ವರ್ಗದ (SC/ST/OBC) ವಿದ್ಯಾರ್ಥಿಗಳಿಗೆ ಸರ್ಕಾರದಿಂದ ವಿಶೇಷ ವಿದ್ಯಾರ್ಥಿ ವೇತನ, ಹೆಚ್ಚು ಅಂಕಗಳಿಸಿದವರಿಗೆ ಬಹುಮಾನ, ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, ಶೇ.100 ಫಲಿತಾಂಶ ಪಡೆಯುವ ಶಾಲೆಗಳಿಗೆ ಮತ್ತು ಉತ್ತಮ ಸಾಧನೆ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಆರೋಗ್ಯ, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ನಿಯಮಿತ ಉಚಿತ ಆರೋಗ್ಯ ತಪಾಸಣೆ. ಹೆಣ್ಣು ಮಕ್ಕಳಿಗೆ ಉಚಿತ ಸ್ಯಾನಿಟರಿ ನ್ಯಾಪ್‌ಕಿನ್ ವಿತರಣೆ. ಕುಡಿಯುವ ನೀರು, ಪ್ರತ್ಯೇಕ ಶೌಚಾಲಯ, ವಿಶಾಲವಾದ ಆಟದ ಮೈದಾನ, ಗಣಕಯಂತ್ರ ಶಿಕ್ಷಣ, ಗ್ರಂಥಾಲಯ ಮತ್ತು ಕ್ರೀಡಾ ಪರಿಕರಗಳು. ಪ್ರತಿಭಾ ಕಾರಂಜಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದರು.

ಈ ವೇಳೆ ಆಯೋಜಿಸಿದ್ದ ಜಾಥಾವನ್ನು ಎಸ್‌ಡಿಎಂಸಿ ಅಧ್ಯಕ್ಷ ಸಣ್ಣಸ್ವಾಮಿ ಉದ್ಘಾಟಿಸಿದರು. ಉಪಾಧ್ಯಕ್ಷ ಶಿವರುದ್ರ, ಸಹ ಶಿಕ್ಷಕಿಯರಾದ ಸವಿತಾ, ಮಮತಾ, ಶಿಕ್ಷಕ, ಶಿಕ್ಷಕಿಯರು, ಮಕ್ಕಳು ಇದ್ದರು.

## ಕಬಿನಿ ಹಿನ್ನೀರಿನಲ್ಲಿ ಮುಳುಗಿದ ಕಾರು!



ಹೆಚ್.ಡಿ.ಕೋಟೆ, ಜೂ.8– ತಾಲೂಕಿನ ಉದ್ಬೂರು ಸಮೀಪ ಕಬಿನಿ ಹಿನ್ನಿರಿನಲ್ಲಿ ಪ್ರವಾಸಿಗರ ಕಾರೊಂದು ಮುಳುಗಿದ ಘಟನೆ ಸೋಮವಾರ ಸಂಜೆ ನಡೆದಿದ್ದು, ಕಾರಿನೊಳಗೆ ಯಾರು ಇಲ್ಲದ ಕಾರಣ ಅನಾಹುತ ತಪ್ಪಿದೆ.


ದಡದ ಇಳಿಜಾರಿನಲ್ಲಿ ನಿಲುಗಡೆ ಮಾಡಿದ್ದ ಕಾರು ಹಿನ್ನೀರಿಗೆ ಮುಳುಗಿದ್ದರಿಂದ ಕೆಲಕಾಲ ಆತಂಕ ಸೃಷ್ಟಿಸಿತ್ತು. ಆದರೆ ಕಾರಿನಲ್ಲಿ ಯಾರೂ ಇಲ್ಲ ಎಂಬುದು ತಿಳಿಯುತ್ತಿದ್ದಂತೆ ನೆರೆದಿದ್ದವರು ನಿಟ್ಟುಸಿರು ಬಿಟ್ಟರು.

ಕಬಿನಿ ಹಿನ್ನೀರು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಅತಿ ಹೆಚ್ಚು ಪ್ರವಾಸಿಗರು ಇಲ್ಲಿಗೆ ಕುಟುಂಬ ಸಮೇತ ಭೇಟಿ ನೀಡುತ್ತಿದ್ದಾರೆ. ಜೊತೆಗೆ ಇಲ್ಲಿಗೆ ಬರುವ ಯುವಕರು ಮದ್ಯ ಹಾಗೂ ಪ್ಲಾಸ್ಟಿಕ್ ಬಾಟಲಿಗಳನ್ನು ನದಿಗೆ ಎಸೆದು ಹೋಗುತ್ತಿದ್ದು, ಸಂಬಂಧಿಸಿದ ಅಧಿಕಾರಿಗಳು ಇಂತಹ ಚಟುವಟಿಕೆಗೆ ಕಡಿವಾಣ ಹಾಕಬೇಕು. ಜೊತೆಗೆ ಪ್ರವಾಸಿಗರ ಸುರಕ್ಷತೆಗೆ ಆದ್ಯತೆ ನೀಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅಂತರಸಂತೆ ಎಸ್‌ಐ ಚಂದ್ರಹಾಸ್, ಹಿನ್ನೀರಿನಲ್ಲಿ ಕಾರು ಮುಳುಗಿರುವ ಘಟನೆ ತಿಳಿದು ತಕ್ಷಣ ಸ್ಥಳ ಭೇಟಿ ನೀಡಿದ್ದು, ಸದ್ಯ ಕಾರಿನಲ್ಲಿ ಯಾರೂ ಇರಲಿಲ್ಲ. ಹಾಗಾಗಿ ಯಾವುದೇ ಅನಾಹುತ ಸಂಭವಿಸಿಲ್ಲ. ನೀರಿನಲ್ಲಿ ಮುಳುಗಿದ್ದ ಕಾರನ್ನು ಕ್ರೇನ್ ಮೂಲಕ ಹೊರ ತೆಗೆಸಲಾಯಿತು. ಈ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಿದ್ದೇವೆ ಎಂದು ತಿಳಿಸಿದರು.

## ಪರಿಶ್ರಮದಿಂದ ಗುರಿಯತ್ತ ಸಾಗಿದರೆ ಅಸಾಧ್ಯವನ್ನು ಸಾಧಿಸಬಹುದು

ಯುವಕರಿಗೆ ಮಾಜಿ ಮೇಯರ್ ಅನಂತು ಸಲಹೆ



ರಾಜ್ಯ ಗಾಣಿಗ ಅಭಿವೃದ್ಧಿ ನಿಗಮ ಮಂಡಳಿ ಅಧ್ಯಕ್ಷ ಅನಂತು ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜೂ.8– ಯುವಕರು ಶ್ರದ್ಧೆ, ಛಲ, ಪರಿಶ್ರಮದಿಂದ ಗುರಿಯತ್ತ ಸಾಗಿದರೆ ಅಸಾಧ್ಯವಾದುದ್ದನ್ನು ಸಾಧಿಸಬಹುದು ಎಂದು ಕರ್ನಾಟಕ ರಾಜ್ಯ ಗಾಣಿಗರ ನಿಗಮ ಮಂಡಳಿ ಅಧ್ಯಕ್ಷ ಹಾಗೂ ಮಾಜಿ ಮೇಯರ್ ಅನಂತು ಅಭಿಪ್ರಾಯಪಟ್ಟರು.

ತಾಲೂಕಿನ ಕೈಯಂಬಳ್ಳಿಯಲ್ಲಿ ಗಾಣಿಗರ ಯುವಕರ ಸಂಘದಿಂದ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಯುವಕರು ವಿದ್ಯಾರ್ಥಿ ದೆಸೆಯಲ್ಲಿ ಏಕಾಗ್ರತೆಯಿಂದ ಗುರಿಯತ್ತ ಸಾಗಿದರೇ ಏನನ್ನಾದರೂ ಸಾಧಿಸಬಹುದು. ಪರಿಶ್ರಮ ಪಟ್ಟು ಗುರಿ ಎಡೆಗೆ ಸಾಗಲು ಛಲ ಒಂದಿದ್ದರೆ ಸಾಧಕರಾಗಬಹುದು ಎಂದರು.

ಶಿಕ್ಷಣ ಇಂದು ಸ್ಪರ್ಧಾತ್ಮಕವಾಗಿದ್ದು, ಉದ್ಯೋಗ ಕೇಂದ್ರಿಕೃತವಾಗುತ್ತಿದೆ. ಪರಿಶ್ರಮವೇ ವಿದ್ಯಾರ್ಥಿ ಯಶಸ್ಸಿನ ಗುಟ್ಟಾಗಿದೆ ಎಂದ ಅವರು ನನಗೆ ಏನನ್ನಾದರೂ ಸಾಧಿಸಬೇಕೆಂಬ ಛಲ ಇತ್ತು. ಇದಕ್ಕೆ ಪೂರಕವಾಗಿ ನನ್ನ ತಂದೆ ತಾಯಿ, ಗುರುಗಳು ಮಾರ್ಗದರ್ಶನ ನೀಡಿದರು. ಅದು ಇಂದು ಸಾರ್ಥಕವಾಗಿದೆ ಎಂದರು.

ಈ ವೇಳೆ ಗಾಣಿಗರ ಸಮುದಾಯದ ವಿದ್ಯಾಭ್ಯಾಸ ಮತ್ತು ಸಮುದಾಯ ಭವನದ ಅಭಿವೃದ್ಧಿಗಾಗಿ ಶಕ್ತಿಮೀರಿ ಅನುದಾನ ಕೊಡಿಸುವುದಾಗಿ ಭರವಸೆ ನೀಡಿದರು.

ಜಿಲ್ಲಾ ಗಾಣಿಗರ ಸಂಘದ ಅಧ್ಯಕ್ಷ ಉಮೇಶ್ ಮಾತನಾಡಿ, ಗಾಣಿಗ ಸಮುದಾಯ ರಾಜಕೀಯ ಅಧಿಕಾರ ಪಡೆಯಲು ಒಗ್ಗಟ್ಟು ಪ್ರದರ್ಶಿಸಬೇಕು. ರಾಜಕೀಯ ಅಧಿಕಾರ ಇದ್ದರೆ ಮಾತ್ರ ನಮ್ಮ ಸಮುದಾಯ ಯಶಸ್ಸು ಕಾಣಲು ಸಾಧ್ಯ. ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ಸಂಸ್ಕಾರ ಕಲಿಸುವ ಮೂಲಕ ಉನ್ನತ ಶಿಕ್ಷಣ ಕೊಡಿಸಬೇಕು ಎಂದರು.

ಈ ವೇಳೆ ಕೈಯಂಬಳ್ಳಿ ಗ್ರಾಮದ ನಿವೃತ್ತ ಬೆಸ್ಕಾಂ ಅಧಿಕಾರಿ ಮಹದೇವಪ್ಪ ಗ್ರಾಮದ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಿಸಿ, ಸಂಘದ ವತಿಯಿಂದ ಪುಸ್ತಕ ವಿತರಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ಮಾಜಿ ಕಾರ್ಪೊರೇಟರ್ ಎಸ್.ಎಂ.ನಂದಕುಮಾರ್, ತಾಲೂಕು ಗಾಣಿಗ ಸಂಘದ ಅಧ್ಯಕ್ಷ ಆಲಗೂಡು ರಾಮಚಂದ್ರ, ನಿವೃತ್ತ ಶಿಕ್ಷಕ ಮಹದೇವಪ್ಪ ಮುಖಂಡರಾದ ಬನ್ನೂರು ಮಹದೇವಸ್ವಾಮಿ, ಶಿವರಾಜು, ವೆಂಕಟರಮಣ ಶೆಟ್ಟಿ, ಎ.ಸಿ.ಪೂರ್ಣಚಂದ್ರ, ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಯಜಮಾನರು ಹಾಗೂ ಗಾಮಸ್ಥರು ಇತರರಿದ್ದರು.

## ಮುಖ್ಯಮಂತ್ರಿ ಡಿಕೆಶಿಗೆ ಬೆಳ್ಳಿ ಕಡಗ ತೊಡಿಸಿ ಸನ್ಮಾನ



ಬೆಂಗಳೂರಿನ ಕುಮಾರಕೃಪ ಅತಿಥಿ ಗೃಹದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಬೆಳ್ಳಿ ಕಡಗ ತೊಡಿಸಿ ಸನ್ಮಾನಿಸಿದರು.

ಗಾಣಿಗ ಸಮಾಜದ ವಿದ್ಯಾರ್ಥಿಗಳಿಂದ

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ, ಜೂ.8– ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕ ಪಡೆದ ತಾಲೂಕಿನ ಗಾಣಿಗ ಸಮಾಜದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ರಾಮಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಹ ವಿದ್ಯಾರ್ಥಿಗಳು ಅರ್ಜಿ ಜೊತೆಗೆ ಭಾವಚಿತ್ರ, ಅಂಕಪಟ್ಟಿ, ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯೊಂದಿಗೆ ಜೂ.30ರೊಳಗೆ ತಿ.ನರಸೀಪುರ ತಾಲೂಕು ಗಾಣಿಗರ ಸಂಘ (ರಿ) ಸೋಸಲೆ, ನಂ.35 ಜ್ಯೋತಿ ನಿಲಯ, ದಳವಾಯಿ ಆಗ್ರಹಾರ, ತಿ.ನರಸೀಪುರ ಟೌನ್ ವಿಳಾಸಕ್ಕೆ ತಲುಪಿಸುವಂತೆ ಪ್ರಕಟಣೆ ತಿಳಿಸಿದೆ. ಮಾಹಿತಿಗೆ ಕಾರ್ಯದರ್ಶಿ ಆರ್.ರಾಮ 9945382936, 9916621138 ಸಂಪರ್ಕಿಸಿ.

## ಪ್ರಧಾನಿಯಾಗಿ ಮೋದಿ 12 ವರ್ಷ: ಸಿಹಿ ವಿತರಣೆ



ನರೇಂದ್ರ ಮೋದಿ ಅವರು ಪ್ರಧಾನಿಯಾಗಿ 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಬಿಜೆಪಿ ವತಿಯಿಂದ ಕಂಪಲಾಪುರ ಆರೋಗ್ಯ ಕೇಂದ್ರದ ಆವರಣದಲ್ಲಿ ಸ್ವಚ್ಛತಾ ಕಾರ್ಯ ನಡೆಸಿ ಸಿಹಿ ವಿತರಿಸಲಾಯಿತು. ಕಾರ್ಯಕ್ರಮದ ಸಂಚಾಲಕ ಜಿ.ಸಿ.ವಿಕ್ರಮ್ ರಾಜ್, ಮಹಾಶಕ್ತಿ ಕೇಂದ್ರದ ತಾಲೂಕು ಅಧ್ಯಕ್ಷ ಶರವಣ, ಉಪಾಧ್ಯಕ್ಷ ಮಂಜು, ವೈದ್ಯಾಧಿಕಾರಿ ಡಾ.ಪ್ರಸನ್ನ ಕುಮಾರ್, ಹಿರಿಯ ಶುಶ್ರೂಷಕಿ ಸುವರ್ಣ, ಮುಖಂಡ ಪ್ರಸನ್ನ, ನರಸೇಗೌಡ, ಗಣೇಶ್, ಹರೀಶ್ ಮತ್ತಿತರರಿದ್ದರು.

## ಪ್ರಗತಿಪರ ಸಂಘಟನೆಗಳಿಂದ ಸೂರಜ್ ಹೆಗ್ಡೆಗೆ ಶ್ರದ್ಧಾಂಜಲಿ



ಹುಣಸೂರಲ್ಲಿ ಸೂರಜ್ ಹೆಗ್ಡೆ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹುಣಸೂರು, ಜೂ.8– ಸಾಮಾಜಿಕ ನ್ಯಾಯದ ಹರಿಕಾರ, ಮಾಜಿ ಸಿಎಂ ಡಿ.ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಡೆ ಅವರು ನಿಧನರಾದ ಹಿನ್ನೆಲೆಯಲ್ಲಿ ಅವರಿಗೆ ತಾಲೂಕಿನ ಪ್ರಗತಿಪರ ಸಂಘಟನೆಗಳ ವತಿಯಿಂದ ಸೋಮವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ತಾಪಂ ಸಭಾಗಂಣದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ಡಿ.ದೇವರಾಜ ಅರಸು ಅವರ ವಂಶಸ್ಥರಾದ ಸೂರಜ್ ಹೆಗ್ಡೆ ಅವರ ನಿಧನಕ್ಕೆ ಸಂತಾಪ ಸೂಚಿಸಿ ಅವರ ಸರಳತೆಯ ಬಗ್ಗೆ ಗುಣಗಾನ ಮಾಡಿದರು. ಅವರ ತಾತ ಅರಸು ಅವರ ಸಾಮಾಜಿಕ ಬದ್ಧತೆ ಇವರಲ್ಲಿಯೂ ಇತ್ತು. ಆದರೆ ಸೂರಜ್ ಹೆಗ್ಡೆಯವರು ರಾಜಕೀಯವಾಗಿ ಮುಂದೆ ಬಾರದೇ ಎಲೆಮರೆ ಕಾಯಿಯಂತೆ ಬದುಕುತ್ತಿದ್ದರು. ಅಲ್ಲದೇ ಯಾವುದೇ ರಾಜಕೀಯ ಪಕ್ಷಗಳು ಅವಕಾಶ ಕಲ್ಪಿಸಿ ಕೊಡದೆ ಇರುವುದು ಅತ್ಯಂತ ನೋವಿನ ಸಂಗತಿ ಎಂದ ಅವರು ಸೂರಜ್ ಹೆಗ್ಡೆ ಅವರು ರೈತರು, ತಾಲೂಕಿನ ಜನರ ಬಗ್ಗೆ ಅಪಾರ ಪ್ರೀತಿ ಇಟ್ಟುಕೊಂಡಿದ್ದರು. ಅವರ ನಿಧನ ಅತ್ಯಂತ ನೋವಿನ ವಿಚಾರವಾಗಿದ್ದು, ಭಗವಂತ ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದರು.

ದಸಂಸ ರಾಜ್ಯ ಸಂಘಟನಾ ಸಂಚಾಲಕ ನಿಂಗರಾಜ್ ಮಲ್ಲಾಡಿ ಮಾತನಾಡಿ, ಸಾಮಾಜಿಕ ನ್ಯಾಯದ ಹರಿಕಾರ ಡಿ. ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಡೆ ನಿಧನಕ್ಕೆ ದಸಂಸ ಸಂತಾಪ ಸೂಚಿಸುತ್ತದೆ. ಅರಸು ಅವರು ದೀನ ದಲಿತರು, ನೊಂದ ಜನರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಅವರಂತೆ ಸೂರಜ್ ಹೆಗ್ಡೆಯವರು ಸಹ ಸರಳತೆ ಹೊಂದಿದ್ದು, ಇವರಿಗೆ ಸಮಾಜದಲ್ಲಿ ಹೇಳಿಕೊಳ್ಳದಷ್ಟು ಅವಕಾಶಗಳು ಸಿಗದೆ ದೂರ ಉಳಿದಿದ್ದು ನೋವಿನ ಸಂಗತಿಯಾಗಿದೆ ಎಂದರು.

ಸೂರಜ್ ಹೆಗ್ಡೆ ಒಡನಾಡಿ ವಿನೋಬಾ ಗಣೇಶ್ ಮಾತನಾಡಿ, ಸೂರಜ್ ಸಾವು ತಾಲೂಕಿನ ಜನತೆಗೆ ತುಂಬಲಾರದ ನಷ್ಟವಾಗಿದ್ದು, ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ಭಗವಂತ ಕೊಡಲಿ ಎಂದರು.

ಸಭೆಯಲ್ಲಿ ದಸಂಸದ ಕೆಂಪರಾಜು, ಗಜೇಂದ್ರ, ಮಹದೇವ, ಅಬ್ದುಲ್ ಮಾಲೀಕ್, ರಾಜು, ಸಿದ್ದರಾಜು, ಪ್ರಕಾಶ್ ಎಂ.ಆರ್, ನಾಗರಾಜೇಗೌಡ, ರಾಜ್ಯ ರೈತ ಸಂಘದ ಧನಂಜಯ, ಮಾದಯ್ಯ, ಬಸವರಾಜೇ ಗೌಡ, ಸೋಮಶೇಖರ್, ಮಾದೇಗೌಡ, ಅಂಬೇಡ್ಕರ್ ನಗರದ ದಾಸಪ್ಪ, ಶೋಭಮ್ಮ ಇತರರಿದ್ದರು.

## ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ನೇಮಕ: ವಿಶೇಷ ಪೂಜೆ



ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ನೇಮಕ ಹಿನ್ನೆಲೆಯಲ್ಲಿ ಅಭಿಮಾನಿಗಳು ಶ್ರೀಕಂಠೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು.

ನಂಜನಗೂಡು, ಜೂ.8– ಕೆಪಿಸಿಸಿ ನೂತನ ಅಧ್ಯಕ್ಷರಾಗಿ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ನೇಮಕಗೊಂಡ ಹಿನ್ನೆಲೆಯಲ್ಲಿ ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಹರಿಪ್ರಸಾದ್ ಅಭಿಮಾನಿಗಳು ಶ್ರೀಕಂಠೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು.

ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ದೇವಾಲಯದ ಹೊರಾವರಣದಲ್ಲಿ ಸಿಹಿ ವಿತರಿಸಿದ ಅಭಿಮಾನಿಗಳು ಬಿ.ಕೆಹರಿಪ್ರಸಾದ್ ಪರ ಜೈಕಾರ ಕೂಗಿ ಸಂಭ್ರಮಾಚರಣೆ ಮಾಡಿದರು.

ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಟಿ.ಗಿರೀಶ್ ಮಾತನಾಡಿ, ಕಾಂಗ್ರೆಸ್ ಹಿರಿಯ ನಾಯಕ, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರಿಗೆ ರಾಜ್ಯ ಕಾಂಗ್ರೆಸ್ ಪಕ್ಷದ ಚುಕ್ಕಾಣಿ ನೀಡುವ ಮೂಲಕ ಕಾಂಗ್ರೆಸ್ ವರಿಷ್ಠರು ಹಿಂದುಳಿದ ವರ್ಗಕ್ಕೆ ರಾಜಕೀಯವಾಗಿ ಶಕ್ತಿ ತುಂಬಲು ಮುಂದಾಗಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಡಿಸಿಎಂ ಡಾ.ಜಿ.ಪರಮೇಶ್ವರ್ ಅವರ ನೇತೃತ್ವದಲ್ಲಿ ನೂತನ ವಾಗಿ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಮತದಾರರ ನಿರೀಕ್ಷೆಯಂತೆ ಜನಪರ ಆಡಳಿತ ನೀಡಲಿದ್ದು, ಮುಂಬರುವ 2028ರ ಚುನಾವಣೆಯಲ್ಲಿ ಬಹುಮತದೊಂದಿಗೆ ಮತ್ತೊಮ್ಮೆ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದರು.

ಈ ವೇಳೆ ಎಂ.ಜಿ. ಗುರುರಾಜ್, ಮೋಹನ್, ಗಿರೀಶ್, ಕೆಂಪಣ್ಣ, ಗೋವಿಂದರಾಜು, ನಾಗರಾಜು, ಬಸವರಾಜು, ಕೃಷ್ಣಕುಮಾರ್, ಜಿ.ಕೆ.ಮಂಜುನಾಥ್, ಮಂಜು ಇದ್ದರು.

## ಸಚಿವ ರಾಮಲಿಂಗಾರೆಡ್ಡಿಗೆ ಹೆಚ್ಚುವರಿ ಖಾತೆ ನೀಡಲು ಆಗ್ರಹ

ಬನ್ನೂರು, ಜೂ.8– ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಾಕಷ್ಟು ಜನಪರ ಕಾರ್ಯ ನಿರ್ವಹಿಸಿಕೊಂಡು ಬರುತ್ತಿರುವ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಹೆಚ್ಚುವರಿಯಾಗಿ ಮುಜರಾಯಿ ಖಾತೆ ನೀಡಬೇಕು ಎಂದು ಮೈಸೂರು ಜಿಲ್ಲಾ ಮುಜರಾಯಿ ಅರ್ಚಕರು ಹಾಗೂ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ.ಬೋಳಪ್ಪ ಗುರೂಜಿ ಆಗ್ರಹಿಸಿದರು.

ಇಲ್ಲಿಗೆ ಸಮೀಪದ ಗೊರವನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಮಾಜಿ ಸಿಎಂ ಸಿದ್ದರಾಮಯ್ಯ ಸರ್ಕಾರದಲ್ಲಿ ರಾಮಲಿಂಗಾರೆಡ್ಡಿಯವರು ಮುಜರಾಯಿ ಖಾತೆಯನ್ನು ಯಶಸ್ವಿಯಾಗಿ ಮುನ್ನಡೆಸಿದ್ದು, ಅವರ ಅಧಿಕಾರವಧಿಯಲ್ಲಿ ಈ ಹಿಂದೆ ಆಗದ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಅರ್ಚಕರ ನೋವುಗಳಿಗೆ ಸ್ಪಂದಿಸಿದ ಅವರು ಅರ್ಚಕರು, ಆಗಮಿಕರ ಮತ್ತು ನೌಕರರ ಸಂಘದ ಮನವಿಗೆ ಸ್ಪಂದಿಸಿ ಹಲವು ಆದೇಶ ಮಾಡಿಸಿ ಇತಿಹಾಸ ನಿರ್ಮಿಸಿದರು ಎಂದರು.

ಡಾ.ಹೆಚ್.ಸಿ.ಮಹದೇವಪ್ಪರನ್ನು ಸಚಿವರಾಗಿಸಲು

# ಮಾಜಿ ಸಿಎಂ ಸಿದ್ದರಾಮಯ್ಯ ಪಟ್ಟು ಹಿಡಿಯಬೇಕು

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಆಗ್ರಹ



ಸಭೆಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿದರು.

ತಿ.ನರಸೀಪುರ, ಜೂ.8– ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮೊದಲ ಸಚಿವ ಸಂಪುಟ ವಿಸ್ತರಣೆ ಯಲ್ಲಿ ಸಚಿವ ಸ್ಥಾನ ನೀಡುವಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಟ್ಟು ಹಿಡಿಯಬೇಕಿತ್ತು ಎಂದು ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಅಭಿಪ್ರಾಯಪಟ್ಟರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸೋಮವಾರ ನಡೆದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಅಹಿಂದ ಚಳವಳಿಯನ್ನು ರಾಜ್ಯಾದ್ಯಂತ ಬಲಪಡಿಸುವಲ್ಲಿ ಹಾಗೂ ಸಿದ್ದರಾಮಯ್ಯ ಅವರ ರಾಜಕೀಯ ಬೆಳವಣಿಗೆಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಪಾತ್ರ ಮಹತ್ವದ್ದಾಗಿದೆ. ಸಿದ್ದರಾಮಯ್ಯ ಅವರ ಬೆನ್ನೆಲುಬಾಗಿ ನಿಂತು ಸಂಘಟನೆ ಮತ್ತು ಚಳವಳಿಯನ್ನು ಕಟ್ಟುವಲ್ಲಿ ಮಹದೇವಪ್ಪ ಅವರು ನಿರಂತರವಾಗಿ ಶ್ರಮಿಸಿ ದ್ದಾರೆ. ಇಂತಹ ಹಿರಿಯ ಹಾಗೂ ಅನು ಭವಿ ನಾಯಕರಿಗೆ ಮೊದಲ ಆದ್ಯತೆ ನೀಡಬೇಕಾಗಿತ್ತು ಎಂದರು.

ಡಾ.ಯತೀಂದ್ರ ಅವರಿಗೆ ಸಚಿವ ಸ್ಥಾನ ನೀಡಿರುವುದಕ್ಕೆ ಯಾವುದೇ ಅಭ್ಯಂತರ ಇಲ್ಲ. ಆದರೆ 6 ಬಾರಿ ಶಾಸಕ, 3 ಬಾರಿ ಸಚಿವರಾಗಿ ಕಾರ್ಯ ನಿರ್ವಹಿಸಿರುವ ಮಹದೇವಪ್ಪ ಅವರಂತಹ ಹಿರಿಯ ನಾಯಕರನ್ನು ಕಡೆಗಣಿಸಿರುವುದು ದಲಿತ ಸಮುದಾಯಕ್ಕೆ ನೋವುಂಟು ಮಾಡಿದೆ. ಸಿದ್ದರಾಮಯ್ಯ ನಂತರ ಅಹಿಂದ ಚಳವಳಿ ಮುನ್ನಡೆಸಬಲ್ಲ ಸಮರ್ಥ ನಾಯಕತ್ವವನ್ನು ಪಕ್ಷದಲ್ಲಿ ಬೆಳೆಸುವ ಅಗತ್ಯವಿದೆ. ಆ ಎಲ್ಲಾ ಅರ್ಹತೆ, ಅನುಭವ ಮತ್ತು ಜನ ಬೆಂಬಲ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಇದೆ. ಆದ್ದರಿಂದ ಮುಂದಿನ ಸಚಿವ ಸಂಪುಟ ವಿಸ್ತರಣೆಯಲ್ಲಿ ಅವರಿಗೆ ಸಚಿವ ಸ್ಥಾನ ನೀಡಲು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಆಸಕ್ತಿ ವಹಿಸಿ ಪಟ್ಟು ಹಿಡಿಯಬೇಕು ಎಂದು ಒತ್ತಾಯಿಸಿದರು.

**ಮಹದೇವಪ್ಪರಿಂದಲೇ ದಲಿತರು ಕಾಂಗ್ರೆಸ್ ಪರ ಮತ ಹಾಕಿದ್ದು:** ಕಳೆದ ವಿಧಾನಸಭೆ ಚುನಾವಣೆಯಲ್ಲಿ ದಲಿತ ಸಮುದಾಯದ ಶೇ.90ರಷ್ಟು ಮತದಾರರು ಸಿದ್ದರಾಮಯ್ಯ ಪರ ನಿಂತು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ್ದರೆ, ಅದಕ್ಕೆ ಹಿರಿಯ ದಲಿತ ನಾಯಕ ಹಾಗೂ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ನಾಯಕತ್ವ ಹಾಗೂ ಸಂಘಟನಾ ಶಕ್ತಿಯೇ ಕಾರಣ. ದಲಿತ ಸಮುದಾಯದ ಅಭಿವೃದ್ಧಿ, ಸಾಮಾಜಿಕ ನ್ಯಾಯ ಹಾಗೂ ಹಿಂದುಳಿದ ವರ್ಗಗಳ ಪರವಾಗಿ ನಿರಂತರವಾಗಿ ಹೋರಾಟ ಮಾಡುವ ಮಹದೇವಪ್ಪ ಅವರು ರಾಜ್ಯದ ದಲಿತರ ವಿಶ್ವಾಸಗಳಿಸಿದ್ದಾರೆ. ಚುನಾವಣೆ ವೇಳೆ ಅವರು ಕಾಂಗ್ರೆಸ್ ಪಕ್ಷದ ಪರ ನಡೆಸಿದ ಪ್ರಚಾರ ಮತ್ತು ಸಮುದಾಯದೊಂದಿಗೆ ಹೊಂದಿರುವ ನಿಕಟ ಬಾಂಧವ್ಯ ಪಕ್ಷಕ್ಕೆ ಹೆಚ್ಚಿನ ಬೆಂಬಲ ದೊರೆಯುವಂತೆ ಮಾಡಿದೆ ಎಂದರು.

**ದಲಿತರ ಮತಗಳಿಂದಲೇ ರಾಜ್ಯದ ಚುಕ್ಕಾಣಿ ಹಿಡಿದ ಕಾಂಗ್ರೆಸ್:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ದಲಿತ ಸಮುದಾಯದ ಮತಗಳು ಮಹತ್ವದ ಪಾತ್ರ ವಹಿಸಿದ್ದು, ಆ ಮತಗಳನ್ನು ಪಕ್ಷದತ್ತ ಸೆಳೆಯುವಲ್ಲಿ ಮಹದೇವಪ್ಪ ಅವರ ಕೊಡುಗೆ ಅನನ್ಯವಾಗಿದೆ. ಇಂತಹ ಹಿರಿಯ ಮತ್ತು ಅನುಭವಿ ನಾಯಕನಿಗೆ ಸರ್ಕಾರ ಹಾಗೂ ಪಕ್ಷದಲ್ಲಿ ಸೂಕ್ತ ಸ್ಥಾನಮಾನ ನೀಡುವುದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅಗತ್ಯವಾಗಿದೆ. ರಾಜ್ಯ ರಾಜಕೀಯದಲ್ಲಿ ದಲಿತ ಸಮುದಾಯವು ಕಾಂಗ್ರೆಸ್ ಪಕ್ಷದ ಪ್ರಮುಖ ಬೆಂಬಲಿಗರಾಗಿ ಗುರುತಿಸಿಕೊಂಡಿದೆ. ಚುನಾವಣೆ ಸಂದರ್ಭ ಶೇ.90 ರಷ್ಟು ದಲಿತ ಮತದಾರರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದಾರೆ. ಆದರೆ ಪಕ್ಷಕ್ಕೆ ಅಷ್ಟೊಂದು ದೊಡ್ಡ ಮಟ್ಟದ ಬೆಂಬಲ ನೀಡುವ ಸಮುದಾಯದ ನಾಯಕರಿಗೆ ಸೂಕ್ತ ಸ್ಥಾನಮಾನ ಹಾಗೂ ಅವಕಾಶ ದೊರೆಯದಿರುವುದು ಬೇಸರದ ಸಂಗತಿ ಎಂದು ಅಭಿಪ್ರಾಯಪಟ್ಟರು.

**ಡಾ.ಯತೀಂದ್ರ ರಾಜೀನಾಮೆ ನೀಡಲಿ:** ದಸಂಸ ಮೈಸೂರು ಜಿಲ್ಲಾ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್ ಮಾತನಾಡಿ, ಸಚಿವ ಸಂಪುಟ ವಿಸ್ತರಣೆಯ 2ನೇ ಪಟ್ಟಿಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡದಿದ್ದರೆ, ಸಚಿವ ಡಾ.ಯತೀಂದ್ರ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ದಲಿತ ಸಮುದಾಯದ ಪರ ನಿಲ್ಲಬೇಕು ಎಂದು ಆಗ್ರಹಿಸಿದರು.

ಸಭೆಯಲ್ಲಿ ಕಾರ್ಯ ಬಸವಣ್ಣ, ಬನ್ನಳ್ಳಿ ಸೋಮಣ್ಣ, ವರುಣ ಕ್ಷೇತ್ರದ ದಲಿತ ಮುಖಂಡರಾದ ಮಾಜಿ ಪ್ರಧಾನ ಡಿ.ಆರ್.ಮೂರ್ತಿ, ಇಂಡವಾಳು ಹೊನ್ನಯ್ಯ, ನಾಗರಾಜು, ದಂಡಿಕೆರೆ ಧಮ್ಮ ಅಶೋಕ, ರಂಗಸಮುದ್ರ ರಂಗಸ್ವಾಮಿ, ನಂಜುಂಡ, ಹಿಟ್ಟುವಳ್ಳಿ ಮಹಾದೇವಸ್ವಾಮಿ, ಕಿರುಗಸೂರು ರಜಿನಿ, ಡಣಾಯಕನಪುರ ಮರಿಸಿದ್ದಯ್ಯ, ಮಾದಪ್ಪ ಮರಯ್ಯ, ಹೊಸಕೋಟೆ ಕುಮಾರ್, ಬನ್ನಳ್ಳಿ ಬಸವರಾಜು, ಬಿಳಿಗಲಿ ರಾಜಶೇಖರ್, ಸುತ್ತೂರು ಜ್ಯೋತಿ ಪ್ರಕಾಶ್, ದಸಂಸ ತಾಲೂಕು ಸಂಚಾಲಕ ಸೋಮಶೇಖರ್, ಮಹಾದೇವ, ನಾಗರಾಜು, ಮಹಾದೇವ, ಉಮೇಶ್, ಚೆಲುವರಾಜು, ಶಿವಕುಮಾರ್ ಇತರರಿದ್ದರು.

### ನಾಳೆ ಸುತ್ತೂರಿನಲ್ಲಿ ಹಕ್ಕೋತ್ತಾಯ ಸಭೆ

**ತಿ.ನರಸೀಪುರ:** ಜೂ.10ರಂದು ಸುತ್ತೂರಿನಲ್ಲಿ ನಡೆಯುವ ಹಕ್ಕೋತ್ತಾಯ ಸಭೆಯಲ್ಲಿ ವರುಣ ಹಾಗೂ ತಿ.ನರಸೀಪುರ ಕ್ಷೇತ್ರದ ದಲಿತ ಮುಖಂಡರು, ಸಂಘಟನೆಗಳ ಪ್ರತಿನಿಧಿಗಳು ಹಾಗೂ ಸಮುದಾಯದ ಮುಖಂಡರು ಭಾಗವಹಿಸಲಿದ್ದು, ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕೆಂಬ ಆಗ್ರಹವನ್ನು ಸರ್ಕಾರದ ಮುಂದಿಡಲಿದ್ದಾರೆ.

ಸಭೆ ಬಳಿಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡುವಂತೆ ಮನವಿ ಸಲ್ಲಿಸಲಾಗುವುದು. ಆ ಮೂಲಕ ದಲಿತ ಸಮುದಾಯದ ಭಾವನೆಗಳು ಮತ್ತು ನಿರೀಕ್ಷೆಗಳನ್ನು ನಾಯಕರ ಗಮನಕ್ಕೆ ತರಲಾಗುವುದು. ಸಚಿವ ಸಂಪುಟ ವಿಸ್ತರಣೆಯಲ್ಲಿ ಮಹದೇವಪ್ಪ ಅವರಿಗೆ ಅವಕಾಶ ನೀಡದಿದ್ದರೇ ಈ ಭಾಗದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಉಂಟಾಗುವ ರಾಜಕೀಯ ಪರಿಣಾಮಗಳಿಗೆ ಪಕ್ಷದ ನಾಯಕತ್ವವೇ ಹೊಣೆ. ದಲಿತ ಸಮುದಾಯದ ನಿರೀಕ್ಷೆಗಳನ್ನು ನಿರಂತರವಾಗಿ ಕಡೆಗಣಿಸುವುದು ಪಕ್ಷಕ್ಕೆ ಹಾನಿಕಾರಕವಾಗಬಹುದು ಎಂದು ಆಲಗೂಡು ಶಿವಕುಮಾರ್ ಎಚ್ಚರಿಸಿದರು.

ಮೈಸೂರು ಮಿತ್ರ

ಮಂಗಳವಾರ 9 ಜೂನ್ 2026

# ಹೊಸ ಆದಾಯ ತೆರಿಗೆ ಕಾಯಿದೆ ಸರಳ, ಪಾರದರ್ಶಕ, ತೆರಿಗೆದಾರ ಸ್ನೇಹಿ

## ಆದಾಯ ತೆರಿಗೆ ಹೆಚ್ಚುವರಿ ಆಯುಕ್ತೆ ಕಲ್ಪಲತಾ ರಾಜನ್ ಅಭಿಮತ

ಮೈಸೂರು, ಜೂ.8(ವಿವಿಹೆಚ್)– 1961ರ ಆದಾಯ ತೆರಿಗೆ ಕಾಯಿದೆಯ ಬದಲಿಗೆ ಜಾರಿಗೆ ಬರುತ್ತಿರುವ 2025ರ ಹೊಸ ಆದಾಯ ತೆರಿಗೆ ಕಾಯಿದೆ ಹೆಚ್ಚು ಸರಳ, ಪಾರದರ್ಶಕ ಹಾಗೂ ತೆರಿಗೆದಾರ ಸ್ನೇಹಿಯಾಗಿದೆ ಎಂದು ರೇಂಜ್–1ರ ಆದಾಯ ತೆರಿಗೆ ಹೆಚ್ಚುವರಿ ಆಯುಕ್ತೆ ಕಲ್ಪಲತಾ ರಾಜನ್ ತಿಳಿಸಿದರು.

ನಗರದ ಎಂಬಿಸಿಟಿ ಸಭಾಂಗಣದಲ್ಲಿ ಕ್ರೆಡಾಯ್ ಮೈಸೂರು ಮತ್ತು ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ವತಿಯಿಂದ ಸೋಮವಾರ ಆಯೋಜಿಸಿದ್ದ 'ಹೊಸ ಆದಾಯ ತೆರಿಗೆ ಕಾಯಿದೆ ಅಡಿಯಲ್ಲಿ ರಿಯಲ್ ಎಸ್ಟೇಟ್ ವಲಯದ ಆದಾಯ ತೆರಿಗೆ ಮತ್ತು ನಿಯಮ ಪಾಲನೆ' ಕುರಿತ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

1961ರ ಕಾಯಿದೆಯಲ್ಲಿ ಕಾಲಕಾಲಕ್ಕೆ ಮಾಡಿದ ನೂರಾರು ತಿದ್ದುಪಡಿಗಳು ತೆರಿಗೆದಾರರಲ್ಲಿ ಗೊಂದಲ ಮತ್ತು ಅನಗತ್ಯ ವ್ಯಾಜ್ಯಗಳಿಗೆ ಕಾರಣವಾಗಿದ್ದವು. ಹೊಸ ಕಾಯಿದೆ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡಿ, ತೆರಿಗೆ ನಿಶ್ಚಿತತೆ ಮತ್ತು ಡಿಜಿಟಲ್ ಸುಗಮತೆಗೆ ಹೆಚ್ಚಿನ ಆದ್ಯತೆ ನೀಡುತ್ತದೆ ಎಂದು ಅವರು ವಿವರಿಸಿದರು.



ಆದಾಯ ತೆರಿಗೆ ಹೆಚ್ಚುವರಿ ಆಯುಕ್ತೆ ಕಲ್ಪಲತಾ ರಾಜನ್, ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ರಿಯಲ್ ಎಸ್ಟೇಟ್ ಮತ್ತು ನಿರ್ಮಾಣ ಕ್ಷೇತ್ರವು ದೇಶದ ಮೂಲಸೌಕರ್ಯ ಅಭಿವೃದ್ಧಿಯ ಬೆನ್ನೆಲುಬಾಗಿದೆ. ಆದರೆ ಈ ಕ್ಷೇತ್ರದಲ್ಲಿ ದೀರ್ಘಾವಧಿ ಹೂಡಿಕೆ, 5–7 ವರ್ಷಗಳ ಸಂಕೀರ್ಣ ಯೋಜನಾ ಅವಧಿ ಮತ್ತು ಆದಾಯ ಗುರುತಿಸುವಿಕೆಯಲ್ಲಿ ವಿಶೇಷ ಸವಾಲುಗಳಿವೆ. ಹಳೆಯ ಕಾಯಿದೆಯಲ್ಲಿ ಇದಕ್ಕೆ ಸ್ಪಷ್ಟತೆ ಇರಲಿಲ್ಲ ಎಂದು ರಾಜನ್ ಹೇಳಿದರು.

ಹೊಸ ಕಾಯಿದೆ ಜಾರಿಗೆ ಮುನ್ನ ತೆರಿಗೆದಾರರಲ್ಲಿ ಜಾಗೃತಿ ಮೂಡಿಸಲು ಆದಾಯ ತೆರಿಗೆ ಇಲಾಖೆ 'ಪ್ರಾರಂಭ–2026' ಎಂಬ ವಿಶೇಷ ಅಭಿಯಾನ ಆರಂಭಿಸಿದೆ. ಇದರ ಭಾಗವಾಗಿ ಇಲಾಖೆಯ ಅಧಿಕಾರಿಗಳು ಕಚೇರಿಯಿಂದ ಹೊರಬಂದು ಉತ್ಪಾದನೆ, ಸೇವೆ, ರಿಯಲ್ ಎಸ್ಟೇಟ್ ಸೇರಿದಂತೆ ವಿವಿಧ ವಲಯಗಳೊಂದಿಗೆ ನೇರ ಸಂವಾದ ನಡೆಸುತ್ತಿದ್ದಾರೆ ಎಂದರು.

ತೆರಿಗೆದಾರರ ಅನುಕೂಲಕ್ಕಾಗಿ 'ಕರ ಸೇತು' ಸಮಗ್ರ ಮಾಹಿತಿ ಮಾರ್ಗದರ್ಶಿ ಮತ್ತು 'ಕರಸಾಥಿ' ಎಂಬ 24*7 ಎಐ ಆಧಾರಿತ ಚಾಟ್‌ಬಾಟ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಇದು ತೆರಿಗೆ ಕಾಯಿದೆ, ನಿಯಮಗಳು, ಸುತ್ತೋಲೆಗಳ ಸಮಗ್ರ ಮಾಹಿತಿ ನೀಡುವ ಆನ್‌ಲೈನ್ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸಲಿದೆ ಎಂದರು.

ಈ ಜಾಗೃತಿ ಕಾರ್ಯಕ್ರಮಗಳು ಏಕಮುಖ ಉಪನ್ಯಾಸಗಳಲ್ಲ. ಇಲಾಖೆಯು ತನ್ನ ನೀತಿ ಮತ್ತು ನಿರೀಕ್ಷೆಗಳನ್ನು ಹಂಚಿಕೊಳ್ಳುವುದರ ಜೊತೆಗೆ, ಕ್ಷೇತ್ರದಲ್ಲಿರುವ ಪ್ರಾಯೋಗಿಕ ಸಮಸ್ಯೆಗಳು ಮತ್ತು ಸಲಹೆಗಳನ್ನು ಆಲಿಸಲು ಬಂದಿದೆ. ಎಲ್ಲರೂ ಮುಕ್ತವಾಗಿ ಚರ್ಚಿಸಿ ಇರುವ ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳಿ ಜೊತೆಗೆ, ಇಲಾಖೆಯಲ್ಲಿ ಆಗಬೇಕಿರುವ ಬದಲಾವಣೆಗಳ ಬಗ್ಗೆ ಸಲಹೆ ನೀಡಿ ಎಂದು ಕರೆ ನೀಡಿದರು.

ಬಳಿಕ ಸರ್ಕಲ್–1 ರ ಆದಾಯ ತೆರಿಗೆ ಸಹಾಯಕ ಆಯುಕ್ತ ಎಸ್. ವೆಂಕಟೇಶನ್ ಅವರು ಪ್ರಾತ್ಯಕ್ಷತೆ ಮೂಲಕ ಕರಸೇತು ಮತ್ತು ಕರಸಾತಿ ಎಂಬ ಆನ್ ಲೈನ್ ವ್ಯವಸ್ಥೆಯ ಬಗ್ಗೆ ರಿಯಲ್ ಎಸ್ಟೇಟ್ ವಲಯದವರಿಗೆ ಮಾಹಿತಿ ನೀಡಿದರು.

ಈ ವೇಳೆ ಡಿಸಿಐಟಿ ಆರ್. ರಂಗನಾಥನ್, ಕ್ರೆಡಾಯ್ ಅಧ್ಯಕ್ಷ ಹರೀಶ್ ಶೆಣೈ, ಕಾರ್ಯದರ್ಶಿ ನಾಗರಾಜ್ ವಿ. ಬೈರಿ, ಬಿಎಐ ಅಧ್ಯಕ್ಷ ಪ್ರಭಾಕರ್ ರಾವ್, ಕಾರ್ಯದರ್ಶಿ ಪ್ರವೀಣ್ ಪಾಲ್ ಉಪಸ್ಥಿತರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | **(ದೂ: 2521923)** |
| ಬ್ಲಾಸ್ಟ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | **(ದೂ: 2422871)** |
| ರೆಬೆಲ್ (ತೆ) | 4 ಪ್ರದರ್ಶನಗಳು |
| **ಬಾಲಾಜಿ** | **(ದೂ: 2497199)** |
| ಹೈ ಜವಾನಿ ತೋ ಇಷ್ಕ್ ಹೋನಾ ಹೈ (ಹಿ) | 3 ಪ್ರದರ್ಶನಗಳು |
| **ಮಹದೇಶ್ವರ** | **(ಮೊ:9900820093)** |
| ಪೆದ್ದಿ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಲೋ ನವೀನ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಕರುಪ್ಪು (ತ) | 4 ಪ್ರದರ್ಶನಗಳು |
| **ಸಂಗಂ** | |
| ಮ್ಯಾಂಗೋ ಪಚ್ಚ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಕೆಡಿ(ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಲೋ ನವೀನ (ಕ) | 4 ಪ್ರದರ್ಶನಗಳು |

## ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ


ಮೈಸೂರಿನ ಬೆಸ್ತರ ಬ್ಲಾಕ್‌ನಲ್ಲಿರುವ ರಾಮ ಮಂದಿರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸ್ಮರಣಾರ್ಥ ಪುಷ್ಪಾರ್ಚನೆ ಮೂಲಕ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ನಾಗೇಂದ್ರ, ಗಂಗಾಧರ, ವಸಂತ್, ಸುವರ್ಣ ಬೆಳಕು ಫೌಂಡೇಷನ್ ಅಧ್ಯಕ್ಷ ಮಹೇಶ್ ಎಸ್., ಪ್ರದೀಪ್ ಸೇರಿದಂತೆ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

## ಅಭಿನಂದನೆ


ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾಡಳಿತ ಮಂಡ್ಯ ಕೊಡಮಾಡುವ 2026ರ 'ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ'ಯನ್ನು ಪಡೆದ ವಿಶ್ರಾಂತ ಪ್ರಾಂಶುಪಾಲ, ಸಾಹಿತಿ ಶಿ. ಕುಮಾರಸ್ವಾಮಿ ಅವರನ್ನು ಶಾಶ್ವತ ಸೇವಾ ಶಾಲೆಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಎಂ ಆರ್ ಚೌಧರಿ, ಮುಖ್ಯ ಶಿಕ್ಷಕಿ ಹೆಚ್ ಪಿ ಪವಿತ್ರ, ಸಹ–ಮುಖ್ಯಶಿಕ್ಷಕ ರಮೇಶ್ ತಾಯೂರು ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರ ನಗದು ಬಹುಮಾನ

**ಮೈಸೂರು:** ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ 111ನೇ ಜಯಂತಿಯನ್ನು ಸೆಪ್ಟೆಂಬರ್/ಅಕ್ಟೋಬರ್ ತಿಂಗಳಲ್ಲಿ ಪಿರಿಯಾಪಟ್ಟಣ ತಾಲೂಕು, ಬೆಟ್ಟದಪುರದ ಶ್ರೀ ಸಲೀಲಾಖ್ಯ ಮಠದಲ್ಲಿ ಏರ್ಪಡಿಸಲಾಗಿದೆ. ಆ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಗುವುದು.

2025–26ನೇ ಶೈಕ್ಷಣಿಕ ವರ್ಷದಲ್ಲಿ ಜರುಗಿದ ರಾಜ್ಯ ಹಾಗೂ ಕೇಂದ್ರೀಯ ಪಠ್ಯಕ್ರಮಗಳಲ್ಲಿ ಎಸ್‌ಎಸ್‌ಎಲ್‌ಸಿ/10ನೇ ತರಗತಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿರುವ ಪ್ರತಿಭಾವಂತ ವೀರಶೈವ ಲಿಂಗಾಯತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಜೂ.30 ರೊಳಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಜೆಎಸ್‌ಎಸ್ ಮಹಾವಿದ್ಯಾಪೀಠ ಈ ವಿಳಾಸಕ್ಕೆ ಕಳುಹಿಸಿಕೊಡಬೇಕು. ವಿವರಗಳಿಗೆ ಮೊ.9980906762, 9449030588 ಸಂಪರ್ಕಿಸಬಹುದು.

## ಪರಿಸರ ದಿನಾಚರಣೆ



ವಿಶ್ವ ಪರಿಸರ ದಿನದ ಅಂಗವಾಗಿ ಎಸ್‌ಬಿ ಫೌಂಡೇಶನ್ ವತಿಯಿಂದ ನಗರದಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಎಸ್‌ಬಿ ಫೌಂಡೇಶನ್‌ನ ಸಂಸ್ಥಾಪಕ ಸುರೇಶ್ ಬಾಬು, ಶ್ರೀಮತಿ ಸುಮತಿ ಸುರೇಶ್ ಉಪಸ್ಥಿತರಿದ್ದರು.

## ವಿಶ್ವ ಪರಿಸರ ದಿನಾಚರಣೆ



ಮೈಸೂರಿನ ಹರಿ ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ಹಾಗೂ ಕಾಲೇಜಿನ ಪ್ರಾಂಶುಪಾಲ ಎಚ್. ಆರ್. ಭಗವಾನ್, ಶಾಲಾ ವಿಭಾಗದ ಪ್ರಾಂಶುಪಾಲರಾದ ವಿ. ಗಣೇಶ್, ಶ್ರೀಕಾಂತ್ ಡಿ. ಎನ್., ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ವಿಧಾನ ಪರಿಷತ್ತಿಗೆ ರಘು ಕೌಟಿಲ್ಯ ಆಯ್ಕೆ

### ಬಿಜೆಪಿ ಮುಖಂಡ ದಾರಿಪುರ ಡಿ.ಚಂದ್ರಶೇಖರ್ ಅಭಿನಂದನೆ

ಮೈಸೂರು, ಜೂ.8 – ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷರಾದ ರಘು ಕೌಟಿಲ್ಯ ಅವರು ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ಅಭ್ಯರ್ಥಿಯಾಗಿ ಆಯ್ಕೆಯಾಗಿರುವುದು ಹಿಂದುಳಿದ ಸಮುದಾಯಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದು ಬಿಜೆಪಿ ಮುಖಂಡರಾದ ದಾರಿ ಪುರ ಡಿ. ಚಂದ್ರಶೇಖರ್ ತಿಳಿಸಿದ್ದಾರೆ.

ಸಂಘಟನಾ ಚಾತುರ್ಯ, ಪಕ್ಷನಿಷ್ಠೆ ಹಾಗೂ ಸಮಾಜಮುಖಿ ಕಾರ್ಯಗಳ ಮೂಲಕ ರಾಜ್ಯಾದ್ಯಂತ ವಿಶಿಷ್ಟ ಗುರುತನ್ನು ಮೂಡಿಸಿರುವ ರಘು ಕೌಟಿಲ್ಯ ಡಿ. ಚಂದ್ರಶೇಖರ್ ಅವರಿಗೆ ಈ ಮಹತ್ವದ ಜವಾಬ್ದಾರಿ ದೊರೆತಿರುವುದು ಪಕ್ಷದ ಕಾರ್ಯಕರ್ತರಲ್ಲಿ ಸಂತಸ ಮತ್ತು ಉತ್ಸಾಹವನ್ನು ಹೆಚ್ಚಿಸಿದೆ ಎಂದು ಹೇಳಿದ್ದಾರೆ.

ಹಿಂದುಳಿದ ವರ್ಗಗಳ ಅಭಿವೃದ್ಧಿ, ಸಾಮಾಜಿಕ ನ್ಯಾಯ ಹಾಗೂ ಜನಪರ ಆಶಯಗಳನ್ನು ಪ್ರತಿನಿಧಿಸುವಲ್ಲಿ ರಘು ಕೌಟಿಲ್ಯ ಅವರು ಮಹತ್ವದ ಪಾತ್ರ ವಹಿಸಲಿದ್ದು, ವಿಧಾನ ಪರಿಷತ್ತಿನಲ್ಲಿ ಜನರ ಧ್ವನಿಯಾಗಿ ಸಮರ್ಥವಾಗಿ ಕಾರ್ಯನಿರ್ವಹಿಸುವ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ.

ರಾಜ್ಯದ ವಿವಿಧ ಭಾಗಗಳಲ್ಲಿ ಪಕ್ಷ ಸಂಘಟನೆಗೆ ಶ್ರಮಿಸಿ, ಹಿಂದುಳಿದ ವರ್ಗಗಳ ಹಕ್ಕುಗಳ ಪರವಾಗಿ ನಿರಂತರ ಹೋರಾಟ ನಡೆಸಿರುವ ರಘು ಕೌಟಿಲ್ಯ ಅವರಿಗೆ ವಿಧಾನ ಪರಿಷತ್ ಅಭ್ಯರ್ಥಿಯಾಗುವ ಅವಕಾಶ ದೊರೆತಿರುವುದು ಅವರ ದೀರ್ಘಕಾಲದ ಸೇವೆಗೆ ಸಂದ ಗೌರವವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

## ವಾತ್ಸಲ್ಯ ಸೇವಾಶ್ರಮದಲ್ಲಿ ಪರಿಸರ ದಿನಾಚರಣೆ


ಮೈಸೂರಿನ ಹಿನಕಲ್‌ನಲ್ಲಿರುವ ಹಿರಿಯ ಜೀವಿಗಳ ಆಶ್ರಯತಾಣ ವಾತ್ಸಲ್ಯ ಸೇವಾಶ್ರಮ ಹಾಗೂ ಬೋಗಾದಿ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು. ಈ ವೇಳೆ ವಾತ್ಸಲ್ಯ ಸೇವಾಶ್ರಮದ ಸಂಸ್ಥಾಪಕ ಅಧ್ಯಕ್ಷ ಎ.ಸಿ.ರವಿಕುಮಾರ್, ಪ್ರಗತಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀಮತಿ ಚೈತ್ರಾ ವಿ.ವಿ., ವಿದ್ಯಾಸಂಸ್ಥೆಯ ಅಧ್ಯಕ್ಷರಾದ ವಿ.ವೆಂಕಟೇಶ್, ಸಂಸ್ಥೆಯ ಶೈಕ್ಷಣಿಕ ನಿರ್ದೇಶಕರಾದ ಶ್ರೀಮತಿ ಜಯಶ್ರೀ ವೆಂಕಟೇಶ್, ಕಾರ್ಯದರ್ಶಿ ಶ್ರೀಮತಿ ಕಾವ್ಯ ವಿ.ಕಶ್ಯಪ್, ಪ್ರಾಂಶುಪಾಲರಾದ ಶ್ರೀಮತಿ ಚೈತ್ರಾ, ವಾತ್ಸಲ್ಯ ಸೇವಾಶ್ರಮದ ಅಧ್ಯಕ್ಷ ಎ.ಸಿ.ರವಿಕುಮಾರ್, ಗೌರವ ಕಾರ್ಯದರ್ಶಿ ಶ್ರೀಮತಿ ನಾಗರತ್ನ ಹಾಗೂ ಸಿಬ್ಬಂದಿ ಹಾಜರಿದ್ದರು.

## ನೀರು ಪೂರೈಕೆ ವ್ಯತ್ಯಯ

**ಮೈಸೂರು:** ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕಬಿನಿ ನೀರು ಸರಬರಾಜು ಯೋಜನೆಯ ಮೂಲ ಸ್ಥಾವರದಲ್ಲಿ ತ್ರೈಮಾಸಿಕ ನಿರ್ವಹಣೆಗಾಗಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂ.10 ಮತ್ತು 11ರಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

**ನೀರು ಸರಬರಾಜುವಿನಲ್ಲಿ ವ್ಯತ್ಯಯ ವುಂಟಾಗುವ ಪ್ರದೇಶಗಳು:** ವಾರ್ಡ್ ನಂ. 42ರಿಂದ 51 (ಕೆ.ಜಿ.ಕೊಪ್ಪಲು, ಜನತಾ ನಗರ, ಶಾರದಾದೇವಿನಗರ, ದಟ್ಟಗಳ್ಳಿ 3ನೇ ಹಂತ, ಕುವೆಂಪುನಗರ, ಜಯನಗರ, ಲಕ್ಷ್ಮೀಪುರಂ, ಸುಣ್ಣದಕೇರಿ, ಅಗ್ರಹಾರ) ಹಾಗೂ 55ರಿಂದ 65 (ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ಕುವೆಂಪುನಗರ, ಸಿಐಟಿಬಿ ರಾಮಕೃಷ್ಣನಗರ, ಕುವೆಂಪು ನಗರ ಎಂ ಬ್ಲಾಕ್, ಅಶೋಕಪುರಂ, ವಿದ್ಯಾರಣ್ಯಪುರಂ ಭಾಗಶಃ ಪ್ರದೇಶ, ವಿಶ್ವೇಶ್ವರನಗರ, ಜೆ.ಪಿ.ನಗರ, ಅರವಿಂದ ನಗರ, ಶ್ರೀರಾಂಪುರ) ಹಾಗೂ ಇತ್ಯಾದಿ ಪ್ರದೇಶಗಳು.

## ಮೈಸೂರು ಯೋಗ ಒಕ್ಕೂಟದ ರಜತ ಮಹೋತ್ಸವ



ಮೈಸೂರು ಯೋಗ ಒಕ್ಕೂಟದ ರಜತ ಮಹೋತ್ಸವವನ್ನು ಗಣ್ಯರು ಉದ್ಘಾಟಿಸಿದರು.

ಮೈಸೂರು, ಜೂ.8– ಮೈಸೂರು ಯೋಗ ಒಕ್ಕೂಟದ ರಜತ ಮಹೋತ್ಸವವನ್ನು ಗಣ್ಯರು ಉದ್ಘಾಟಿಸಿದರು. ಪ್ರತಿಯೊಬ್ಬರೂ ಯೋಗ, ಧ್ಯಾನ, ಪ್ರಾಣಾಯಾಮದಲ್ಲಿ ತೊಡಗಿಸಿಕೊಂಡರೆ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಬಹುದು ಎಂದು ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಹೇಳಿದರು.

ಮೈಸೂರಿನ ರಾಮಕೃಷ್ಣನಗರದ ಶ್ರೀ ರಾಮಕೃಷ್ಣ ವಿದ್ಯಾಕೇಂದ್ರದ ಶಾರದಾ ಸಭಾಂಗಣದಲ್ಲಿ ಮೈಸೂರು ಯೋಗ ಒಕ್ಕೂಟದ ರಜತ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ವೇಳೆ ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ. ದೇವರಾಜು, ಜೆಎಸ್‌ಎಸ್ ಯೋಗ ಫೌಂಡೇಷನ್ ಅಧ್ಯಕ್ಷ ಶ್ರೀಹರಿ ದ್ವಾರಕನಾಥ್, ಶ್ರೀ ರಾಮಕೃಷ್ಣ ವಿದ್ಯಾಕೇಂದ್ರ ಮತ್ತು ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎನ್. ಪಾಪೇ ಗೌಡ, ಎಪಿಎನ್ ಪ್ರಾಪರ್ಟೀಸ್ ಪಾಲುದಾರ ಎ.ಪಿ. ನಾಗೇಶ್ ಮುಖ್ಯ ಅತಿಥಿಗಳಾಗಿದ್ದರು. ಮೈಸೂರು ಯೋಗ ಒಕ್ಕೂಟದ ಗೌರವಾಧ್ಯಕ್ಷ ಟಿ. ಜಲೇಂದ್ರಕುಮಾರ್ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಾಧ್ಯಕ್ಷ ಬಿ.ಪಿ. ಮೂರ್ತಿ ಸ್ವಾಗತಿಸಿದರು. ಪುರುಷೋತ್ತಮ ಕಾರ್ಯಕ್ರಮ ನಿರೂಪಿಸಿದರು. ಸುಮನಾ ಮತ್ತು ತಂಡದವರು ವಂದೇ ಮಾತರಂ ಗೀತೆ ಹಾಡಿದರು.

ಒಕ್ಕೂಟದ ಕಾರ್ಯಾಧ್ಯಕ್ಷರಾದ ಬಿ. ಶಾಂತಾರಾಂ, ಎಂ.ಎಸ್. ಶಿವಪ್ರಕಾಶ್, ಖಜಾಂಚಿ ನರಸಿಂಹ, ಪ್ರಧಾನ ಕಾರ್ಯದರ್ಶಿ ಯೋಗ ಕುಮಾರ್, ಹಿಮಾಲಯ ಪ್ರತಿಷ್ಠಾನ ಸಂಸ್ಥಾಪಕ ಎನ್. ಅನಂತ, ಭರತ ಸ್ವಾಭಿಮಾನ ಟ್ರಸ್ಟ್ ಅಧ್ಯಕ್ಷ ಎಸ್. ಶಶಿಕುಮಾರ್ ಉಪಸ್ಥಿತರಿದ್ದರು.

## ವಿಶ್ವ ಪರಿಸರ ದಿನಾಚರಣೆ


ವಿಶ್ವ ಪರಿಸರ ದಿನದ ಅಂಗವಾಗಿ ಚಾಮುಂಡೇಶ್ವರಿ ಗ್ರಾಮಾಂತರ ಮಂಡಲ ಬಿಜೆಪಿ ವತಿಯಿಂದ ಕೇರ್ಗಳ್ಳಿ ಸಮೀಪದ ನ್ಯಾಯಾಂಗ ಬಡಾವಣೆ ಉದ್ಯಾನವನದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು. ಈ ವೇಳೆ ಮಂಡಲದ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಚಿಕ್ಕಾಕನ್ಯ, ಮಂಡಲ ಅಧ್ಯಕ್ಷ ಪೈ.ಟಿ. ರವಿ ಲಕ್ಷ್ಮೀಪುರ, ನಗರ ಜಿಲ್ಲಾ ಉಪಾಧ್ಯಕ್ಷ ಎನ್. ಅರುಣ್ ಕುಮಾರ್ ಗೌಡ, ಕ್ಷೇತ್ರದ ಹಿರಿಯ ಮುಖಂಡರಾದ ಎಸ್.ಆರ್. ಗೋಪಾಲ್ ರಾವ್, ಹಿನಕಲ್ ಶ್ರೀನಿವಾಸ್ ಅಂಕಲ್, ದಾರಿಪುರ ಡಿ. ಚಂದ್ರಶೇಖರ್, ರೈತ ಮೋರ್ಚಾ ಅಧ್ಯಕ್ಷ ಬೆಲವತ್ತ ಸುರೇಶ್, ಜಿ. ಪರಶುರಾಮಪ್ಪ, ನಾರಾಯಣ್, ವೀರಭದ್ರಸ್ವಾಮಿ, ಸವಿತಾ ಪುಟ್ಟೇಗೌಡ, ರಾಘವೇಂದ್ರ, ಸುನೀಲ್ ಕುಮಾರ್ ಹಾಗೂ ಬಡಾವಣೆ ನಿವಾಸಿಗಳು ಉಪಸ್ಥಿತರಿದ್ದರು.

## ಮೈಸೂರು ಜಿಲ್ಲಾ ಕಾಂಗ್ರೆಸ್ ಕುಶಲಕರ್ಮಿ ವಿಭಾಗದ ಜಿಲ್ಲಾಧ್ಯಕ್ಷರು, ನಗರಾಧ್ಯಕ್ಷರ ಪದಗ್ರಹಣ ಕಾರ್ಯಕ್ರಮದ ಪೂರ್ವಭಾವಿ ಸಭೆ

ಮೈಸೂರು, ಜೂ. 8 – ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಕೆ.ಪಿ.ಸಿ.ಸಿ ಕುಶಲಕರ್ಮಿಗಳ ರಾಜ್ಯಾಧ್ಯಕ್ಷರು ಹಾಗೂ ವಿಶ್ವಕರ್ಮ ಸಮಾಜದ ಪ್ರಭಾವಿ ರಾಜ್ಯಮುಖಂಡ ಪ್ರಸನ್ನಕುಮಾರ್ ಅವರು ಮೈಸೂರು ಜಿಲ್ಲಾ ಕಾಂಗ್ರೆಸ್ ಕುಶಲಕರ್ಮಿ ವಿಭಾಗದ ಜಿಲ್ಲಾಧ್ಯಕ್ಷರಾದ ಬನ್ನೂರು ನಾಗರಾಜಚಾರ್, ನಗರಾಧ್ಯಕ್ಷ ನಾಗರಾಜು ಅವರ ಪದಗ್ರಹಣ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದರು.




ಕೆಪಿಸಿಸಿ ಕುಶಲಕರ್ಮಿಗಳ ರಾಜ್ಯಾಧ್ಯಕ್ಷರೂ ಆದ ವಿಶ್ವಕರ್ಮ ಸಮಾಜದ ಪ್ರಭಾರಿ ನಾಯಕ ಪ್ರಸನ್ನಕುಮಾರ್ ಅವರನ್ನು ಅಭಿನಂದಿಸಲಾಯಿತು

ಸಭೆಯಲ್ಲಿ ಮಾತನಾಡಿದ ಅವರು, ಕೆಪಿಸಿಸಿ ಕುಶಲಕರ್ಮಿ ವಿಭಾಗವು 3ವರ್ಷಗಳ ಹಿಂದೆ ನೂತನವಾಗಿ ಪ್ರಾರಂಭಗೊಂಡು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ವಿಭಾಗಕ್ಕೆ ನನ್ನನ್ನೇ ಮೊದಲ ಅಧ್ಯಕ್ಷರನ್ನಾಗಿ ಮಾಡಿದ ಮುಖ್ಯಮಂತ್ರಿ 'ಡಿ.ಕೆ. ಶಿವಕುಮಾರ್‌ಗೆ ಅಭಿನಂದನೆ ತಿಳಿಸಿದರು.

ಮುಂದಿನ ದಿನಗಳಲ್ಲಿ ಈ ವಿಭಾಗದಲ್ಲಿ ಬರುವ ಸಣ್ಣ–ಸಣ್ಣ ಕುಶಲಕರ್ಮಿಗಳ ಸಮುದಾಯಗಳಿಗೆ ಸರ್ಕಾರದಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ದೊರಕಿಸುವುದಾಗಿ ಸಹ ತಿಳಿಸಿದರು. ಅತೀ ಶೀಘ್ರದಲ್ಲಿ ಜಿಲ್ಲಾ ಮತ್ತು ನಗರ ಅಧ್ಯಕ್ಷರು ಪದಗ್ರಹಣ ಕಾರ್ಯಕ್ರಮವನ್ನು ಮಾಡುವುದಾಗಿ ತಿಳಿಸಿದರು.

ಮೈಸೂರು ಜಿಲ್ಲಾ ವಿಶ್ವಕರ್ಮ ಸಂಘದ ಜಿಲ್ಲಾಧ್ಯಕ್ಷ ರಿಷಿ ವಿಶ್ವಕರ್ಮ, ರಾಜ್ಯ ಒಬಿಸಿ ಕಾರ್ಯದರ್ಶಿ ಓ.ಮೊಗಣ್ಣಚಾರ್ ಅವರು ರಾಜ್ಯಾಧ್ಯಕ್ಷರಾದ ಆರ್.ಪ್ರಸನ್ನ ಕುಮಾರ್ ಅವರಿಗೆ ಹೂ ಗುಚ್ಛ ನೀಡಿ ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ವಸಂತ್ ಕುಮಾರ್, ಗಿರೀಶ್, ಅಲನಹಳ್ಳಿ ಸಿದ್ದಪ್ಪ, ಕಿರಣ್, ವಿವೇಕ್ ಬನ್ನೂರು ಸಿದ್ದರಾಜು, ಚೆಲುವರಾಜು , ನಂಜನಗೂಡು ವಿನಯ್, ಪಿರಿಯಾಪಟ್ಟಣ ಹಿರಣ್ಣಯ್ಯ, ತಿರು ನೀಲಕಂಠ, ಕೆ.ಆರ್.ನಗರ ಪುಟ್ಟಣ್ಣ, ಸರಗೂರು ಕೆಂಡಗಣ್ಣಸ್ವಾಮಿ, ಹೆಗ್ಗಡದೇವನಕೋಟೆ ಮೋಹನ್ ಕುಮಾರ್, ಯಡಿಯಾಲ ಪ್ರಕಾಶ್,ಮಹದೇವು, ಮಹದೇವ್ ಶೆಟ್ರು, ರಾಜು, ಪೈಂಟರ್ ಮಹದೇವ್, ಸಿದ್ದಪ್ಪಾಜಿ ಕೆಂಪಯ್ಯನ ಹುಂಡಿ ಲೋಕೇಶ್, ಕೆ.ಆರ್. ನಗರ ತೇಜಕುಮಾರ್ ಸಾಲಿಗ್ರಾಮದ ಪ್ರಸನ್ನ, ವರುಣ ಮಂಜು, ಕೃಷ್ಣಚಾರ್, ಜಯಪುರ ತಮ್ಮಣ್ಣಚಾರ್, ಮಂಟೇಸ್ವಾಮಿ ಹಾಗೂ ನಗರ ಮತ್ತು ಗ್ರಾಮಾಂತರ ವಿಭಾಗದ ಕುಶಲಕರ್ಮಿಗಳ ವಿಭಾಗದ ಎಲ್ಲಾ ಸಮುದಾಯಗಳ ಮುಖಂಡರು ಪಾಲ್ಗೊಂಡಿದ್ದರು.

## ಅಭಿನಂದನೆ


ಮಹಿಳಾ ಮತ್ತು ಮಕ್ಕಳ ಇಲಾಖೆಯ ಮೈಸೂರು ಜಿಲ್ಲೆಯ ಉಪ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಕೆ.ಜಿ.ಕೊಪ್ಪಲಿನ ಯಜಮಾನ ಆರ್.ರಾಮೇಗೌಡ ಅವರ ಪುತ್ರ ನಾಗರಾಜ್ ಆರ್. ಅವರನ್ನು ಕೆ.ಜಿ.ಕೊಪ್ಪಲಿನ ಬಿಸಿಲು ಮಾರಮ್ಮನವರ ಗುಡ್ಡಪ್ಪನವರಾದ ಡಿ.ನಿಂಗಪ್ಪ. ಎಲ್.ಚಂದ್ರು, ಕೋದಂಡರಾಮ, ಕೇಬಲ್ ಶೇಖರ್, ಶಿವಪ್ಪ ಅಭಿನಂದಿಸಿದರು.

# ಅಂತರ ರಾಷ್ಟ್ರೀಯ ಪ್ಯಾರಾ ಪಂದ್ಯಾವಳಿಗೆ ವಿಶೇಷಚೇತನ ಅಲೋಕ್ ಜೈನ್ ಆಯ್ಕೆ




ಮೈಸೂರು, ಜೂ. 8– ಸಾಧನೆ ಎಂಬುದಕ್ಕೆ ಯಾವುದೇ ಗಡಿ ಇಲ್ಲ ಎಂಬುದು ಎಷ್ಟು ಸತ್ಯವೋ ಅಷ್ಟೇ ಸತ್ಯ ಸಾಧನೆಗೆ ಯಾವುದೇ ಅಡ್ಡಿ ಇಲ್ಲ ಎಂಬುದನ್ನು ಮೈಸೂರಿನ ವಿಶೇಷ ಚೇತನ ಕ್ರೀಡಾ ಪಟು ಅಲೋಕ್ ಆರ್.ಜೈನ್ ಸಾಬೀತುಪಡಿಸಿ, ಮೈಸೂರಿನ ಕೀರ್ತಿ ಹೆಚ್ಚಿಸಿದ್ದಾರೆ.

ಸಿದ್ಧಾರ್ಥನಗರ ವಿಶೇಷಚೇತನರಾದ ಅಲೋಕ್ ಆರ್.ಜೈನ್ ಈಗ ಅಂತಾರಾಷ್ಟ್ರೀಯ ಪಂದ್ಯಾವಳಿಯಲ್ಲಿ ಭಾಗವಹಿಸಲು ಸಿದ್ಧತೆ ನಡೆಸಿದ್ದಾರೆ. ನೆದರ್‌ಲ್ಯಾಂಡ್ಸ್‌ನ ನಾರ್ವೆಯಲ್ಲಿ ಪೂಲ್ ಅಸೋಸಿಯೇಷನ್‌ನ 3ನೇ ಅಂತಾರಾಷ್ಟ್ರೀಯ ಪ್ಯಾರಾ ವಿಶೇಷಚೇತನರ ಹೇ ಬಾಲ್ ಪಂದ್ಯಾವಳಿಯಲ್ಲಿ ದೇಶದ ಮೂವರು ವಿಶೇಷಚೇತನ ಕ್ರೀಡಾ ಪಟುಗಳು ಭಾಗವಹಿಸಲು ಆಯ್ಕೆಯಾಗಿದ್ದಾರೆ. ಇದರಲ್ಲಿ ಮೈಸೂರಿನ ಅಲೋಕ್ ಸಹ ಒಬ್ಬರಾಗಿದ್ದು, ಕೆಎಂಪಿಕೆ ಟ್ರಸ್ಟ್ ಶುಭ ಹಾರೈಸಿತು.

ಈ ಕುರಿತು ಸಂತಸ ಹಂಚಿ ಕೊಂಡಿರುವ ಆಲೋಕ್ ಆರ್.ಜೈನ್, ವಿಕಲ ಚೇತನ ಎನ್ನುವುದು ಶಾಪವಲ್ಲ. ಅದು ನಮ್ಮಲ್ಲಿರುವ ಪ್ರತಿಭೆಯ ಅನಾವರಣಕ್ಕೆ ಒಂದು ಉತ್ತಮ ಅವಕಾಶ ಎಂದು ಭಾವಿಸಬೇಕು. ಗುರಿ ತಲುಪಲು ಆಸೆ ಇದ್ದರೆ ಸಾಲದು. ಆಸಕ್ತಿ, ನಿರಂತರ ಅಭ್ಯಾಸ, ಏಕಾಗ್ರತೆ ಮುಖ್ಯವಾಗಲಿದೆ. ವಿಶೇಷ ಚೇತನರೂ ಅಂತಾರಾಷ್ಟ್ರೀಯ ಕ್ರೀಡೆ, ಪಂದ್ಯಾವಳಿಯಲ್ಲಿ ಹೆಚ್ಚಾಗಿ ಭಾಗ ವಹಿಸಲು ಸರ್ಕಾರದ ಸಹಕಾರ ಅತ್ಯಗತ್ಯ. ಆಗ ವಿಶೇಷಚೇತನರಿಗೆ ನಿಜಕ್ಕೂ ಧೈರ್ಯ ತುಂಬಿದಂತೆ ಆಗಲಿದೆ ಎಂದರು. ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಸಂದೇಶ್,ಅಮಿತ್, ಚೇತನ್, ಸುಹಾಸ್, ರಿತೇಶ್, ಯಶವಂತ್, ವಿಶಾಲ್, ಅರ್ಜುನ್, ನಿಶಾಂತ್ ಇನ್ನಿತರರು ಉಪಸ್ಥಿತರಿದ್ದರು.

## ‘ತಂದೆ ತಾಯಿ ನನ್ನ ಭೂಮಿ’ ಭಿತ್ತಿಚಿತ್ರ ಬಿಡುಗಡೆ; ಪರಿಸರ ಸಂರಕ್ಷಣಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಜೂ.8–ಚಿಗುರು ಸಾಹಿತ್ಯ ಬಳಗ, ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಜೂ.9 ಮಧ್ಯಾಹ್ನ 12 ಗಂಟೆಗೆ ಪರಿಸರ ದಿನಾಚರಣೆ ಅಂಗವಾಗಿ ನನ್ನ ತಂದೆ ತಾಯಿ ನನ್ನ ಭೂಮಿ ಈ ಸಾಲಿನ ಘೋಷ ವಾಕ್ಯದ ಭಿತ್ತಿಚಿತ್ರ ಬಿಡುಗಡೆ ಹಾಗೂ ಪರಿಸರ ಸಂರಕ್ಷಣಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸುವರು. ಹಿರಿಯ ಸಮಾಜ ಸೇವಕ ಡಾ. ಕೆ.ರಘುರಾಂ ವಾಜಪೇಯಿ ಭಿತ್ತಿಚಿತ್ರ ಬಿಡುಗಡೆ ಮಾಡುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಲೇಖಕಿ ಬಿ.ಕೆ.ಲೋಲಾಕ್ಷಿ ಪ್ರಶಸ್ತಿ ಪ್ರದಾನ ಮಾಡುವರು. ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ



ಡಾ.ಶರತ್‌ಕುಮಾರ್



ಡಾ.ನಾಗರಾಜ್ ಬೈರಿ

ದೇವಸ್ಥಾನದ ಸಿಇಓ ಕೆ.ಆರ್. ಯೋಗಾ ನರಸಿಂಹನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಂತರ ರಾಷ್ಟ್ರೀಯ ಗರ್ಭ ಧಾರಣಾ ತಜ್ಞ ಡಾ. ಸಿ.ಶರತ್‌ಕುಮಾರ್ ಮತ್ತು ಕರ್ನಾಟಕ ಸುಗಮ ಸಂಗೀತ ಪರಿಷತ್, ಮೈಸೂರು ಘಟಕದ ಅಧ್ಯಕ್ಷ ಡಾ.ನಾಗರಾಜ್ ವಿ.ಬೈರಿ ಅವರಿಗೆ ಪರಿಸರ ಸಂರಕ್ಷಣಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈ ವೇಳೆ ಚಿಗುರು ಸಾಹಿತ್ಯ ಬಳಗದ ಅಧ್ಯಕ್ಷ ಎನ್.ಅನಂತ, ಕಾರ್ಯದರ್ಶಿ ನಾಗೇಂದ್ರ ಹೆಬ್ಬಾರ್, ಫೌಂಡೇಷನ್ ಅಧ್ಯಕ್ಷ ನಾಗೇಂದ್ರ ಬಾಬು ಉಪಸ್ಥಿತರಿರುವರು.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 8– ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕರ ಹಿತರಕ್ಷಣಾ ವೇದಿಕೆ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 85 ಅಂಕ ಪಡೆದಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಅಂಕ ಪಟ್ಟಿ ಪ್ರತಿ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪ್ರತಿಗಳನ್ನು ಅರ್ಜಿ ಜೊತೆಯಲ್ಲಿ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 7795761929, 9880246878 ಸಂಪರ್ಕಿಸಬಹುದು.



## ಆರೋಗ್ಯ ತಪಾಸಣೆ ಶಿಬಿರ

ವಾಯ್ಸ್ ಆಫ್ ಪೀಪಲ್ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಹಾಗೂ ವಾಯ್ಸ್ ಆಫ್ ಪೀಪಲ್ ಕನ್ನಡ ವಾರ ಪತ್ರಿಕೆ ಸಂಪಾದಕರಾದ ವಸಂತ್‌ರಾವ್ ಚವಾಣ್ ಹುಟ್ಟುಹಬ್ಬವನ್ನು ಜೂ.4ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ವೇಳೆ ಸಂಸ್ಥೆಯ ಪದಾಧಿಕಾರಿಗಳು, ಸರ್ವ ಸದಸ್ಯರು, ಹಿತೈಷಿಗಳು, ಅಭಿಮಾನಿಗಳು ಹಾಜರಿದ್ದರು.

**CHANGE OF NAME**

I, Divya K.C, W/O Manjunath L R/a No. 2373/3, Ist Cross, 5th Main, Jayanagar, Mysore-570014, Have changed My Name from Divya Manjunath to Divya K.C on My Own Free Will Infront of Notary Vishalakshamma on 21/05/2026 at Mysuru

Sd/- Divya K.C



**ಮೈಸೂರು ಮಿತ್ರ** 47

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





**ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ- ಆಪರೇಟಿವ್ ಮ್ಯಾನೇಜ್‌ಮೆಂಟ್**

ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು –4

kicmsahakarabhavana@gmail.com PH: 0821-2520563

ನಂ:ಕೆ.ಐ.ಸಿ.ಎಂಮೈ/ /2026–27 ದಿನಾಂಕ: 08–06–2026

**ಡಿಪ್ಲೊಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ (ಡಿ.ಸಿ.ಎಂ) ಕೋರ್ಸ್ ಸಹಕಾರ ತರಬೇತಿಗೆ ಅರ್ಜಿ ಆಹ್ವಾನ**

ಕೋರ್ಸ್ ಅವಧಿ: 6 ತಿಂಗಳು

- ದಿನಾಂಕ:01–07–2026 ರಿಂದ ತರಬೇತಿ ಪ್ರಾರಂಭವಾಗುವುದು
- ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಮೇಲ್ಪಟ್ಟು
- ಪ್ರವೇಶ ಪಡೆದ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಿಗೆ ಪ್ರತಿ ಮಾಹೆ ರೂ. 600/– ಹಾಗೂ ಇತರೆ ಎಲ್ಲಾ ಅಭ್ಯರ್ಥಿಗಳಿಗೆ ರೂ. 500/– ಶಿಷ್ಯವೇತನ ನೀಡಲಾಗುವುದು.
- ಈ ತರಬೇತಿ ಪಡೆದವರಿಗೆ ಸಹಕಾರ ಬ್ಯಾಂಕ್/ಸಹಕಾರ ಸಂಘ–ಸಂಸ್ಥೆಗಳಲ್ಲಿನ ಉದ್ಯೋಗ ನೇಮಕಾತಿಯಲ್ಲಿ ಆದ್ಯತೆ ಇರುತ್ತದೆ.
- ಉದ್ಯೋಗ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲಕರ
- ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಲು ಕೊನೆಯ ದಿನ 31–06–2026

ಸಹಿ/- ಪ್ರಾಂಶುಪಾಲರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

**0821-2520563 / 9902189872 / 9845918519, 9535250704 / 7353655908 / 9845695487**





## ಸಾರ್ವಜನಿಕ ಸೂಚನೆ

ಫಾರ್ಮ್ ನಂ. INC-26

[ಕಂಪನಿಗಳ (ನಿಗಮೀಕರಣ) ನಿಯಮಗಳು, 2014 ರ ನಿಯಮ 30 ಅನುಸಾರ]

ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಕಂಪನಿಯ ನೋಂದಾಯಿತ ಕಚೇರಿಯನ್ನು ಬದಲಾಯಿಸುವ ಕುರಿತು ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಜಾಹೀರಾತು ಕೇಂದ್ರ ಸರ್ಕಾರದ ಮುಂದೆ (ಪ್ರಾದೇಶಿಕ ನಿರ್ದೇಶಕರು, ದಕ್ಷಿಣ–ಪೂರ್ವ ಪ್ರದೇಶ) ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 13 ರ ಉಪವಿಭಾಗ (4) ಹಾಗೂ ಕಂಪನಿಗಳ (ನಿಗಮೀಕರಣ) ನಿಯಮಗಳು, 2014 ರ ನಿಯಮ 30 ರ ಉಪನಿಯಮ (5) ರ ಕ್ಲಾಜ್ (a) ಸಂಬಂಧಿಸಿದ ವಿಷಯದಲ್ಲಿ ಮತ್ತು **Serine Pharma Private Limited (CIN NO: U24304KA2022PTC160444)** ನೋಂದಾಯಿತ ಕಚೇರಿ ವಿಳಾಸ: **No.3836 Bh 16/1a, 3rd Main Road, Thilaknagara, Mysore, Mysuru, Karnataka-570021, India**

ಅರ್ಜಿದಾರರು

ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗುವುದು ಏನೆಂದರೆ, ಕಂಪನಿಯು ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 13 ಅನ್ವಯ, ತನ್ನ ಸ್ಮರಣಪತ್ರದಲ್ಲಿ ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರದ ಅನುಮೋದನೆ ಪಡೆಯಲು ಅರ್ಜಿ ಸಲ್ಲಿಸಲು ಉದ್ದೇಶಿಸಿದೆ. ಈ ತಿದ್ದುಪಡಿ, ಬುಧವಾರ, 20 ಮೇ 2026 ರಂದು ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾದ ವಿಶೇಷ ನಿರ್ಣಯದ ಪ್ರಕಾರ, ಕಂಪನಿಯ ನೋಂದಾಯಿತ ಕಚೇರಿಯನ್ನು ಕರ್ನಾಟಕ ರಾಜ್ಯದಿಂದ ತೆಲಂಗಾಣ ರಾಜ್ಯಕ್ಕೆ ವರ್ಗಾಯಿಸಲು ಉದ್ದೇಶಿಸಲಾಗಿದೆ.

ಕಂಪನಿಯ ನೋಂದಾಯಿತ ಕಚೇರಿಯ ಈ ಪ್ರಸ್ತಾವಿತ ಬದಲಾವಣೆಯಿಂದ ಯಾರಾದರೊಬ್ಬರ ಹಿತಾಸಕ್ತಿಗೆ ಪರಿಣಾಮ ಬೀಳುವ ಸಾಧ್ಯತೆ ಇದ್ದಲ್ಲಿ, ಅವರು ತಮ್ಮ ವಿರೋಧವನ್ನು (ಅಫಿಡವಿಟ್ ಸಹಿತ), ತಮ್ಮ ಹಿತಾಸಕ್ತಿಯ ಸ್ವರೂಪ ಹಾಗೂ ವಿರೋಧದ ಆಧಾರಗಳನ್ನು ಉಲ್ಲೇಖಿಸಿ, ಈ ಪ್ರಕಟಣೆಯ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ಕೆಳಗಿನ ವಿಳಾಸದಲ್ಲಿರುವ ಪ್ರಾದೇಶಿಕ ನಿರ್ದೇಶಕರಿಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಬಹುದು ಅಥವಾ ಸಲ್ಲಿಸಬಹುದು:

ಪ್ರಾದೇಶಿಕ ನಿರ್ದೇಶಕರು
3ನೇ ಮಹಡಿ, **Corporate Bhawan,**
**Bandlaguda, Nagole,**
**Hyderabad, Telangana - 500068**

ಅಥವಾ **MCA-21** ಪೋರ್ಟಲ್ (**www.mca.gov.in**) ನಲ್ಲಿ **Investor Complaint Form** ಸಲ್ಲಿಸುವ ಮೂಲಕವೂ ವಿರೋಧ ದಾಖಲಿಸಬಹುದು.

ಅದರ ಜೊತೆಗೆ, ಅರ್ಜಿದಾರ ಕಂಪನಿಯ ನೋಂದಾಯಿತ ಕಚೇರಿ ವಿಳಾಸಕ್ಕೂ ಪ್ರತಿಯನ್ನು ಕಳುಹಿಸಬೇಕು:

**No.3836 Bh 16/1A, 3rd Main Road, Thilaknagara, Mysore, Mysuru, Karnataka-570021**

ಇಮೇಲ್: **dr[dot]islambaharul[at]gmail[dot]com**

**Serine Pharma Private Limited** ಪರವಾಗಿ ಹಾಗೂ ಅದರ ಪರವಾಗಿ

**SHAHIDUL ISLAM**

ನಿರ್ದೇಶಕರು **DIN : 09583689**

ದಿನಾಂಕ : 02 ಜೂನ್ 2026

ಸ್ಥಳ : ಮೈಸೂರು



ಕರ್ನಾಟಕ ಸರ್ಕಾರ

ಕಾರ್ಯದರ್ಶಿಗಳ ಕಾರ್ಯಾಲಯ

## ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ದೂರವಾಣಿ: 08225–272128, ಫ್ಯಾಕ್ಸ್ ಸಂಖ್ಯೆ:08225–272123 Email: sec.mmtemple@gmail.com

ನಂ: ಶ್ರೀ ಮ.ಮ.ಕ್ಷೇತ್ರ.ಅ.ಪ್ರಾ/ಉಗ್ರಾಣ/5/ಪಿಆರ್/ /2026–27 ದಿನಾಂಕ: 04–06–2026

**ಇ–ಟೆಂಡರ್ ಪ್ರಕಟಣೆ (2ನೇ ಕರೆ)**

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

| ಕ್ರ.ಸಂ | ಟೆಂಡರ್ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ ಆವರಣದ ಎಲ್ಲಾ ವಸತಿ ಗೃಹಗಳ ನಿರ್ವಹಣೆಗೆ ಬೇಕಾದ ವಿದ್ಯುತ್ ಬಿಡಿ ಭಾಗಗಳ ಸಾಮಾಗ್ರಿಗಳನ್ನು 1 ವರ್ಷದ ಅವಧಿಗೆ ಸರಬರಾಜು ಮಾಡಲು ದರ, ಎಲ್ಲಾ ತೆರಿಗೆಗಳು ಸಾಗಾಣಿಕ ವೆಚ್ಚ ಸೇರಿ. | 50.00 | 125000–00 |
| 2 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ ಆವರಣದ ಎಲ್ಲಾ ವಸತಿ ಗೃಹಗಳ ನಿರ್ವಹಣೆಗೆ ಬೇಕಾದ ನೀರು ಸರಬರಾಜು ಸಾಮಾಗ್ರಿಗಳನ್ನು 1 ವರ್ಷದ ಅವಧಿಗೆ ಸರಬರಾಜು ಮಾಡಲು ದರ, ಎಲ್ಲಾ ತೆರಿಗೆಗಳು ಸಾಗಾಣಿಕೆ ವೆಚ್ಚ ಸೇರಿ. | 50.00 | 125000–00 |

ವಿವರಗಳನ್ನು https://kppp.karnataka.gov.in/ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ದಿನಾಂಕ: 18–06–2026 ರಂದು ಸಂಜೆ 5–00 ಗಂಟೆಯ ಒಳಗಾಗಿ ಪ್ರಾಧಿಕಾರದ ವಿಷಯ ನಿರ್ವಾಹಕರ ಮೊಬೈಲ್ ಸಂಖ್ಯೆ 8277244893 ನ್ನು ಸಂಪರ್ಕಿಸಬಹುದು.

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ

| | | |
|---|---|---|
| 1 | ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ | ದಿನಾಂಕ: 05–06–2026 ರ ನಂತರ |
| 2 | ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಕಾಲ | ದಿನಾಂಕ: 19–06–2026 ಸಂಜೆ 4.00 ಗಂಟೆವರೆಗೆ |
| 3 | ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ | ದಿನಾಂಕ: 20–06–2026 ಸಂಜೆ 4.00 ಗಂಟೆಯ ನಂತರ |

ಸಹಿ/– ಕಾರ್ಯದರ್ಶಿ
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,
ಮಹದೇಶ್ವರ ಬೆಟ್ಟ

ಸಂ:ವಾಸಾಸಂಇ:ಚಾ.ನಗರ:159:2026–27

ಸ್ಥಾಪನೆ : 1916 RBI License No. UBD KA 844P, Dt.28.01.1987

## ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ.,

ಶಾಖೆಗಳು: 1) ಉದಯಗಿರಿ 2) ರಾಜೀವ್‌ನಗರ 3) ಹುಣಸೂರು

ಮುಖ್ಯ ಶಾಖೆ: ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು–570001

**ನಿಯಮ ಸೆಕ್ಷನ್ 13(4) ರ ಅಡಿಯಲ್ಲಿ ನಿಯಮ 8(1) – ಪರಿಶಿಷ್ಟ IV**
**ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್**

ಕೆಳಸಹಿದಾರರು ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ [ನಿಯಮ, 2002 (2002ರ 54)] ರ ಅನ್ವಯ ಸೆಕ್ಷನ್ 13(12)ರ [ನಿಯಮ 3] ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ಸೆಕ್ಷನ್ 13(2) ರ ಅಡಿ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರು ಪಾವತಿ ಮಾಡಲು ವಿಫಲರಾಗಿದ್ದು ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳ ಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4) ಕಾಯಿದೆ ನಿಯಮ 8 ಮತ್ತು 9 ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕದಂದು ವಿವರಿಸಲಾಗಿರುವ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರುಗಳಿಗೆ, ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರೂ ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೆ ಆದರೆ ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಈ ಬ್ಯಾಂಕಿಗೆ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಕಾಯಿದೆ ಸೆಕ್ಷನ್ 13(8) ರ ನಿಬಂಧನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಮಯಕ್ಕೆ ತಮ್ಮ ಸ್ವತ್ತುಗಳನ್ನು ಪಡೆದುಕೊಳ್ಳಲು ಸಾಲಗಾರರ ಗಮನಕ್ಕೂ ತರಲಾಗಿದೆ.

| ಕ್ರಮ ಸಂಖ್ಯೆ | ಸಾಲಗಾರರು ಮತ್ತು ಜಾಮೀನುದಾರರ ಹೆಸರು | ಸ್ಥಿರಾಸ್ತಿ ವಿವರ | ಡಿಮ್ಯಾಂಡ್ ನೋಟೀಸ್ ದಿನಾಂಕ | ಸ್ವಾಧೀನಪಡಿಸಿ ಕೊಂಡಿರುವ ದಿನಾಂಕ | ಬಾಕಿ ಇರುವ ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 1. | ಶ್ರೀ ಸಲೀಂ ಖಾನ್ ಬಿನ್ ಲೇಟ್ ರಹೀಮ್ ಖಾನ್ ಮನೆ ನಂ. EWS-410, 2ನೇ ಸ್ಟೇಜ್, ಹುಡ್ಕೊ, ಬನ್ನಿಮಂಟಪ, ಮೈಸೂರು. | ಮೈಸೂರು ಸಿಟಿ, ಮಂಡಿ ಮೊಹಲ್ಲಾ, ಬನ್ನಿಮಂಟಪ ಎಕ್ಸ್‌ಟೆನ್‌ಶನ್, ಹುಡ್ಕೊ 2ನೇ ಸ್ಟೇಜ್, EWS ಮನೆ ನಂ.410. **ವಿಸ್ತೀರ್ಣ:** ಪೂರ್ವ–ಪಶ್ಚಿಮ: 20.00 ಅಡಿಗಳು ಮತ್ತು ಉತ್ತರ–ದಕ್ಷಿಣ: 20.00 ಅಡಿಗಳು. **ಚಕ್ಕುಬಂಧಿ:–** **ಪೂರ್ವಕ್ಕೆ:** EWS ಮನೆ ನಂ.411, **ಪಶ್ಚಿಮಕ್ಕೆ:** ಖಾಲಿ ನಿವೇಶನ, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** C.I.T.B. ನಿವೇಶನ. | 13.03.2026<br>ಎನ್‌ಪಿಎ ದಿನಾಂಕ 07.10.2024 | 03.06.2026 | ಖಾತೆ ಸಂಖ್ಯೆ ಹೆಚ್‌ಪಿ–9015 ರೂ.4,82,954/– + ದಿನಾಂಕ 11.03.2026 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |
| 2. | 1) ಶ್ರೀಮತಿ ಫಜೀಲ ಮೊಹಮ್ಮದಿ ಬಿನ್ ಮುನಾವರ್ ಅಹ್ಮದ್ 2) ಶ್ರೀ ಮೊಹಮ್ಮದ್ ಜಿಯಾ ಬಿನ್ ಇಕ್ಬಾಲ್ ಅಹ್ಮದ್ ಮನೆ ನಂ.621, ಬೀಡಿ ಕಾಮಿಕರ ಕಾಲೋನಿ, ಅಜೀಜ್ ಸೈಟ್ ನಗರ, ಮೈಸೂರು. | ಮೈಸೂರು ಸಿಟಿ, ನಜರ್‌ಬಾದ್ ಮೊಹಲ್ಲಾ, ಕ್ಯಾತಮಾರನಹಳ್ಳಿ ಎಕ್ಸ್‌ಟೆನ್‌ಶನ್, ಬೀಡಿ ಕಾರ್ಮಿಕರ ಕಾಲೋನಿ, ಅಜೀಜ್ ಸೈಟ್ ನಗರ, ಮನೆ ನಂ. LIG-621. **ವಿಸ್ತೀರ್ಣ:** ಪೂರ್ವ–ಪಶ್ಚಿಮ: 6.50 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 12.20 ಮೀಟರ್‌ಗಳು. **ಚಕ್ಕುಬಂಧಿ:–** **ಪೂರ್ವಕ್ಕೆ:** ಮನೆ ನಂ.620, **ಪಶ್ಚಿಮಕ್ಕೆ:** ಮನೆ ನಂ.622, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** ಮನೆ ನಂ.600. | 13.03.2026<br>ಎನ್‌ಪಿಎ ದಿನಾಂಕ 19.01.2026 | 03.06.2026 | ಖಾತೆ ಸಂಖ್ಯೆ ಹೆಚ್‌ಪಿ–9471 ರೂ.10,86,404/– + ದಿನಾಂಕ 11.03.2026 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |
| 3. | ಶ್ರೀಮತಿ ತಹೆರ ಬೀ (ದಿವಂಗತರಾಗಿರುವುದರಿಂದ) ಕೋಂ ಅಬ್ದುಲ್ ಬಶೀರ್ <u>ಕಾನೂನು ಉತ್ತರಾಧಿಕಾರಿಗಳು:</u> 1) ಶ್ರೀ ಫಯಾಜ್ ಅಹ್ಮದ್ ಬಿನ್ ಅಬ್ದುಲ್ ಬಶೀರ್ 2) ಶ್ರೀ ಅಯಾಜ್ ಅಹ್ಮದ್ ಬಿನ್ ಅಬ್ದುಲ್ ಬಶೀರ್ 3) ಶ್ರೀಮತಿ ಫರ್ಜಾನ ಬಾನು ಬಿನ್ ಅಬ್ದುಲ್ ಬಶೀರ್ ಮನೆ ನಂ.2634, ಕೆ.ಟಿ. ಸ್ಟ್ರೀಟ್, ಮಂಡಿ ಮೊಹಲ್ಲಾ, ಮೈಸೂರು. | ಮೈಸೂರು ಸಿಟಿ, ಮಂಡಿ ಮೊಹಲ್ಲಾ, ಮಾದರ್ ಸಾಬ್ ತಲೀಮ್ ಹತ್ತಿರ, ಮನೆ ನಂ.2634, ಹೊಸ ನಂ.304. **ವಿಸ್ತೀರ್ಣ:** ಪೂರ್ವ–ಪಶ್ಚಿಮ: 30½ ಅಡಿಗಳು ಮತ್ತು ಉತ್ತರ–ದಕ್ಷಿಣ: 20¾ ಅಡಿಗಳು. **ಚಕ್ಕುಬಂಧಿ:–** **ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಮನೆ ನಂ.2634 ರ ಉಳಿಕೆ ಭಾಗ, **ಉತ್ತರಕ್ಕೆ:** ಶೇಖ್ ಮೊಹಿದ್ದಿನ್ ಸಾಬ್ ರವರ ಸ್ವತ್ತು, **ದಕ್ಷಿಣಕ್ಕೆ:** ಲಾಲ್ ಖಾನ್ ರವರ ಸ್ವತ್ತು. | 13.03.2026<br>ಎನ್‌ಪಿಎ ದಿನಾಂಕ 09.01.2025 | 03.06.2026 | ಖಾತೆ ಸಂಖ್ಯೆ ಹೆಚ್‌ಪಿ–9003 ರೂ.4,81,223/– + ದಿನಾಂಕ 11.03.2026 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |
| 4. | 1) ಶ್ರೀ ಚಾಂದ್ ಪಾಷ ಬಿನ್ ಲೇಟ್ ಸೈಯದ್ ಮುನಾವರ್ 2) ಶ್ರೀ ಸೈಯದ್ ಫರ್ಹಾಜ್ ಪಾಷ ಬಿನ್ ಚಾಂದ್ ಪಾಷ ಮನೆ ನಂ.3144, ಕೆ.ಟಿ. ಸ್ಟ್ರೀಟ್, ಲಷ್ಕರ್ ಮೊಹಲ್ಲಾ, ಮೈಸೂರು. | <u>**ಭಾಗ–1:**</u> ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಎರೆಕಟ್ಟೆ ಸ್ಟ್ರೀಟ್, ಕಾರ್ಪೊರೇಶನ್ ಮನೆ ನಂ.2590, ಹೊಸ ನಂ. ಎಲ್–77/ಸಿ. **ವಿಸ್ತೀರ್ಣ:** **ಉತ್ತರದ ಭಾಗ:** ಪೂರ್ವ–ಪಶ್ಚಿಮ: 4.00 ಅಡಿಗಳು ಮತ್ತು ಉತ್ತರ–ದಕ್ಷಿಣ: 34.00 ಅಡಿಗಳು. **ದಕ್ಷಿಣದ ಕಡೆಗೆ:** ಪೂರ್ವ–ಪಶ್ಚಿಮ: 35.00 ಅಡಿಗಳು ಮತ್ತು ಉತ್ತರ–ದಕ್ಷಿಣ: 27.00 ಅಡಿಗಳು. **ಚಕ್ಕುಬಂಧಿ:–** **ಪೂರ್ವಕ್ಕೆ:** ಮೂಸಾಸ್ ರವರ ಸ್ವತ್ತು, **ಪಶ್ಚಿಮಕ್ಕೆ:** ಸಬಿಹ ಇತರರ ಸ್ವತ್ತು ಮತ್ತು ಸಲಾರ್ ಬೇಗ್ ಮತ್ತು ಅಫ್ಜಲ್ ರವರ ಸ್ವತ್ತು, **ಉತ್ತರಕ್ಕೆ:** ರಸ್ತೆ ಮತ್ತು ಸಬಿಹ ಇತರರ ಸ್ವತ್ತು, **ದಕ್ಷಿಣಕ್ಕೆ:** ಗಲ್ಲಿ. <u>**ಭಾಗ–2:**</u> ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಎರೆಕಟ್ಟೆ ಸ್ಟ್ರೀಟ್, ಕಾರ್ಪೊರೇಶನ್ ಮನೆ ನಂ.2592/2, ಹೊಸ ನಂ. ಎಲ್–76/2. **ವಿಸ್ತೀರ್ಣ:** ಪೂರ್ವ–ಪಶ್ಚಿಮ: 12.00 ಅಡಿಗಳು ಮತ್ತು ಉತ್ತರ–ದಕ್ಷಿಣ: 18.00 ಅಡಿಗಳು. **ಚಕ್ಕುಬಂಧಿ:–** **ಪೂರ್ವಕ್ಕೆ:** ಕನ್ಸರ್‌ವೆನ್ಸಿ, **ಪಶ್ಚಿಮಕ್ಕೆ:** ಮೂಸ ಮೊಹಮ್ಮದ್ ರವರ ಸ್ವತ್ತು, **ಉತ್ತರಕ್ಕೆ:** ಸೈಯದ್ ಮುಕ್ತಾರ್ ರವರ ಸ್ವತ್ತು, **ದಕ್ಷಿಣಕ್ಕೆ:** ಶೇಕ್ ಹಶಮ್ ರವರ ಸ್ವತ್ತು. | 09.03.2026<br>ಎನ್‌ಪಿಎ ದಿನಾಂಕ 18.07.2023 | 03.06.2026 | ಖಾತೆ ಸಂಖ್ಯೆ ಹೆಚ್‌ಪಿ–8842 ರೂ.34,90,074/– + ದಿನಾಂಕ 05.03.2026 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |

ದಿನಾಂಕ: 08.06.2026
ಸ್ಥಳ: ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು.